ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 107
ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)
ಉತ್ತರಿಸುವ ದಿನಾಂಕ : 15-12-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮೀಣ ಪ್ರದೇಶಗಳಲ್ಲಿ ಆಸ್ತಿ ಹಕ್ಕು ಪತ್ರಗಳನ್ನು ಇ-ಸ್ವತ್ತಾಗಿ ಪರಿವರ್ತನೆ ಮಾಡದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿಲ್ಲ. ಆದಾಗ್ಯೂ ವಿವಿಧ ವಸತಿ ಯೋಜನೆಯಡಿ ಮಂಜೂರಾತಿ ಆದೇಶ ಮತ್ತು ಹಕ್ಕುಪತ್ರವನ್ನು ಆಸ್ತಿಯ ಮಾಲೀಕರಿಂದ ಪಡೆದು ಇ-ಸ್ವತ್ತು ತಂತ್ರಾಂಶದ ಮೂಲಕ ಗ್ರಾಮ ಪಂಚಾಯತಿಯ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಡಿಜಿಟಲ್ ಸಹಿಯ ಮೂಲಕ ನಮೂನೆ-9 ಮತ್ತು 11ಎ ವಿತರಿಸಲು ಅವಕಾಶ ಕಲ್ಪಿಸಲಾಗಿದೆ.
(ಆ)	ಬಂದಿದ್ದಲ್ಲಿ, ಆಸ್ತಿ ಹಕ್ಕು ಪತ್ರಗಳನ್ನು ಈ ಸ್ವತ್ತಾಗಿ ಪರಿವರ್ತನೆ ಮಾಡಲು ಕೈಗೊಂಡ ಕ್ರಮಗಳೇನು? (ವಿವರ ನೀಡುವುದು)	

ಸಂಖ್ಯೆ. ಗ್ರಾಅಪ 409 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	223
ಮಾನ್ಯ ಸದಸ್ಯರ ಹೆಸರು	ಶ್ರೀ ಮಂಜುನಾಥ್ ಹೆಚ್.ಪಿ (ಹುಣಸೂರು)
ಉತ್ತರಿಸಬೇಕಾದ ದಿನಾಂಕ	15.12.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಎಷ್ಟು ವಿವಿಧ ಹಿಂದುಳಿದ ವರ್ಗಗಳ ಸಮುದಾಯಗಳ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ; ಈ ನಿಗಮಗಳು ಯಾವುವು; (ಮಾಹಿತಿ ಒದಗಿಸುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿಯಲ್ಲಿ ಈ ಕೆಳಕಂಡ ಅಭಿವೃದ್ಧಿ ನಿಗಮಗಳನ್ನು ಸ್ಥಾಪಿಸಲಾಗಿದೆ. 1. ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ 2. ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮ 3. ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ 4. ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ 5. ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ ನಿಯಮಿತ. 6. ಕರ್ನಾಟಕ ಆರ್ಯ ವೈಶ್ಯ ಸಮುದಾಯ ಅಭಿವೃದ್ಧಿ ನಿಗಮ (ಹಿಂದುಳಿದ ವರ್ಗಕ್ಕೆ ಸೇರಿರುವುದಿಲ್ಲ) 7. ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ 8. ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ 9. ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ 10. ಮರಾಠ ಅಭಿವೃದ್ಧಿ ನಿಗಮ 11. ಕಾಡುಗೊಲ್ಲ ಅಭಿವೃದ್ಧಿ ನಿಗಮ 12. ಒಕ್ಕಲಿಗ ಸಮುದಾಯ ಅಭಿವೃದ್ಧಿ ನಿಗಮ
ಆ)	ನಿಗಮಗಳಿಗೆ ಕಳೆದ ಹಾಗೂ ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾಗಿರುವ ಅನುದಾನವೆಷ್ಟು ಈ ನಿಗಮಗಳಿಂದ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ; (ನಿಗಮವಾರು ಮಾಹಿತಿ ಒದಗಿಸುವುದು)	ನಿಗಮಗಳಿಗೆ ಕಳೆದ ಹಾಗೂ ಪ್ರಸಕ್ತ ಸಾಲಿನಲ್ಲಿ ಹಂಚಿಕೆ ಮಾಡಲಾಗಿರುವ ಅನುದಾನದ ವಿವರ ಅನುಬಂಧ –1ರಲ್ಲಿ ನೀಡಿದೆ. ನಿಗಮಗಳಲ್ಲಿ ಹಮ್ಮಿಕೊಳ್ಳಲಾದ ಯೋಜನೆಗಳ ಮಾಹಿತಿಯನ್ನು ಅನುಬಂಧ – 2ರಲ್ಲಿ ನೀಡಿದೆ.
ಇ)	ಬಹುತೇಕ ಯೋಜನೆಗಳ ಅನುಷ್ಠಾನವನ್ನು ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯಿಂದ ಜಿಲ್ಲಾ ಮಟ್ಟದ ಆಯ್ಕೆ ಸಮಿತಿಗೆ ಅಧಿಕಾರ ಬದಲಾವಣೆ ಮಾಡಲು ಕಾರಣವೇನು; (ವಿವರ ನೀಡುವುದು)	ಕೆಲವೊಂದು ಸಮುದಾಯಗಳು ಎಲ್ಲಾ ಜಿಲ್ಲೆಗಳಲ್ಲಿ ಲಭ್ಯವಿಲ್ಲದೆ ಇರುವುದರಿಂದ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಆಯ್ಕೆ ಸಮಿತಿ ಮೂಲಕ ಕೆಲವೊಂದು ಯೋಜನೆಗಳ ಅನುಷ್ಠಾನ ಕೈಗೊಳ್ಳಲಾಗುತ್ತಿದೆ.
ಈ)	ಕಳೆದೆರಡು ವರ್ಷಗಳಿಂದ ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಹಾಗೂ ಇತರ ಸಮುದಾಯ ಅಭಿವೃದ್ಧಿ ನಿಗಮಗಳಡಿ ಅರ್ಜಿಗಳನ್ನು ಆಹ್ವಾನಿಸದೇ ಇರಲು ಕಾರಣವೇನು? (ಪೂರ್ಣ ವಿವರ ನೀಡುವುದು)	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ವಿವಿಧ ಯೋಜನೆಗಳಲ್ಲಿ 2019-2020 ನೇ ಸಾಲಿನಲ್ಲಿ ಅರ್ಜಿ ಆಹ್ವಾನಿಸಲಾಗಿದೆ. 2020-2021ನೇ ಸಾಲಿನಲ್ಲಿ ರೂ.80.00 ಕೋಟಿಗಳ ಅನುದಾನ ಒದಗಿಸಿದ್ದು, ಈ ಮೊತ್ತದಲ್ಲಿ ಕಳೆದ ಸಾಲಿನ ಗಂಗಾ ಕಲ್ಯಾಣ ಯೋಜನೆಯ ಆಯವ್ಯಯ ಕಡಿತ ರೂ.60.00 ಕೋಟಿಗಳನ್ನು ಹೊಂದಣಿಕೆ ಮಾಡಿಕೊಳ್ಳಲಾಗಿದೆ. ಹಾಗೂ ಅರಿವು ಶೈಕ್ಷಣಿಕ ಸಾಲ

ಯೋಜನೆಯಡಿ ಈಗಾಗಲೇ ಸಾಲ ಮಂಜೂರಾದ ವಿ[illegible] 2,3,4 ಮತ್ತು 5ನೇ ಸಾಲಿನ ಕಂತಿನ ಸಾಲದ ಮೊತ್ತ ಪಾ[illegible] ರೂ.17.50 ಕೋಟಿಗಳನ್ನು ಹಂಚಿಕೆ [illegible] ಅನುಷ್ಠಾನಗೊಳಿಸಲಾಗಿದೆ. ಆದ್ದರಿಂದ ಈ ಯೋಜನೆಯಲ್ಲಿ ಅ[illegible] ಆಹ್ವಾನಿಸಲಾಗಿರುವುದಿಲ್ಲ.

2020-2021ನೇ ಸಾಲಿನ ಆಯವ್ಯಯ ಘೋಷಣೆಯನ್ವಯ ವಾಣಿಜ್ಯ ಸಂಸ್ಥೆಯ ಉತ್ಪನ್ನಗಳನ್ನು ಮನೆ ಬಾಗಿಲಿಗೆ ತಲುಪಿಸಲು ಹಿಂದುಳಿದ ವರ್ಗಗಳ ಯುವಕರಿಗೆ ಬೈಕ್ ಖರೀದಿ ಯೋಜನೆಯ ಅನುಷ್ಠಾನಕ್ಕೆ ರೂ.2.50 ಕೋಟಿಗಳನ್ನು ಹಂಚಿಕೆ ಮಾಡಲಾಗಿದ್ದು, ಈ ಯೋಜನೆಯಡಿ ಅರ್ಜಿ ಆಹ್ವಾನಿಸಲಾಗಿರುತ್ತದೆ.

ಉಳಿದ ನಿಗಮಗಳಾದ ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮ ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಗಳು 2019-20ನೇ ಸಾಲಿನಲ್ಲಿ ಸ್ಥಾಪನೆಯಾಗಿದ್ದು, ಈ ವರ್ಷಾಂತ್ಯದಲ್ಲಿ ಆಯವ್ಯಯ ಒದಗಿಸಿರುವುದಿರಿಂದ 2020-21ನೇ ಸಾಲಿನಲ್ಲಿ ಯೋಜನೆಗಳ ಅನುಷ್ಠಾನಕ್ಕೆ ಅರ್ಜಿ ಆಹ್ವಾನಿಸಿ ಅನುಷ್ಠಾನಗೊಳಿಸಲಾಗಿದೆ.

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ

ಸರ್ಕಾರದಿಂದ ಬಿಡುಗಡೆಯಾದ ಅನುದಾನಕ್ಕೆ ಎದುರಾಗಿ 2019-20ನೇ ಸಾಲಿನಲ್ಲಿ ದಿನಾಂಕ 03.06.2019ರಂದು ಹಾಗೂ 2020-21ನೇ ಸಾಲಿನಲ್ಲಿ ದಿನಾಂಕ 02.08.2021ರಂದು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ

ಉಪ್ಪಾರ ಅಭಿವೃದ್ಧಿ ನಿಗಮದ ವತಿಯಿಂದ 2019-20ನೇ ಸಾಲಿನಲ್ಲಿ ಮೂರು ಯೋಜನೆಗಳಾದ ಸ್ವಯಂ ಉದ್ಯೋಗ ನೇರಸಾಲ ಯೋಜನೆ, ಅರಿವು ಶೈಕ್ಷಣಿಕ ಸಾಲ ಯೋಜನೆ ಹಾಗೂ ಗಂಗಾ ಕಲ್ಯಾಣ ಯೋಜನೆಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

2020-21ನೇ ಸಾಲಿನಲ್ಲಿ ಎರಡು ಯೋಜನೆಗಳಾದ ಸ್ವಯಂ ಉದ್ಯೋಗ ನೇರಸಾಲ ಯೋಜನೆ ಹಾಗೂ ಅರಿವು ಶೈಕ್ಷಣಿಕ ಸಾಲ ಯೋಜನೆಗಳಿಗೆ ದಿನಾಂಕ:24.06.2020 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿರುತ್ತದೆ.

2021-22ನೇ ಸಾಲಿನಲ್ಲಿ ಸ್ವಯಂ ಉದ್ಯೋಗ ನೇರಸಾಲ ಯೋಜನೆಗೆ ಹಾಗೂ ಅರಿವು ನವೀಕರಣ ವಿದ್ಯಾರ್ಥಿಗಳಿಗೆ ದಿನಾಂಕ:26.11.2021 ರಂದು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕರ್ನಾಟಕ ವಿಶ್ವಕರ್ಮ ಅಭಿವೃದ್ಧಿ ನಿಗಮ

2019-20ನೇ ಸಾಲಿಗೆ ನಿಗಮದಿಂದ 07 ಯೋಜನೆಗಳ ಅನುಷ್ಠಾನಕ್ಕಾಗಿ ದಿನಾಂಕ: 10.06.2019ರಂದು ಹಾಗೂ
2020-21ನೇ ಸಾಲಿಗೆ ನಿಗಮದಿಂದ 07 ದಿನಾಂಕ: 07.08.2020 ರಂದು ಫಲಾನುಭವಿಗಳಿಂದ ಅರ್ಜಿ ಆಹ್ವಾನಿಸಲಾಗಿರುತ್ತದೆ.

ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ

ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮದಲ್ಲಿ ಯೋಜನೆಗಳು ಅಳವಡಿಕೆಯಾಗಿರದ ಕಾರಣ ಅರ್ಜಿಗಳನ್ನು ಆಹ್ವಾನಿಸಲಾಗಿರುವುದಿಲ್ಲ.

ಅನುಬಂಧ-1

(ಕೋಟಿ.ರೂ.ಗಳಲ್ಲಿ)

ಕ್ರ. ಸಂ	ನಿಗಮದ ಹೆಸರು	ಲೆಕ್ಕ ಶೀರ್ಷಿಕೆ	ಕಳೆದ ಸಾಲು	ಪ್ರಸಕ್ತ ಸಾಲು
			2020-21	2021-22
1.	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ	ಸಹಾಯಧನ 2225-03-190-0-04	80.00	60.00
2.	ಕರ್ನಾಟಕ ಅಲೆಮಾರಿ /ಅರೆ ಅಲೆಮಾರಿ ಅಭಿವೃದ್ಧಿ ನಿಗಮ	ಸಹಾಯಧನ 2225-03-001-0-05	25.00	5.00
		ಷೇರು ಬಂಡವಾಳ 4225-03 -190-0-06-211	0.29	0.29
3.	ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ	ಸಹಾಯಧನ 2225-03-001-0-05	2.00	5.00
4.	ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ	ಸಹಾಯಧನ 2225-03-001-0-05	25.00	5.00
5.	ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ	ಸಹಾಯಧನ	15.00	10.00
		ಷೇರು ಬಂಡವಾಳ	2.00	0.75

6.	ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ	ಅನುದಾನ	5.00	5.00
7.	ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ	ಅನುದಾನ	8.00	5.29
8.	ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ	ಅನುದಾನ	10.00	10.00
9.	ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ	ಅನುದಾನ	100.00	-

ಅನುಬಂಧ-2

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

- ಚೈತನ್ಯ ಸಹಾಯಧನ ಯೋಜನೆ.
- ಡಿ.ದೇವರಾಜ ಅರಸು ಸ್ವಯಂ ಉದ್ಯೋಗ ಸಾಲ ಯೋಜನೆ.
- ಕಿರುಸಾಲ ಯೋಜನೆ.
- ಅರಿವು ಶೈಕ್ಷಣಿಕ ಸಾಲ ಯೋಜನೆ.
- ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ಬಡ್ಡಿ ರಹಿತ ಸಾಲ.
- ಸಾಂಪ್ರದಾಯಿಕ ವೃತ್ತಿದಾರರ ಮತ್ತು ಕುಶಲ ಕರ್ಮಿಗಳಿಗೆ ಆರ್ಥಿಕ ನೆರವು.
- ಗಂಗಾ ಕಲ್ಯಾಣ ನೀರಾವರಿ ಯೋಜನೆ.

ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ

- ಸ್ವಯಂ ಉದ್ಯೋಗ ಸಾಲ ಯೋಜನೆ.
- ಸ್ವ-ಸಹಾಯ ಗುಂಪುಗಳ ಸಾಲ ಮತ್ತು ಉದ್ಯೋಗ ಸಾಲ ಯೋಜನೆ.
- ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ.
- ಅರಿವು ಶೈಕ್ಷಣಿಕ ಸಾಲ ಯೋಜನೆ.
- ಭೂ ಖರೀದಿ ಯೋಜನೆ.
- ಗಂಗಾ ಕಲ್ಯಾಣ ನೀರಾವರಿ ಯೋಜನೆ.

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ

- ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ.
- ಸ್ವಯಂ ಉದ್ಯೋಗ ಸಾಲ ಯೋಜನೆ.

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ

- ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೊಜನೆ
- ಸ್ವಯಂ ಉದ್ಯೋಗ ಸಾಲ ಯೋಜನೆ
- ಸ್ವ ಸಹಾಯ ಗುಂಪುಗಳ ಮೂಲಕ ಸಾಲ ಮತ್ತು ಸಹಾಯಧನ ಯೋಜನೆ
- ಅರಿವು ಶೈಕ್ಷಣಿಕ ನವೀಕರಣ ಸಾಲ ಯೋಜನೆ

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ

- ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ(ಚೈತನ್ಯ ಸಬ್ಸಿಡಿ ಕಂ ಸಾಫ್ಟ್ ಲೋನ್ ಯೋಜನೆ)
- ಸ್ವಯಂ ಉದ್ಯೋಗ ಸಾಲ ಯೋಜನೆ
- ಕಿರು ಸಾಲ / ಸ್ವ-ಸಹಾಯ ಗುಂಪುಗಳಿಗೆ ಸಾಲ ಮತ್ತು ಸಹಾಯಧನ
- ಗಂಗಾ ಕಲ್ಯಾಣ ನೀರಾವರಿ ಯೋಜನೆ
- ಅರಿವು ಶೈಕ್ಷಣಿಕ ಯೋಜನೆ
- ಉದ್ಯಮಶೀಲತೆ/ಕೌಶಲ್ಯಾಭಿವೃದ್ಧಿ ಯೋಜನೆ

ಕರ್ನಾಟಕ ಆರ್ಯವೈಶ್ಯ ಸಮುದಾಯ ಅಭಿವೃದ್ಧಿ ನಿಗಮ

- ಸ್ವಯಂ ಉದ್ಯೋಗ ನೇರ ಸಾಲ ಯೋಜನೆ
- ಅರಿವು ಶೈಕ್ಷಣಿಕ ಸಾಲ ಯೋಜನೆ

ಕರ್ನಾಟಕ ವಿಶ್ವಕರ್ಮ ಸಮುದಾಯಗಳ ಅಭಿವೃದ್ಧಿ ನಿಗಮ

- ಪಂಚವೃತ್ತಿ ಅಭಿವೃದ್ಧಿಗಾಗಿ ಆರ್ಥಿಕ ನೆರವು ಯೋಜನೆ.
- ಸ್ವಯಂ ಉದ್ಯೋಗ ನೇರ ಸಾಲ ಯೋಜನೆ.
- ಸ್ವಯಂ ಉದ್ಯೋಗ ಸಾಲ ಯೋಜನೆ.(ಬ್ಯಾಂಕ್‌ಗಳ ಸಹಯೋಗದೊಂದಿಗೆ)
- ಅರಿವು-ಶೈಕ್ಷಣಿಕ ಸಾಲ ಯೋಜನೆ.
- ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಯೋಜನೆ.
- ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ.
- ವೃತ್ತಿಪರ ಕುಶಲಕರ್ಮಿಗಳಾದ ಕಮ್ಮಾರ, ಅಕ್ಕಸಾಲಿ ಮತ್ತು ಬಡಗಿ ವೃತ್ತಿದಾರರಿಗೆ ಕೌಶಲ್ಯ ತರಬೇತಿ ಮತ್ತು ಸಾಲ ಯೋಜನೆ.

ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮ

- ಕರ್ನಾಟಕ ವೀರಶೈವ ಲಿಂಗಾಯಿತ ಅಭಿವೃದ್ಧಿ ನಿಗಮಕ್ಕೆ ಯೋಜನೆಗಳನ್ನು ಅಳವಡಿಸುವ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ.

ಕರ್ನಾಟಕ ವಿಧಾನ ಸಭೆ

15ನೇ ವಿಧಾನಸಭೆ

11ನೇ ಅಧಿವೇಶನ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 224

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ(ಹುಣಸೂರು)

ಉತ್ತರಿಸುವ ದಿನಾಂಕ : 15-12-2021.

ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ. ಸಂ.	ಪ್ರಶ್ನೆಗಳು	ಉತ್ತರ
(ಅ)	ಕರ್ನಾಟಕ ರಾಜ್ಯದಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಮುಂದೂಡಲು ಕಾರಣವೇನು ಹಾಗೂ ಪಂಚಾಯತ್ ರಾಜ್ ಅಧಿನಿಯಮದ ಯಾವ ಸೆಕ್ಷನ್ ಅನ್ವಯ ಮುಂದೂಡಲಾಗಿದೆ. (ವಿವರ ಒದಗಿಸುವುದು)	ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳ ಅವಧಿಯು 2021ರ ಮೇ, ಜೂನ್ ತಿಂಗಳುಗಳಲ್ಲಿ ಮುಕ್ತಾಯಗೊಂಡಿತ್ತು. ರಾಜ್ಯದಲ್ಲಿ ಕೋವಿಡ್-19ರ ಸಾಂಕ್ರಾಮಿಕ ಪಿಡುಗನ್ನು ನಿಯಂತ್ರಿಸಲು ಮಾರ್ಗಸೂಚಿಗಳನ್ವಯ ಕ್ಷೇತ್ರಮಟ್ಟದ ಅಧಿಕಾರಿಗಳು ನಿರತರಾಗಿದ್ದ ಕಾರಣ ಚುನಾವಣಾ ಪ್ರಕ್ರಿಯೆಗಳನ್ನು ಪ್ರಾರಂಭಿಸಲು ಆಡಳಿತಾತ್ಮಕವಾಗಿ ಸಾಧ್ಯವಾಗಿರಲಿಲ್ಲ. ಈ ಕಾರಣದಿಂದ ಅವಧಿ ಮುಕ್ತಾಯವಾಗಿರುವ ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 212 ಜಿಪಸ 2021, ದಿನಾಂಕ:26-04-2021ರನ್ವಯ ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 321 ಹಾಗೂ 239ರಡಿ ಉಪಬಂಧದನ್ವಯ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿರುತ್ತದೆ.
(ಆ)	ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತ್ ಕ್ಷೇತ್ರ ಪುನರ್ ವಿಂಗಡಣೆ ಹಾಗೂ ಚುನಾವಣೆ ನಡೆಸುವ ಕಾರ್ಯವನ್ನು ಯಾವ ಕಾಯ್ದೆಯಡಿ ರಾಜ್ಯ ಚುನಾವಣಾ ಆಯೋಗದಿಂದ ರಾಜ್ಯಮಟ್ಟದ ಪುನರ್ ವಿಂಗಡಣಾ ಆಯೋಗ/ಸಮಿತಿಗೆ ವಹಿಸಲಾಗಿರುತ್ತದೆ;(ಮಾಹಿತಿ ಒದಗಿಸುವುದು)	ಕರ್ನಾಟಕ ಗ್ರಾಮ್ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 308ಕ್ಕೆ 2021ರಲ್ಲಿ ತಿದ್ದುಪಡಿ ಮಾಡಲಾಗಿರುತ್ತದೆ. ಈ ತಿದ್ದುಪಡಿಯನ್ವಯ ಹೊಸ ಪ್ರಕರಣ 308-ಇ, 308-ಎಫ್, 308-ಜಿ, 308-ಎಲ್ ಹಾಗೂ 308-ಎಂ ರಚಿಸಲಾಗಿದ್ದು, ಇವುಗಳ ಉಪಬಂಧದನ್ವಯ ಚುನಾವಣಾ ಕ್ಷೇತ್ರಗಳ ಸೀಮಾ ನಿರ್ಣಯದ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ಸೂಕ್ತ ಶಿಫಾರಸ್ಸು ವರದಿಯನ್ನು ಸಲ್ಲಿಸಲು ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪಂರಾ 319 ಜಿಪಸ 2021, ದಿನಾಂಕ:13-10-2021ರನ್ವಯ ಹೊಸದಾಗಿ ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ರಚಿಸಲಾಗಿರುತ್ತದೆ.

(ಇ)	ಪ್ರಸ್ತುತ ಪುನರ್ ವಿಂಗಡಣಾ ಕಾರ್ಯ ಯಾವ ಹಂತದಲ್ಲಿದೆ; ನಿಗಧಿತ ಅವಧಿಯೊಳಗೆ ಪಂಚಾಯತ್ ರಾಜ್ ಸಂಸ್ಥೆಗಳಿಗೆ ಚುನಾವಣೆ ನಡೆಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?(ಪೂರ್ಣ ವಿವರ ನೀಡುವುದು)	ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗವನ್ನು ದಿನಾಂಕ:13-10-2021ರಂದು ರಚಿಸಲಾಗಿರುತ್ತದೆ. ಈ ಆಯೋಗವು ಅಧ್ಯಕ್ಷರನ್ನು ಒಳಗೊಂಡಂತೆ ಇಬ್ಬರು ಸದಸ್ಯರನ್ನು ಹೊಂದಿರುತ್ತದೆ. ಆಯೋಗವು ಈಗಾಗಲೇ ಕಾರ್ಯಾರಂಭಗೊಂಡಿದ್ದು, ಜಿಲ್ಲಾಧಿಕಾರಿಗಳೊಡನೆ ವಿಡಿಯೋ ಸಂವಾದ ನಡೆಸಿರುತ್ತದೆ ಹಾಗೂ ಇಲಾಖೆಯ ಅಧಿಕಾರಿಗಳೊಡನೆ ಸಭೆಯನ್ನು ನಡೆಸಿರುತ್ತದೆ.

ಸಂಖ್ಯೆ: ಗ್ರಾಅಪಂರಾ 538 ಜಿಪಸ 2021

(ಕೆ.ಎಸ್.ಈಶ್ವರಪ್ಪ)

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 225

ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ವತಿಯಿಂದ ಕೋವಿಡ್ ಪೂರ್ವ ಹಾಗೂ ನಂತರ ಆಪರೇಟ್ ಮಾಡಲಾಗುತ್ತಿದ್ದ ಹಾಗೂ ಮಾಡಲಾಗುತ್ತಿರುವ ಬಸ್‌ಗಳು ಹಾಗೂ ರೂಟ್‌ಗಳ ಸಂಖ್ಯೆಯೆಷ್ಟು;	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ ವತಿಯಿಂದ ಮೈಸೂರು ಜಿಲ್ಲೆ ಹುಣಸೂರು ತಾಲ್ಲೂಕಿಗೆ ಕೋವಿಡ್ ಪೂರ್ವದಲ್ಲಿ 550 ಅನುಸೂಚಿಗಳಿಂದ (ಬಸ್ಸುಗಳಿಂದ) 1320 ಸುತ್ತುವಳಿಗಳಲ್ಲಿ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಕೋವಿಡ್ ಸೋಂಕು ಹರಡುವಿಕೆಯಿಂದ ಲಾಕ್‌ಡೌನ್ ಘೋಷಿಸಿದ್ದ ಹಿನ್ನೆಲೆಯಲ್ಲಿ ಸಾರಿಗೆಗಳ ಕಾರ್ಯಾಚರಣೆಯನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದ್ದು, ಲಾಕ್‌ಡೌನ್ ನಿರ್ಬಂಧನೆಗಳು ಸಡಿಲಗೊಂಡ ನಂತರ ಪ್ರಯಾಣಿಕರ ಲಭ್ಯತೆ/ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ. ಪ್ರಸ್ತುತ ಹುಣಸೂರು ತಾಲ್ಲೂಕಿಗೆ 540 ಅನುಸೂಚಿಗಳಿಂದ (ಬಸ್ಸುಗಳಿಂದ) 1280 ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿದೆ. ಕೋವಿಡ್-19ರ ಪೂರ್ವದಲ್ಲಿ ಹುಣಸೂರು ತಾಲ್ಲೂಕಿನ ಗ್ರಾಮಾಂತರ ಪ್ರದೇಶಗಳಿಗೆ 62 ಅನುಸೂಚಿಗಳಿಂದ (ಬಸ್ಸುಗಳಿಂದ) 514 ಸುತ್ತುವಳಿಗಳ ಸಾರಿಗೆ ಸೌಲಭ್ಯವನ್ನು ಕಲ್ಪಿಸಲಾಗಿತ್ತು. ಪ್ರಸ್ತುತ ಕೋವಿಡ್-19ರ ಕಾರಣದಿಂದಾಗಿ ವಿರಳ ಜನಸಂದಣಿ ಇರುವುದರಿಂದ 58 ಅನುಸೂಚಿಗಳಿಂದ (ಬಸ್ಸುಗಳಿಂದ) 486 ಸುತ್ತುವಳಿಗಳನ್ನು ಕಾರ್ಯಾಚರಣೆಗೊಳಿಸುತ್ತಿದ್ದು, ಕಲ್ಪಿಸಿರುವ ಸಾರಿಗೆ ಸೌಲಭ್ಯ ಅವಶ್ಯಕತೆಗೆ ಅನುಗುಣವಾಗಿದೆ.

ಆ.	ಕೋವಿಡ್ ನಂತರ ರೂಟ್‌ಗಳ ಸಂಖ್ಯೆಯನ್ನು ಇಳಿಮುಖ/ಕಡಿತಗೊಳಿಸಲು ಕಾರಣವೇನು;	ಲಾಕ್‌ಡೌನ್ ನಿರ್ಬಂಧನೆಗಳು ಸಡಿಲಗೊಂಡ ನಂತರ ವಿರಳ ಜನಸಂದಣಿಯಿರುವ ಮಾರ್ಗ/ಸುತ್ತುವಳಿಗಳನ್ನು ಕಡಿತಗೊಳಿಸಿ, ವಿದ್ಯಾರ್ಥಿಗಳ ಮತ್ತು ಸಾರ್ವಜನಿಕ ಪ್ರಯಾಣಿಕರ ಲಭ್ಯತೆ/ಅವಶ್ಯಕತೆಗೆ ಅನುಗುಣವಾಗಿ ಹಂತಹಂತವಾಗಿ ಸಾರಿಗೆಗಳ ಕಾರ್ಯಾಚರಣೆಯನ್ನು ಹೆಚ್ಚಿಸಿ ಕಾರ್ಯಾಚರಣೆ ಮಾಡಲಾಗುತ್ತಿದೆ.
ಇ.	ಪ್ರಸ್ತುತ ಶಾಲಾ ಹಾಗೂ ಕಾಲೇಜುಗಳನ್ನು ಪ್ರಾರಂಭಿಸಲಾಗಿದ್ದು, ಗ್ರಾಮೀಣ ಸಾರಿಗೆ ಸಂಪರ್ಕದ ಕೊರತೆಯಿಂದ ವಿದ್ಯಾರ್ಥಿಗಳು, ಸಾರ್ವಜನಿಕರು, ಉದ್ಯೋಗಸ್ಥರು ಹಾಗೂ ಕೂಲಿ ಕಾರ್ಮಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಈ.	ಬಂದಿದ್ದಲ್ಲಿ, ಈ ಬಗ್ಗೆ ಸಾರಿಗೆ ಸೌಲಭ್ಯ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣವಾದ ವಿವರ ನೀಡುವುದು)	

ಸಂಖ್ಯೆ: ಟಿಡಿ 248 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

227

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 226

ಸದಸ್ಯರ ಹೆಸರು : ಶ್ರೀ ಮಂಜುನಾಥ ಹೆಚ್.ಪಿ.

ಉತ್ತರಿಸುವ ದಿನಾಂಕ : 15-12-2021

ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
ಅ)	ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿಯಲ್ಲಿ 2018-19ನೇ ಸಾಲಿನಿಂದ ಮೈಸೂರು ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ಆಯ್ಕೆಗೊಂಡ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಗ್ರಾಮಗಳು ಯಾವುವು; ಅದಕ್ಕೆ ಬಿಡುಗಡೆಗೊಳಿಸಲಾಗಿರುವ ಇದುವರೆಗೂ ಖರ್ಚಾದ ಅನುದಾನವೆಷ್ಟು; (ವಿವರ ನೀಡುವುದು)	ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯಡಿ 2018-19ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ 42 ಗ್ರಾಮಗಳನ್ನು ಕೇಂದ್ರ ಸರ್ಕಾರದಿಂದ ಆಯ್ಕೆ ಮಾಡಲಾಗಿರುತ್ತದೆ. ಸದರಿ ಗ್ರಾಮಗಳಲ್ಲಿ ಸಮಗ್ರ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆ ಮಾಡಿರುವ ಮತ್ತು ವೆಚ್ಚ ಮಾಡಿರುವ ಅನುದಾನದ ವಿವರಗಳು ಈ ಕೆಳಕಂಡಂತಿದೆ.
ಆ)	ಸದರಿ ಯೋಜನೆಗೆ ಬಿಡುಗಡೆಗೊಂಡಿರುವ ಅನುದಾನದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲೆಷ್ಟು;	
ಇ)	ಆಯ್ಕೆಗೊಂಡ ಗ್ರಾಮಗಳಲ್ಲಿ ಯೋಜನೆಯ ಅನುಷ್ಠಾನ ಯಾವ ಹಂತದಲ್ಲಿವೆ (ಗ್ರಾಮವಾರು ವಿವರ ನೀಡುವುದು)	

ರೂ.ಲಕ್ಷಗಳಲ್ಲಿ

ಆಯ್ಕೆಯಾದ ಗ್ರಾಮಗಳ ಸಂಖ್ಯೆ	ಮಂಜೂರಾತಿ ಮೊತ್ತ	ಬಿಡುಗಡೆ ಮಾಡಿದ ಮೊತ್ತ			ವೆಚ್ಚ
		ಕೇಂದ್ರದ ಪಾಲು	ರಾಜ್ಯದ ಪಾಲು	ಒಟ್ಟು	
42	1567.00	203.50	100.00	303.50	208.37

ಮೇಲ್ಕಂಡಂತೆ ಆಯ್ಕೆಯಾಗಿರುವ ಗ್ರಾಮಗಳಲ್ಲಿ ಪ್ರಧಾನಮಂತ್ರಿ ಆದರ್ಶ ಗ್ರಾಮ ಯೋಜನೆಯ ಅನುಷ್ಠಾನದ ಗ್ರಾಮವಾರು ಪ್ರಗತಿ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಸಕಇ 614 ಎಸ್‌ಎಲ್‌ಪಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಮಂಜುನಾಥ.ಹೆಚ್.ಪಿ (ಹುಣಸೂರು) ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 226ಕ್ಕೆ ಅನುಬಂಧ.

2018-19 ನೇ ಸಾಲಿನಲ್ಲಿ ಮೈಸೂರು ಜಿಲ್ಲೆಯಲ್ಲಿ ಪ್ರಧಾನ ಮಂತ್ರಿ ಆದರ್ಶ ಗ್ರಾಮ ಯೋಜನೆಯಡಿಯಲ್ಲಿ ಆಯ್ಕೆಯಾದ ಗ್ರಾಮಗಳ ಪ್ರಗತಿ ವಿವರ.

ಕ್ರ.ಸಂ	ತಾಲ್ಲೂಕು	ಗ್ರಾಮ	ಆಯ್ಕೆಯಾದ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡಿರುವ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸಬೇಕಾದ ಕಾಮಗಾರಿಗಳ ಸಂಖ್ಯೆ
2018-19						
1	ಹೆಚ್.ಡಿ.ಕೋಟೆ	ಲಂಕೆ	3	0	3	0
2	ಹೆಚ್.ಡಿ.ಕೋಟೆ	ಹೆಗ್ಗನೂರು	6	0	6	0
3	ಹೆಚ್.ಡಿ.ಕೋಟೆ	ಹಾದನೂರು	3	0	3	0
4	ಹೆಚ್.ಡಿ.ಕೋಟೆ	ಜಕ್ಕಳ್ಳಿ	3	0	3	0
5	ತಿ.ನರಸೀಪುರ	ಟಿ.ಬೆಟ್ಟಹಳ್ಳಿ	4	0	4	0
6	ತಿ.ನರಸೀಪುರ	ಯಡದೊರೆ	2	0	1	1
7	ತಿ.ನರಸೀಪುರ	ಸೋಸಲೆ	4	0	4	0
8	ತಿ.ನರಸೀಪುರ	ಮಲಿಯೂರು	4	0	4	0
9	ನಂಜನಗೂಡು	ದೇವರಸನಹಳ್ಳಿ	3	0	2	1
10	ಮೈಸೂರು	ಎಸ್.ಕಲ್ಲಹಳ್ಳಿ	2	0	2	0
2019-20						
11	ಹೆಚ್.ಡಿ.ಕೋಟೆ	ಕೆಂಚನಹಳ್ಳಿ	7	0	7	0
12	ಹೆಚ್.ಡಿ.ಕೋಟೆ	ದೇವಲಾಪುರ	5	0	5	0
13	ನಂಜನಗೂಡು	ಕಲ್ಲುಂದ	3	0	3	0
14	ನಂಜನಗೂಡು	ಜೀಮಾರಳ್ಳಿ	4	0	4	0
15	ಟಿ.ನರಸೀಪುರ	ಮಾದ್ರಹಳ್ಳಿ	7	0	0	7
16	ಟಿ.ನರಸೀಪುರ	ಚೌಡಳ್ಳಿ	8	0	0	8
17	ಟಿ.ನರಸೀಪುರ	ವಡೆಯಾಂಡಹಳ್ಳಿ	6	0	0	6
18	ಟಿ.ನರಸೀಪುರ	ನೆರಗ್ಯಾತನಹಳ್ಳಿ	ಗ್ರಾಮದ ಹಾಗೂ ಮನೆಗಳ ಸಮೀಕ್ಷೆ ಕಾರ್ಯ ಮುಕ್ತಾಯಗೊಂಡಿದ್ದು, ಕ್ರಿಯಾ ಯೋಜನೆ ತಯಾರಿಸಲು ಕ್ರಮವಹಿಸಲಾಗುತ್ತಿದೆ.			
19	ಹುಣಸೂರು	ಅಸ್ವಾಳು	6	0	6	0
2020-21						
20	ಕೆ.ಆರ್.ನಗರ	ಹಂಗರಬಾಯನಹಳ್ಳಿ	ಗ್ರಾಮಗಳಲ್ಲಿನ ಮನೆಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಮುಕ್ತಾಯಗೊಂಡ ಕೂಡಲೇ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.			
21	ಕೆ.ಆರ್.ನಗರ	ನಿಜಗನಹಳ್ಳಿ				
22	ಸರಗೂರು	ಹಳೆಯೂರು				
23	ಸರಗೂರು	ಕುರ್ಣೆಗಾಲ				
24	ಸರಗೂರು	ಚಂಗೌಡನ ಹಳ್ಳಿ				
25	ಸರಗೂರು	ಹುಣಸಹಳ್ಳಿ				
26	ಸರಗೂರು	ಮುಗುತನಮೂಲೆ				
27	ಹೆಚ್.ಡಿ.ಕೋಟೆ	ಸಿದ್ದಾಪುರ				
28	ಹೆಚ್.ಡಿ.ಕೋಟೆ	ಅನಗಟ್ಟಿ				
29	ಹೆಚ್.ಡಿ.ಕೋಟೆ	ಜೊಂಪನಹಳ್ಳಿ				

30	ಹೆಚ್.ಡಿ.ಕೋಟೆ	ಹಿರೇನಂದಿ	ಗ್ರಾಮಗಳಲ್ಲಿನ ಮನೆಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಮುಕ್ತಾಯಗೊಂಡ ಕೂಡಲೇ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.
31	ಪಿರಿಯಾ ಪಟ್ಟಣ	ಎಂ,ಹೊಸಹಳ್ಳಿ	
32	ಪಿರಿಯಾ ಪಟ್ಟಣ	ಮರಡಿಯೂರು	
33	ಪಿರಿಯಾ ಪಟ್ಟಣ	ಆರ್.ಹೊಸಹಳ್ಳಿ	
34	ಪಿರಿಯಾ ಪಟ್ಟಣ	ಹನಿವಾಳು	
35	ತಿ.ನರಸೀಪುರ	ಹಸುವಟ್ಟಿ	
36	ತಿ.ನರಸೀಪುರ	ಕಳ್ಳಿಪುರ	
37	ತಿ.ನರಸೀಪುರ	ಚಂದಹಳ್ಳಿ	
38	ತಿ.ನರಸೀಪುರ	ಹೊಸಪುರ	
39	ನಂಜನಗೂಡು	ರಾಜೂರು	
40	ಹುಣಸೂರು	ಹಗರನಹಳ್ಳಿ	
41	ಹುಣಸೂರು	ದೊಡ್ಡಬೀಚನಹಳ್ಳಿ	
2021–22			
42	ಪಿರಿಯಾ ಪಟ್ಟಣ	ಅಳಲೂರು	ಗ್ರಾಮಗಳಲ್ಲಿನ ಮನೆಗಳ ಸಮೀಕ್ಷೆ ಕಾರ್ಯ ಪ್ರಗತಿಯಲ್ಲಿರುತ್ತದೆ. ಸದರಿ ಪ್ರಕ್ರಿಯೆ ಮುಕ್ತಾಯಗೊಂಡ ಕೂಡಲೇ ಕ್ರಿಯಾ ಯೋಜನೆ ತಯಾರಿಸಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**228**
ಮಾನ್ಯ ಸದಸ್ಯರ ಹೆಸರು	ಶ್ರೀ ಡಾ|| ಯತೀಂದ್ರ ಸಿದ್ದರಾಮಯ್ಯ(ವರುಣ)
ಉತ್ತರಿಸಬೇಕಾದ ದಿನಾಂಕ	15.12.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ಎಷ್ಟು ಸಮುದಾಯ ಭವನವನ್ನು ಮಂಜೂರು ಮಾಡಲಾಗಿದೆ; (ವರ್ಷವಾರು ಮತ್ತು ಜಿಲ್ಲಾವಾರು ವಿವಿರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಹಿಂದುಳಿದ ವರ್ಗಗಳ ಇಲಾಖೆಯಿಂದ ಮಂಜೂರಾಗಿರುವ ಸಮುದಾಯ ಭವನಗಳ ವರ್ಷವಾರು ಜಿಲ್ಲಾವಾರು ವಿವರವನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪ್‌ಲೋಡ್ ಮಾಡಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಸಮುದಾಯ ಭವನಗಳ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೇಯೇ; ಎಷ್ಟು ಪೂರ್ಣಗೊಂಡಿವೆ; ಎಷ್ಟು ಅಪೂರ್ಣಗೊಂಡಿವೆ; ಕಾಮಗಾರಿ ಬಾಕಿ ಇರಲು ಕಾರಣವೇನು;(ವಿವರ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಮಂಜೂರಾದ ಸಮುದಾಯ ಭವನ/ ವಿದ್ಯಾರ್ಥಿ ನಿಲಯಗಳ ಕಾಮಗಾರಿಗಳು ಪೂರ್ಣಗೊಂಡಿರುವ ಹಾಗೂ ಪ್ರಗತಿಯಲ್ಲಿರುವ ವಿವರಗಳನ್ನು ಇಲಾಖಾ ಜಾಲತಾಣ https://bcwd.karnataka.gov.in/ ದಲ್ಲಿ ಅಪ್‌ಲೋಡ್ ಮಾಡಲಾಗಿದೆ. 2020-21 ಮತ್ತು 2021-22ನೇ ಸಾಲಿನಲ್ಲಿ ಕೋವಿಡ್-19 ಕಾರಣದಿಂದ ಸದರಿ ಕಾರ್ಯಕ್ರಮಕ್ಕೆ ಅಯವ್ಯಯದಲ್ಲಿ ಕಡಿಮೆ ಅನುದಾನ ನಿಗದಿಯಾಗಿದ್ದು, ಅನುದಾನ ಕೊರತೆ ಇರುವ ಕಾರಣ ಸಂಘ-ಸಂಸ್ಥೆಗಳಿಗೆ ಬಾಕಿ ಅನುದಾನ ಬಿಡುಗಡೆಗೊಳಿಸಲು ಸಾಧ್ಯವಾಗಿರುವುದಿಲ್ಲ.

ಇ)	ವರುಣ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 2017-18 ನೇ ಸಾಲಿನಲ್ಲಿ ಮಂಜೂರಾದ ಸಮುದಾಯ ಭವನದ ಕಾಮಗಾರಿಗಳು ಅನುದಾನ ಕೊರತೆಯಿಂದ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈವರೆಗೆ ಅನುದಾನ ಬಿಡುಗಡೆ ಮಾಡದೇ ಇರಲು ಕಾರಣವೇನು; ಯಾವಾಗ ಬಾಕಿ ಇರುವ ಮೊತ್ತವನ್ನು ಬಿಡುಗಡೆ ಮಾಡಲಾಗುವುದು?(ವಿವರ ನೀಡುವುದು)	ವರುಣ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ 2017-18 ನೇ ಸಾಲಿನಲ್ಲಿ ಮಂಜೂರಾದ ಸಮುದಾಯ ಭವನಗಳ ಕಾಮಗಾರಿಗಳು ಪ್ರಗತಿಯಲ್ಲಿವೆ. ಸದರಿ ಭವನಗಳ ಕಾಮಗಾರಿಗಳಲ್ಲಿ ಈಗಾಗಲೇ ಮೊದಲನೇ ಮತ್ತು ಎರಡನೇ ಕಂತಿನ ಅನುದಾನ ಬಿಡುಗಡೆಯಾಗಿರುವ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹಣಬಳಕೆ ಪ್ರಮಾಣ ಮತ್ತು ಪ್ರಗತಿ ವರದಿ ಸ್ವೀಕೃತಿಯಾದ ನಂತರ ಬಾಕಿ ಅನುದಾನ ಬಿಡುಗಡೆಗೊಳಿಸುವ ಬಗ್ಗೆ ಪರಿಶೀಲಿಸಲಾಗುವುದು ಹಾಗೂ ಈಗಾಗಲೇ ಹಣಬಳಕೆ ಪ್ರಮಾಣ ಪತ್ರ ಮತ್ತು ಪ್ರಗತಿ ವರದಿಯನ್ನು ಸಲ್ಲಿಸಿರುವ ಸಂಘ ಸಂಸ್ಥೆಗಳಿಗೆ ಸದರಿ ಯೋಜನೆಯಡಿ ಲಭ್ಯವಾಗುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಯನ್ನಾಧರಿಸಿ ಬಾಕಿ ಅನುದಾನ ಬಿಡುಗಡೆಗೊಳಿಸಿ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು.

ಸಂಖ್ಯೆ: ಹಿಂವಕ 723 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	428
ಮಾನ್ಯ ಸದಸ್ಯರ ಹೆಸರು	ಶ್ರೀ ರೇವಣ್ಣ ಹೆಚ್.ಡಿ (ಹೊಳೆನರಸೀಪುರ)
ಉತ್ತರಿಸಬೇಕಾದ ದಿನಾಂಕ	15.12.2021
ಉತ್ತರಿಸುವ ಸಚಿವರು	ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆ ಶಾಂತಿಗ್ರಾಮ ಹೋಬಳಿ ಮೊಸಳೆಹೊಸಳ್ಳಿ ಗ್ರಾಮದಲ್ಲಿ 2019-20ನೇ ಸಾಲಿನಿಂದ ನೂತನವಾಗಿ ಸರ್ಕಾರಿ ಇಂಜಿನಿಯರಿಂಗ್ ಕಾಲೇಜು, ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜು ಹಾಗೂ ಕರ್ನಾಟಕ ಪಬ್ಲಿಕ್ ಶಾಲೆಗಳು ಆರಂಭವಾಗಿದ್ದು, ಮೊಸಳೆಹೊಸಳ್ಳಿ ಗ್ರಾಮದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಸರ್ಕಾರಿ ಐ.ಟಿ.ಐ ಕಾಲೇಜುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿದೆ
ಆ)	ಸದರಿ ಕಾಲೇಜುಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ದೂರದ ಗ್ರಾಮೀಣ ಪ್ರದೇಶಗಳಿಂದ ಬಂದಂತಹ ಹೆಣ್ಣು ಮಕ್ಕಳು ವ್ಯಾಸಂಗ ಮಾಡುತ್ತಿರುವುದರಿಂದ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಹೊಸದಾಗಿ ಮಂಜೂರು ಮಾಡುವುದು ಅವಶ್ಯಕವಾಗಿರುವುದನ್ನು ಸರ್ಕಾರ ಗಮನಿಸಿದೆಯೇ;	ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿ ಇದೆ.
ಇ)	ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಸಚಿವರ ಆಪ್ತ ಕಾರ್ಯದರ್ಶಿಗಳರವರ ನಿರ್ದೇಶನದ ಮೇರೆಗೆ ಮಾನ್ಯ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರುರವರು ತಮ್ಮ ಪತ್ರ ದಿನಾಂಕ 9.10.2017ರಲ್ಲಿ ಮಾನ್ಯ ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗಗಳ ಇಲಾಖೆ, ಹಾಸನ ರವರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಸೂಚಿಸಿರುವುದು ನಿಜವೇ; (ಸಂಪೂರ್ಣ ಮಾಹಿತಿ ನೀಡುವುದು)	ಹೌದು ಮೊಸಳೆಹೊಸಳ್ಳಿ ಗ್ರಾಮಕ್ಕೆ ಮೆಟ್ರಿಕ್-ನಂತರದ ಬಾಲಕಿಯರ ವಿದ್ಯಾರ್ಥಿನಿಲಯವನ್ನು ಮಂಜೂರು ಮಾಡುವ ಕುರಿತಂತೆ ಸ್ಥಳ ತಪಾಸಣಾ ವರದಿಯೊಂದಿಗೆ ಪ್ರಸ್ತಾವನೆಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ಇವರ ಮೂಲಕ ಕಳುಹಿಸಿಕೊಡಲು ಕೋರಲಾಗಿರುತ್ತದೆ.

ಈ)	ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಹಾಸನರವರು ತಮ್ಮ ಪತ್ರ ಸಂ.ಹಿಂವಕಇ/ಸಿಬ್ಬಂದಿ-7/ಸಿಆರ್-57/2017-18, ದಿನಾಂಕ 27.11.2017ರಲ್ಲಿ ಪ್ರಸ್ತಾವನೆಯನ್ನು ಅನುಬಂಧ-17, 17(1), 17(2) ಮತ್ತು 17(3)ರ ನಮೂನೆಗಳಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ರವರಿಗೆ ಕಳುಹಿಸಿರುವುದು ನಿಜವೇ; ಹಾಗಿದ್ದಲ್ಲಿ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಿ 03 ವರ್ಷಗಳು ಕಳೆದಿದ್ದರೂ ಸಹ ಹಾಸನ ತಾಲ್ಲೂಕು ಮೊಸಳೆಹೊಸಳ್ಳಿ ಗ್ರಾಮದಲ್ಲಿ ಬಾಲಕಿಯರ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯವನ್ನು ಇದುವರೆಗೂ ಮಂಜೂರು ಮಾಡದಿರುವುಕ್ಕೆ ಕಾರಣವೇನು;	ಹೌದು. ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್, ಹಾಸನ ರವರು ದಿನಾಂಕ 27.11.2017ರಲ್ಲಿ ಸಲ್ಲಿಸಿರುವ ಪ್ರಸ್ತಾವನೆಯನ್ನು ಆರ್ಥಿಕ ಇಲಾಖೆಯು ಪರಿಶೀಲಿಸಿ, ಮುಂದಿನ ಆರ್ಥಿಕ ವರ್ಷದಲ್ಲಿ ಆಯವ್ಯಯ ಒದಗಿಸಿಕೊಂಡು, ನಂತರದಲ್ಲಿ ಪ್ರಸ್ತಾವನೆ ಸಲ್ಲಿಸುವಂತೆ ಅಭಿಪ್ರಾಯಿಸಿರುವ ಹಿನ್ನಲೆಯಲ್ಲಿ ಸದರಿ ಪ್ರಸ್ತಾವನೆಯನ್ನು ಹಿಂದಿರುಗಿಸಲಾಗಿರುತ್ತದೆ. ಹಾಸನ ತಾಲ್ಲೂಕಿನ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಮೆಟ್ರಿಕ್-ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಮಂಜೂರಾತಿ ಕೋರಿ ದಿನಾಂಕ 22.9.2021ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರಿಂದ ಸ್ವೀಕೃತವಾಗಿರುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.
ಉ)	ಗ್ರಾಮೀಣ ಪ್ರದೇಶದ ಬಡಕುಟುಂಬದ ವಿದ್ಯಾರ್ಥಿನಿಯರ ವ್ಯಾಸಂಗಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸಂಪೂರ್ಣ ಮಾಹಿತಿ ನೀಡುವುದು)	ಗ್ರಾಮೀಣ ಭಾಗದ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ / ವಿದ್ಯಾರ್ಥಿನಿಯರ ಹಿತದೃಷ್ಟಿಯಿಂದ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿ ಅರ್ಜಿ ಸಲ್ಲಿಸಿ ಪ್ರವೇಶ ದೊರಕದ ಅರ್ಹ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪರ್ಯಾಯವಾಗಿ ಅನುದಾನದ ಲಭ್ಯತೆಯನುಸಾರ ವಿದ್ಯಾಸಿರಿ ಯೋಜನೆಯಡಿ ಪ್ರತಿ ವಿದ್ಯಾರ್ಥಿಗೆ ಪ್ರತಿ ಮಾಹೆ ರೂ.1500/- ರಂತೆ ಗರಿಷ್ಠ 10 ತಿಂಗಳಿಗೆ ರೂ.15,000/- ಗಳನ್ನು ಮಂಜೂರು ಮಾಡಲಾಗುತ್ತದೆ.
ಊ)	ಕಳೆದ ಬಾರಿ ಸದನದಲ್ಲಿ ಈ ಬಗ್ಗೆ ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಗಮನಸೆಳೆದ ಮೇರೆಗೆ ಸರ್ಕಾರದಿಂದ ಪರಿಷ್ಕೃತ ಅಂದಾಜು ಪಟ್ಟಿಗಳನ್ನು ಸಲ್ಲಿಸಲು ಇಲಾಖೆಗೆ ನಿರ್ದೇಶನ ನೀಡಿರುವುದು, ಈ ಮಧ್ಯ ಸಿದ್ಧಗೊಂಡ ಪ್ರಸ್ತಾವನೆಗಳು ಪ್ರಸ್ತುತ ಯಾವ ಹಂತದಲ್ಲಿವೆ;	ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಮೊಸಳೆಹೊಸಳ್ಳಿ ಗ್ರಾಮದಲ್ಲಿ ಮೆಟ್ರಿಕ್-ನಂತರದ ಬಾಲಕರ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳ ಮಂಜೂರಾತಿ ಕೋರಿ ದಿನಾಂಕ 22.9.2021ರಲ್ಲಿ ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಮತ್ತೊಮ್ಮೆ ಪ್ರಸ್ತಾವನೆಯು ಸ್ವೀಕೃತವಾಗಿದ್ದು, ಪರಿಶೀಲನೆಯಲ್ಲಿದೆ.

ಋ)	ಗ್ರಾಮೀಣ ಪ್ರದೇಶಗಳಿಂದ ಬಂದಂತಹ ಹೆಣ್ಣುಮಕ್ಕಳಿಗೆ ಉತ್ತಮ ವ್ಯಾಸಂಗದ ಹಿತದೃಷ್ಟಿಯಿಂದ ಹಾಸನ ತಾಲ್ಲೂಕು ಶಾಂತಿಗ್ರಾಮ ಹೋಬಳಿ ಮೊಸಳೆಹೊಸಳ್ಳಿ ಗ್ರಾಮದಲ್ಲಿ ಹೊಸದಾಗಿ ಬಾಲಕಿಯರ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯವನ್ನು ಯಾವ ಕಾಲಮಿತಿಯಲ್ಲಿ ಮಂಜೂರು ಮಾಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	ಹೊಸ ವಿದ್ಯಾರ್ಥಿನಿಲಯಗಳ ಮಂಜೂರಾತಿಯು ರಾಜ್ಯದ ಒಟ್ಟಾರೆ ಬೇಡಿಕೆ ಹಾಗೂ ಆಯಾ ಆರ್ಥಿಕ ವರ್ಷದಲ್ಲಿ ಒದಗಿಸಲಾಗುವ ಅನುದಾನದ ಲಭ್ಯತೆಯನ್ನು ಆಧರಿಸಿರುತ್ತದೆ.

ಸಂಖ್ಯೆ:ಹಿಂವಕ 734 ಬಿಂಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ



ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	229
ವಿಧಾನಸಭೆ ಸದಸ್ಯರ ಹೆಸರು	:	ಡಾ|| ಯತೀಂದ್ರ ಸಿದ್ದರಾಮಯ್ಯ
ಉತ್ತರಿಸುವ ದಿನಾಂಕ	:	15-12-2021
ಉತ್ತರಿಸುವ ಸಚಿವರು	:	ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ಸಮಾಜ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಿಂದ ವಿದ್ಯಾರ್ಥಿವೇತನ ಪಾವತಿಗೆ ಸ್ವೀಕರಿಸಿದ ಅರ್ಜಿಗಳೆಷ್ಟು; ಎಷ್ಟು ವಿದ್ಯಾರ್ಥಿಗಳಿಗೆ ಪಾವತಿಸಲಾಗಿದೆ; ಪಾವತಿ ಮಾಡಿದ ಅನುದಾನವೆಷ್ಟು; (ವರ್ಷವಾರು ವಿವರ ನೀಡುವುದು)	ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ಪರಿಶಿಷ್ಟ ಜಾತಿ ವಿದ್ಯಾರ್ಥಿಗಳನ್ನು ಶೈಕ್ಷಣಿಕವಾಗಿ ಉತ್ತೇಜಿಸುವ ಸಲುವಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ. ಕಳೆದ ಮೂರು ವರ್ಷಗಳಿಂದ 2018-19, 2019-20 ಮತ್ತು 2020-21ನೇ ಸಾಲಿನಲ್ಲಿ ವಿದ್ಯಾರ್ಥಿವೇತನ ಕಾರ್ಯಕ್ರಮಗಳಡಿ ಸ್ವೀಕರಿಸಿದ ಅರ್ಜಿಗಳ ವಿವರ ಮಂಜೂರು ಮಾಡಿದ ವಿವರ ಮತ್ತು ಪಾವತಿ ಮಾಡಿದ ಅನುದಾನದ ವಿವರ ಈ ಕೆಳಕಂಡಂತೆ ನೀಡಲಾಗಿದೆ.

ಕಾರ್ಯಕ್ರಮ	ವರ್ಷ	ಸ್ವೀಕರಿಸಿದ ಅರ್ಜಿಗಳು	ಮಂಜೂರು ಮಾಡಿದ ಅರ್ಜಿಗಳು	ಪಾವತಿ ಮಾಡಿದ ಅನುದಾನ (ರೂ. ಕೋಟಿಗಳಲ್ಲಿ)
ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ	2018-19	11,97,046	10,26,928	134.43
	2019-20	11,58,013	9,65,365	141.34
	2020-21	9,41,539	8,75,216	133.48
ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ	2018-19	3,48,491	3,33,759	425.70
	2019-20	3,48,701	3,42,925	454.69
	2020-21	3,20,777	2,48,833	227.36

2020-21ನೇ ಸಾಲಿನಲ್ಲಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನಕ್ಕೆ ದಿನಾಂಕ:08-01-2021 ರಿಂದ ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನಕ್ಕೆ ದಿನಾಂಕ:02-01-2021 ರಿಂದ ಇ-ಆಡಳಿತ ಇಲಾಖೆಯ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ ಮೂಲಕ ವಿದ್ಯಾರ್ಥಿಗಳಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಿರುವುದರಿಂದ, ಸದರಿ ಸಾಲಿನ ಅರ್ಜಿಗಳ ಮಂಜೂರಾತಿ ಪ್ರಕ್ರಿಯೆ ಇನ್ನೂ ಪ್ರಗತಿಯಲ್ಲಿರುತ್ತದೆ.

ಕ್ರ. ಸಂ.	ಪ್ರಶ್ನೆ	ಉತ್ತರ
ಆ)	2017-18ನೇ ಸಾಲಿನಲ್ಲಿ ಡಾ. ಬಿ.ಆರ್.ಅಂಬೇಡ್ಕರ್ ಭವನ, ಡಾ. ಬಾಬು ಜಗ ಜೀವನ್‌ರಾಮ್ ಭವನ ಕಾಮಗಾರಿಗಳಿಗೆ ಶೇ. 25ರಷ್ಟು ಅನುದಾನ	2017-18ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ರಾಜ್ಯದ 334 ಸ್ಥಳಗಳಲ್ಲಿ ಒಟ್ಟಾರೆ ರೂ.64.78 ಕೋಟಿಗಳ ಅಂದಾಜು ವೆಚ್ಚದಲ್ಲಿ ಡಾ|| ಬಿ.ಆರ್.ಅಂಬೇಡ್ಕರ್/ಡಾ|| ಬಾಬು ಜಗಜೀವನರಾಮ್ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲು ಮಂಜೂರಾತಿ ನೀಡಿ, ರೂ.44.65 ಕೋಟಿಗಳ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

	ಮಂಜೂರು ಮಾಡಲಾಗಿದೆಯೇ; ಬಾಕಿ ಇರುವ ಅನುದಾನ ಮಂಜೂರು ಮಾಡದ ಕಾರಣ ಕಾಮಗಾರಿ ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಯಾವ ಕ್ರಮ ಕ್ರಮ ತೆಗೆದುಕೊಂಡಿದೆ; ಬಾಕಿ ಅನುದಾನವನ್ನು ಯಾವಾಗ ಬಿಡುಗಡೆ ಮಾಡಲಾಗುವುದು? (ವಿವರ ನೀಡುವುದು)	334 ಭವನಗಳ ಪೈಕಿ 71 ಭವನಗಳ ಕಾಮಗಾರಿ ಪೂರ್ಣಗೊಂಡಿದ್ದು. 193 ಭವನಗಳ ಕಾಮಗಾರಿಗಳು ವಿವಿಧ ಹಂತದಲ್ಲಿ ಪ್ರಗತಿಯಲ್ಲಿರುತ್ತದೆ. 62 ಸ್ಥಳಗಳಲ್ಲಿ ಭವನಗಳ ನಿರ್ಮಾಣ ಸಂಬಂಧ ನಿವೇಶನ ಲಭ್ಯವಿದ್ದು ಕಾಮಗಾರಿ ಪ್ರಾರಂಭಿಸಬೇಕಿರುತ್ತದೆ. 06 ಸ್ಥಳಗಳಲ್ಲಿ ನಿವೇಶನ ಸಮಸ್ಯೆ ಇದ್ದು ಉಳಿದಂತೆ 02 ಸ್ಥಳಗಳಲ್ಲಿ ಗ್ರಾಮ/ನಿವೇಶನ ಗುರುತಿಸುವುದು ಬಾಕಿ ಇರುತ್ತದೆ. ಕಾಮಗಾರಿ ಪ್ರಗತಿಯಲ್ಲಿರುವ ಭವನಗಳ ಆರ್ಥಿಕ ಮತ್ತು ಭೌತಿಕ ಪ್ರಗತಿಯನ್ನಾಧರಿಸಿ ಅನುದಾನದ ಲಭ್ಯತೆಗೆ ಅನುಗುಣವಾಗಿ ಬಾಕಿ ಅನುದಾನ ಬಿಡುಗಡೆ ಮಾಡಿ, ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. ಅನುದಾನದ ಕೊರತೆಯಿಂದಾಗಿ ಯಾವುದೇ ಕಾಮಗಾರಿಗಳು ಅಪೂರ್ಣಗೊಂಡಿರುವುದಿಲ್ಲ.

ಸಕಇ 466 ಪಕವಿ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಮತ್ತು
ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	230 (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ವರ್ಗಾವಣೆಗೊಂಡಿರುವ)
2	ಸದಸ್ಯರ ಹೆಸರು	ಡಾ|| ಯತೀಂದ್ರ ಸಿದ್ದರಾಮಯ್ಯ (ವರುಣ)
3	ಉತ್ತರಿಸಬೇಕಾದ ದಿನಾಂಕ	15.12.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಜನಸಂಖ್ಯೆಯು ಹೆಚ್ಚಾದಂತೆ ಗ್ರಾಮಠಾಣಾ ಪರಿಮಿತಿಯನ್ನು ವಿಸ್ತರಿಸಲಾಗಿದೆಯೇ;	ಕೇಂದ್ರ ಸರ್ಕಾರದ ಸ್ವಾಮಿತ್ವ ಯೋಜನೆಯು ರಾಜ್ಯದಲ್ಲಿ ಕಂದಾಯ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಗಳು ಜಂಟಿ ಸಹಭಾಗಿತ್ವದಲ್ಲಿ ಪರಸ್ಪರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಯಾಗಿರುತ್ತದೆ. ಈ ಯೋಜನೆಯ ಮುಖ್ಯ ಉದ್ದೇಶವು ಗ್ರಾಮೀಣ ಜನವಸತಿ ಪ್ರದೇಶಕ್ಕೆ ಹಕ್ಕು ದಾಖಲೆಗಳ ಸಿದ್ಧಪಡಿಸಿ, ವಿತರಿಸುವುದಾಗಿರುತ್ತದೆ. ಈ ಯೋಜನೆಯಡಿಯಲ್ಲಿ ಜನವಸತಿ ಪ್ರದೇಶದ ಆಸ್ತಿಗಳನ್ನು ಭಾರತೀಯ ಸರ್ವೇಕ್ಷಣಾ ಸಂಸ್ಥೆ ಯಿಂದ ಡ್ರೋಣ್ ಸರ್ವೆ ಮೂಲಕ ಅಳತೆ ಮಾಡಿ ಪ್ರತಿ ಯೊಂದು ಆಸ್ತಿಗೂ ಅಂದರೇ ಗ್ರಾಮಠಾಣಾ ಒಳಗೆ ಮತ್ತು ಹೊರಗೆ (ವಿಸ್ತೃತ ಗ್ರಾಮಠಾಣ) ಬರುವ ಎಲ್ಲಾ ಆಸ್ತಿಗಳಿಗೆ ಕರಡು ಹಕ್ಕು ದಾಖಲೆಗಳನ್ನು ಸಿದ್ಧಪಡಿಸಿ, ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ. ಗ್ರಾಮಠಾಣಾ ಒಳಗೆ ಬರುವ ಆಸ್ತಿಗಳನ್ನು ಅಂತಿಮಗೊಳಿಸಲಾಗುತ್ತಿದೆ. ಇನ್ನು ಗ್ರಾಮ ಠಾಣಾ ಹೊರಗೆ (ವಿಸ್ತೃತ ಗ್ರಾಮಠಾಣ) ಬರುವ ಸರ್ವೆ ನಂಬರುಗಳಲ್ಲಿ ಬರುವ ಆಸ್ತಿಗಳಿಗೂ ಸಹಾ ಮಾಲೀಕತ್ವ ನಿರ್ಧರಿಸಿ ಹಕ್ಕುದಾಖಲೆಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಪ್ರತಿಯೊಂದು ಗ್ರಾಮಠಾಣ ವ್ಯಾಪ್ತಿಯನ್ನು ಸಹ ವಿಸ್ತರಿಸಲಾಗುವುದು.
ಆ)	2016ನೇ ಸಾಲಿನಲ್ಲಿ ಸರ್ಕಾರವು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಆಯಾ ಜಿಲ್ಲೆಗಳ ಗ್ರಾಮ ಪಂಚಾಯತಿಗಳ ಗ್ರಾಮಠಾಣಾ ವ್ಯಾಪ್ತಿಯನ್ನು ವಿಸ್ತರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಸ್ತುತ ಇರುವ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಠಾಣಾದ ಜೊತೆಗೆ ಗ್ರಾಮಗಳಲ್ಲಿ ಗ್ರಾಮಠಾಣಾಕ್ಕೆ ಹೊಂದಿಕೊಂಡಂತೆ ಗ್ರಾಮಗಳ ಬೆಳವಣಿಗೆಯಾಗಿದ್ದು, ಈ ಪ್ರದೇಶಗಳು ಗ್ರಾಮಠಾಣಾ ವ್ಯಾಪ್ತಿಗೆ ಒಳಪಡದಿರುವುದರಿಂದ ನಾಗರೀಕರು ಆಸ್ತಿಗಳಿಗೆ ಸಂಬಂಧಿಸಿದಂತೆ ಗ್ರಾಮ ಪಂಚಾಯತಿಗಳಿಂದ ನಮೂನೆ 9 ಮತ್ತು 11ಎ ಪಡೆಯಲು ತುಂಬಾ ಅನಾನುಕೂಲವಾಗಿರುವುದು ಗಮನಕ್ಕೆ ಬಂದ ಹಿನ್ನೆಲೆಯಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಗ್ರಾಮಗಳ ಗ್ರಾಮಠಾಣಾ ಗಡಿ ತುಂಬಾ ಹಿಂದೆ ನಿಗದಿಪಡಿಸಿದ್ದು, ಪ್ರಸ್ತುತ ವಿಸ್ತರಣೆಯಾಗಿರುವ ಪ್ರದೇಶ ಒಳಗೊಂಡಂತೆ ಹೊಸದಾಗಿ

		ಸರ್ವೆ ಮಾಡಿಸಿ ಗ್ರಾಮಠಾಣಾವನ್ನು ಪುನರ್ ನಿಗದಿಪಡಿಸುವ ಬಗ್ಗೆ ಕಂದಾಯ ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯಿಂದ ಜಂಟಿಯಾಗಿ ದಿನಾಂಕ: 28.10.2016 ರಂದು ಸುತ್ತೋಲೆ ಹೊರಡಿಸಲಾಗಿದೆ(ಪ್ರತಿ ಲಗತ್ತಿಸಿದೆ) ಸದರಿ ಸುತ್ತೋಲೆಯಲ್ಲಿ ಗ್ರಾಮಠಾಣಾ ವಿಸ್ತರಣೆ ಬಗ್ಗೆ ಪ್ರಸ್ತಾವನೆಯನ್ನು ಪರಿಶೀಲಿಸಿ ಸೂಕ್ತ ಆದೇಶ ಹೊರಡಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ.
ಇ)	ಎಷ್ಟು ಜಿಲ್ಲೆಗಳಲ್ಲಿ ಈ ಆದೇಶದಂತೆ ಸಭೆ ನಡೆಸಲಾಗಿದೆ, ಎಷ್ಟು ಗ್ರಾಮಗಳಲ್ಲಿ ಗ್ರಾಮಠಾಣ ವಿಸ್ತರಣೆ ಮಾಡಲಾಗಿದೆ, ಎಷ್ಟು ಬಾಕಿಯಿವೆ? (ಜಿಲ್ಲಾವಾರು/ ತಾಲ್ಲೂಕುವಾರು ವಿವರ ನೀಡುವುದು)	ಪ್ರಗತಿ ವಿವರವನ್ನು ಅನುಬಂಧದಲ್ಲಿ ನೀಡಿದೆ.

ಸಂಖ್ಯೆ: ಕಂಇ 196 ಎಸ್‌ಎಸ್‌ಸಿ 2021

(ಆರ್.ಅಶೋಕ)
ಕಂದಾಯ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 231

ಉತ್ತರಿಸಬೇಕಾದ ದಿನಾಂಕ : 15-12-2021

ಸದಸ್ಯರ ಹೆಸರು : ಶ್ರೀ ಎಸ್.ಎನ್. ನಾರಾಯಣಸ್ವಾಮಿ ಕೆ.ಎಂ. (ಬಂಗಾರಪೇಟೆ)

ಉತ್ತರಿಸಬೇಕಾದ ಸಚಿವರು : ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದಲ್ಲಿ ರೈತರಿಗೆ ಕೃಷಿ ಇಲಾಖೆಯಿಂದ ನೀಡಲಾಗುತ್ತಿರುವ ಸಹಾಯ ಧನದ (ಸಬ್ಸಿಡಿ) ಯೋಜನೆಗಳಾವುವು; (ವಿವರ ನೀಡುವುದು)	ರಾಜ್ಯದಲ್ಲಿ ರೈತರಿಗೆ ಕೃಷಿ ಇಲಾಖೆಯಿಂದ ನೀಡಲಾಗುತ್ತಿರುವ ಸಹಾಯಧನ (ಸಬ್ಸಿಡಿ) ಯೋಜನೆಗಳ ವಿವರವನ್ನು ಹಾಗೂ ರಿಯಾಯಿತಿ ಅನುಬಂಧ-1ರಲ್ಲಿ ಒದಗಿಸಿದೆ.
ಆ.	ಯಾವ ಯೋಜನೆಗಳಲ್ಲಿ ಯಾವ ರೀತಿಯ ರಿಯಾಯಿತಿ (ಸಬ್ಸಿಡಿ) ನೀಡಲಾಗುತ್ತಿದೆ? (ವಿವರ ನೀಡುವುದು)	ಜಲಾನಯನ ಅಭಿವೃದ್ಧಿ ಇಲಾಖೆಯಿಂದ ಕೇಂದ್ರ ಪುರಸ್ಕೃತ "ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನ-ಮಳೆಯಾಶ್ರಿತ ಪ್ರದೇಶ ಅಭಿವೃದ್ಧಿ" ಯೋಜನೆಯನ್ನು ಪ್ರಮುಖವಾಗಿ ಮಳೆಯಾಶ್ರಿತ ಪ್ರದೇಶದಲ್ಲಿ ವಿವಿಧ ಸಮಗ್ರ ಕೃಷಿ ಪದ್ಧತಿಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ರೈತರಿಗೆ ನೀಡಿ ಅನುಷ್ಠಾನಗೊಳಿಸಲಾಗುತ್ತಿದೆ. ಈ ಯೋಜನೆಯಡಿ ಮಾರ್ಗಸೂಚಿಯನ್ವಯ ವಿವಿಧ ಸಮಗ್ರ ಕೃಷಿ ಪದ್ಧತಿಗಳಾದ ತೋಟಗಾರಿಕೆ, ಪಶು ಸಂಗೋಪನೆ, ಹುಲ್ಲುಗಾವಲು, ಮರ ಆಧಾರಿತ ಕೃಷಿ ಪದ್ಧತಿಗಳಿಗೆ ಶೇ.50ರ ರಿಯಾಯಿತಿ (ಸಬ್ಸಿಡಿ) ಯಲ್ಲಿ ಮತ್ತು ಮೌಲ್ಯಾಧಾರಿತ ಚಟುವಟಿಕೆಯಾದ ಜೇನುಕೃಷಿಗೆ ಶೇ.40, ಸೈಲೇಜ್ ಘಟಕಕ್ಕೆ ಶೇ.100 ಮತ್ತು ಎರೆಹುಳು ತೊಟ್ಟಿ ನಿರ್ಮಾಣಕ್ಕೆ ಶೇ.50ರಷ್ಟು ಸಹಾಯಧನವನ್ನು ನೀಡಲಾಗುತ್ತಿದೆ.
ಇ.	ಕಳೆದ ಮೂರು ವರ್ಷಗಳಲ್ಲಿ ಬಂಗಾರಪೇಟೆ ತಾಲ್ಲೂಕಿನಾದ್ಯಂತ ಆಯ್ಕೆ ಮಾಡಲಾದ ಫಲಾನುಭವಿಗಳೆಷ್ಟು; (ಯೋಜನೆವಾರು ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ಬಂಗಾರಪೇಟೆ ತಾಲ್ಲೂಕಿನಾದ್ಯಂತ ಆಯ್ಕೆ ಮಾಡಲಾದ ಫಲಾನುಭವಿಗಳ ವಿವರವನ್ನು ಅನುಬಂಧ-2ರಲ್ಲಿ ಒದಗಿಸಿದೆ.

ಈ)	ಇತ್ತೀಚಿಗೆ ಬಿದ್ದ ಭಾರೀ ಮಳೆಯಿಂದ ಹಾನಿಯಾಗಿ ನಾಶವಾಗಿರುವ ಬೆಳೆಗಳಾದ ರಾಗಿ, ನೆಲಗಡಲೆ ಇನ್ನಿತರೆ ಬೆಳೆ ಪರಿಹಾರ ನಷ್ಟ ಪರಿಹಾರವಾಗಿ ಸರ್ಕಾರದಿಂದ ಎಷ್ಟು ಹಣ ಬಿಡುಗಡೆ ಮಾಡಲಾಗುವುದು?	ಬಂಗಾರಪೇಟೆ ತಾಲ್ಲೂಕಿನಲ್ಲಿ ಅತಿವೃಷ್ಟಿಯಿಂದಾಗಿ 9828 ಹೆಕ್ಟೇರ್ ಕೃಷಿ ಬೆಳೆ ಮತ್ತು 823 ಹೆಕ್ಟೇರ್ ತೋಟಗಾರಿಕೆ ಬೆಳೆಗಳು ಹಾನಿಯಾಗಿರುತ್ತವೆ. ಈಗಾಗಲೇ ಬೆಳೆ ಹಾನಿಯಾದ 1608 ರೈತರಿಗೆ SDRF/NDRF ಮಾರ್ಗಸೂಚಿಗಳ ಪ್ರಕಾರ ರೂ.70.53 ಲಕ್ಷ ಇನ್ ಪುಟ್ ಸಬ್ಸಿಡಿಯನ್ನು ರೈತರ ಬ್ಯಾಂಕ್ ಖಾತೆಗೆ ನೇರವಾಗಿ ಜಮಾ ಮಾಡಲಾಗಿದೆ. ಉಳಿದ ಅರ್ಹ ರೈತರಿಗೂ ಸಹ ಪರಿಹಾರವನ್ನು ಶೀಘ್ರವಾಗಿ ಒದಗಿಸಲು ಕ್ರಮವಹಿಸಲಾಗಿದೆ.

ಸಂಖ್ಯೆ: AGRI-AML/242/2021

(ಬಿ.ಸಿ. ಪಾಟೀಲ್)
ಕೃಷಿ ಸಚಿವರು

ಅನುಬಂಧ-1

ಕೃಷಿ ಇಲಾಖೆಯ ವತಿಯಿಂದ ಕೈಗೊಳ್ಳುತ್ತಿರುವ ವಿವಿಧ ಯೋಜನೆಗಳ ಹಾಗೂ ಸದರಿ ಯೋಜನೆಗಳಲ್ಲಿ ರೈತರಿಗೆ ನೀಡಲಾಗುತ್ತಿರುವ ಸಹಾಯಧನದ (ಸಬ್ಸಿಡಿ) ವಿವರಗಳು

ಕ್ರ. ಸಂ	ಫಲಾನುಭವಿ ಆಧಾರಿತ ಯೋಜನೆ/ ಕಾರ್ಯಕ್ರಮ	ವಿವರ
1.	ಬಿತ್ತನೆ ಬೀಜಗಳ ಪೂರೈಕೆ	ಈ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ. 50 ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75 ರ ರಿಯಾಯಿತಿ ದರದಲ್ಲಿ ವಿವಿಧ ಬೆಳೆಗಳ ಪ್ರಮಾಣಿತ/ ನಿಜ ಚೀಟಿ ಬಿತ್ತನೆ ಬೀಜಗಳನ್ನು ಒಟ್ಟಾರೆ ಗರಿಷ್ಠ 2.00 ಹೆಕ್ಟೇರ್ ಅಥವಾ ಅವರ ವಾಸ್ತವಿಕ ಹಿಡುವಳಿ (Actual holding) ಯಾವುದು ಕಡಿಮೆಯೋ ಆ ವಿಸ್ತೀರ್ಣಕ್ಕೆ ಮಾತ್ರ ವಿತರಣೆ ಮಾಡಲಾಗುತ್ತಿದೆ.
2.	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಬಿಮಾ ಯೋಜನೆ	ಈ ಯೋಜನೆಯಡಿ ಪ್ರಕೃತಿ ವಿಕೋಪಗಳು, ಕೀಟಗಳು ಮತ್ತು ರೋಗಗಳಿಂದಾಗಿ ಯಾವುದೇ ಅಧಿಸೂಚಿತ ಬೆಳೆ ವಿಫಲವಾದ ಪಕ್ಷದಲ್ಲಿ ರೈತರಿಗೆ ವಿಮಾ ರಕ್ಷಣೆ ಮತ್ತು ಹಣಕಾಸು ಬೆಂಬಲ ನೀಡಲಾಗುವುದು. ರೈತರಿಗೆ ನೀಡುವ ವಿಮಾ ಕಂತಿನ ರಿಯಾಯಿತಿಯಲ್ಲಿ ರಾಜ್ಯ ಸರ್ಕಾರದ ಪಾಲನ್ನು ನೀಡಿ ಬೆಳೆ ವಿಮಾ ನಷ್ಟ ಪರಿಹಾರವನ್ನು ಇತ್ಯರ್ಥಪಡಿಸಲು ಅನುವು ಮಾಡಲಾಗುವುದು.
3.	ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆ (PMKISAN)	ಭಾರತ ಸರ್ಕಾರದ ಪ್ರಧಾನ ಮಂತ್ರಿ ಕಿಸಾನ್ ಸಮ್ಮಾನ್ ನಿಧಿ ಯೋಜನೆಯಡಿ ಸಾಗುವಳಿ ಭೂಮಿ ಹೊಂದಿರುವ ಎಲ್ಲಾ ಅರ್ಹ ರೈತರಿಗೆ ವಾರ್ಷಿಕ ರೂ.6000/-ಗಳ ನಗದನ್ನು ರೂ.2000/-ಗಳಂತೆ ಮೂರು ಕಂತುಗಳಲ್ಲಿ ನೇರ ನಗದು ವರ್ಗಾವಣೆ ಮೂಲಕ ನಾಲ್ಕು ತಿಂಗಳಿಗೊಮ್ಮೆ ನೀಡಲಾಗುವುದು.
4.	ಸಾವಯವ ಕೃಷಿ	ಸಾವಯವ ಕೃಷಿ ಅಳವಡಿಕೆ ಮತ್ತು ದೃಡೀಕರಣ ಕಾರ್ಯಕ್ರಮದಡಿ ರಾಜ್ಯದ ಸಾವಯವ ಪ್ರಮಾಣೀಕೃತ ಪ್ರದೇಶವನ್ನು ವಿಸ್ತರಿಸುವ ನಿಟ್ಟಿನಲ್ಲಿ ಆಸಕ್ತ ಗುಂಪು ಮತ್ತು ವ್ಯಕ್ತಿಗತ ಪ್ರಸ್ತಾವನೆಗಳ ಪ್ರಮಾಣೀಕರಣಕ್ಕಾಗಿ ಅನುದಾನ ಬಳಕೆ ಮಾಡಲಾಗುತ್ತಿದೆ.
5.	ರೈತ ಸಿರಿ	ಸಿರಿಧಾನ್ಯಗಳಾದ ನವಣೆ, ಹಾರಕ, ಸಾಮೆ, ಕೊರಲೆ, ಊದಲು ಬೆಳೆಗಳನ್ನು ಬೆಳೆದ ಎಲ್ಲಾ ವರ್ಗದ ರೈತರಿಗೆ ಪ್ರತಿ ಹೆಕ್ಟೇರಿಗೆ ರೂ.10,000/-ದಂತೆ ಗರಿಷ್ಠ ಎರಡು ಹೆಕ್ಟೇರುಗಳಿಗೆ ಪ್ರೋತ್ಸಾಹಧನವನ್ನು ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ ಮೂಲಕ ನೀಡಲಾಗುವುದು. ಸಿರಿಧಾನ್ಯಗಳನ್ನು ಬೆಳೆದ ರೈತರುಗಳಿಗೆ ಬೆಳೆ ಸಮೀಕ್ಷೆ ಆಧಾರದಂತೆ ಪ್ರೋತ್ಸಾಹಧನವನ್ನು ವಿತರಿಸಲಾಗುತ್ತಿದೆ.
6.	ಸೂಕ್ಷ್ಮ ನೀರಾವರಿ	ಹನಿ / ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ 2.00 ಹೆಕ್ಟೇರ್ ನಷ್ಟು ಕೃಷಿ ಭೂಮಿಯನ್ನು ಹೊಂದಿರುವ ಪರಿಶಿಷ್ಟ ವರ್ಗ, ಪರಿಶಿಷ್ಟ ಪಂಗಡ ಮತ್ತು ಸಣ್ಣ ರೈತರಿಗೆ ಶೇ.90 ರಷ್ಟು ಸಹಾಯಧನ ಹಾಗು 5.00 ಹೆಕ್ಟೇರಾ ನಷ್ಟು ಕೃಷಿ ಭೂಮಿಯನ್ನು ಹೊಂದಿರುವ ಮಧ್ಯಮ ರೈತರಿಗೆ ಶೇ.45 ರಂತೆ ಸಹಾಯಧನ ಒದಗಿಸಲಾಗುತ್ತಿದೆ.

7.	ಕೃಷಿ ಯಾಂತ್ರೀಕರಣ ಹಾಗೂ ಕೃಷಿ ಉತ್ಪನ್ನಗಳ ಸಂಸ್ಕರಣೆ	ಸಣ್ಣ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭೂಮಿ ಸಿದ್ಧತೆ ಉಪಕರಣಗಳು, ನಾಟಿ / ಬಿತ್ತನೆ ಉಪಕರಣಗಳು, ಟ್ರ್ಯಾಕ್ಟರ್ / ಶಕ್ತಿಚಾಲಿತ ಸಸ್ಯ ಸಂರಕ್ಷಣಾ ಉಪಕರಣಗಳು, ಅಂತರ ಬೇಸಾಯ ಉಪಕರಣಗಳು, ತ್ಯಾಜ್ಯ ವಸ್ತುಗಳ ನಿರ್ವಹಣಾ ಉಪಕರಣಗಳು, ಕೊಯಿಲು ಮತ್ತು ಒಕ್ಕಣೆ ಮಾಡುವ ಉಪಕರಣಗಳು ಕೃಷಿ ಸಂಸ್ಕರಣಾ ಘಟಕಗಳು ಹಾಗೂ ಡೀಸಲ್ ಪಂಪ್ ಸೆಟ್‌ಗಳನ್ನು ಸಾಮಾನ್ಯ ರೈತರಿಗೆ ಶೇ.50 ರಷ್ಟು ಸಹಾಯಧನ ಹಾಗು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಶೇ.90 ರಷ್ಟು ಸಹಾಯಧನವನ್ನು ಗರಿಷ್ಠ ಮಿತಿ ರೂ. ಒಂದು ಲಕ್ಷದವರೆಗೆ ನೀಡಲಾಗುತ್ತಿದೆ. ಸಣ್ಣ ಟ್ರ್ಯಾಕ್ಟರ್‌ಗಳ ಖರೀದಿಗೆ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ರೂ.3.00ಲಕ್ಷ ಹಾಗು ಸಾಮಾನ್ಯ ರೈತರಿಗೆ ರೂ.0.75ಲಕ್ಷಗಳಂತೆ ಗರಿಷ್ಠ ಸಹಾಯಧನವನ್ನು ನೀಡಲಾಗುತ್ತಿದೆ.
8.	ರಾಷ್ಟ್ರೀಯ ಆಹಾರ ಭದ್ರತಾ ಅಭಿಯಾನ	ಈ ಯೋಜನೆಯಡಿ ಬತ್ತ, ದ್ವಿದಳಧಾನ್ಯ, ನ್ಯೂಟ್ರಿ ಸಿರಿಧಾನ್ಯ, ಎಣ್ಣೆಕಾಳು, ಕಬ್ಬು ಮತ್ತು ಹತ್ತಿ ಬೆಳೆಗಳ ಉತ್ಪಾದನೆಯನ್ನು ಹೆಚ್ಚಿಸಲು ಆಧುನಿಕ ತಾಂತ್ರಿಕತೆಗಳ ಗುಚ್ಛ ಪ್ರಾತ್ಯಕ್ಷಿಕೆಗಳನ್ನು ಆಯೋಜಿಸುವುದರ ಜೊತೆಗೆ ಬಿತ್ತನೆ ಬೀಜ, ಲಘುಪೋಷಕಾಂಶಗಳು, ಜೈವಿಕ ಗೊಬ್ಬರಗಳು, ಸಸ್ಯ ಸಂರಕ್ಷಣಾ ರಾಸಾಯನಿಕಗಳು, ಜಿಪ್ಸಂ/ ಕೃಷಿ ಸುಣ್ಣ, ಕೃಷಿ ಉಪಕರಣಗಳು, ತುಂತುರು ನೀರಾವರಿ ಘಟಕಗಳ ಅಳವಡಿಕೆಗೆ ಶೇ.50ರ ಸಹಾಯಧನವನ್ನು ನೀಡಲಾಗುತ್ತಿದೆ.
9.	ಸಸ್ಯ ಸಂರಕ್ಷಣೆ	ಶೇ.50ರ ರಿಯಾಯಿತಿಯಲ್ಲಿ ಸಸ್ಯ ಸಂರಕ್ಷಣಾ ಪೀಡೆನಾಶಕಗಳನ್ನು ವಿತರಣೆ ಮಾಡಲಾಗುತ್ತಿದೆ.
10.	ಮಣ್ಣಿನ ಸತ್ವ ಹೆಚ್ಚಿಸುವಿಕೆ ಯೋಜನೆ	ಎರೆಹುಳು ಗೊಬ್ಬರ, ಸಾವಯವ ಗೊಬ್ಬರ, ರಂಜಕಯುಕ್ತ ಸಾವಯವ ಗೊಬ್ಬರ, ಸಿಟಿ ಕಾಂಪೋಸ್ಟ್ ರಿಯಾಯತಿ ದರದಲ್ಲಿ ವಿತರಣೆ ಮಾಡುವುದು. ಸಾಮಾನ್ಯ ವರ್ಗದ ರೈತರಿಗೆ ಶೇ.50ರ ಸಹಾಯಧನ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತಿದೆ.
11.	ಸಾವಯವ ಇಂಗಾಲ ಹೆಚ್ಚಿಸುವ ಅಭಿಯಾನ	ವಿವಿಧ ದ್ವಿದಳ ಧಾನ್ಯ ಬೀಜಗಳು ಮತ್ತು ಹಸಿರೆಲೆ ಗೊಬ್ಬರ ಬೀಜಗಳನ್ನು ಸಾಮಾನ್ಯ ವರ್ಗ ಹಾಗೂ ಪರಿಶಿಷ್ಟ ಜಾತಿ/ ಪಂಗಡದ ರೈತರಿಗೆ ಶೇ.75ರ ಸಹಾಯಧನ ನೀಡಲಾಗುತ್ತಿದೆ.
12.	ಕೃಷಿ ವಿಸ್ತರಣಾ ಉಪ ಅಭಿಯಾನ (SAME-ATMA)	ಯೋಜನೆಯಡಿ ಆಯೋಜಿಸುವ ವಿಸ್ತರಣಾ ಕಾರ್ಯಕ್ರಮಗಳ ಚಟುವಟಿಕೆಗಳಲ್ಲಿ ಎಲ್ಲಾ ವರ್ಗದ ರೈತರು / ರೈತ ಮಹಿಳೆಯರ ಪಾಲ್ಗೊಳ್ಳುವಿಕೆಗೆ ಅವಕಾಶ ಕಲ್ಪಿಸಲಾಗಿದೆ.
13.	ಮಣ್ಣಿನ ಫಲವತ್ತತೆ ಯೋಜನೆ	ಮಣ್ಣು ಆರೋಗ್ಯ ಚೀಟಿ ಶಿಫಾರಸ್ಸಿನ ಅನ್ವಯ ಪ್ರಾತ್ಯಕ್ಷಿಕೆಗಳನ್ನು ಕೈಗೊಳ್ಳಲು ರಿಯಾಯಿತಿ ದರದಲ್ಲಿ ರಸಗೊಬ್ಬರ, ಸಾವಯವ ಗೊಬ್ಬರ, ಜೈವಿಕ ಗೊಬ್ಬರ, ಲಘುಪೋಷಕಾಂಶ ಮಣ್ಣು ಸುಧಾರಕಗಳನ್ನು ಪ್ರತಿ ಹೆಕ್ಟೇರಿಗೆ ಗರಿಷ್ಠ ರೂ.2500/- ಸಹಾಯಧನ ನೀಡಲಾಗುತ್ತಿದೆ.

ಅನುಬಂಧ-2

ಕಳೆದ ಮೂರು ವರ್ಷಗಳಲ್ಲಿ ಬಂಗಾರಪೇಟೆ ತಾಲ್ಲೂಕಿನಾದ್ಯಂತ ಆಯ್ಕೆ ಮಾಡಲಾದ ಫಲಾನುಭವಿಗಳ ವಿವರ

ಕ್ರ.ಸಂ	ಯೋಜನೆ	ಸವಲತ್ತು ಪಡೆದ ಫಲಾನುಭವಿಗಳ ವಿವರ(ಸಂಖ್ಯೆಗಳಲ್ಲಿ)			
		2018-19	2019-20	2020-21	2021-22 (ನವೆಂಬರ್-2021ರ ಅಂತ್ಯಕ್ಕೆ)
1	ಕೃಷಿ ಅಭಿಯಾನ	1188	325	0	255
2	ಮಣ್ಣಿನ ಸತ್ವ ಹೆಚ್ಚಿಸುವಿಕೆ	256	286	186	85
3	ಬಿತ್ತನೆ ಬೀಜಗಳ ವಿತರಣೆ	2310	2422	2602	1767
4	ನೂತನ ಕೃಷಿ ಉತ್ತೇಜನ ಯೋಜನೆಯಡಿ ಕೃಷಿ ಯಾಂತ್ರೀಕರಣ	99	65	75	15
5	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ	25	0	0	0
6	ಕೃಷಿ ಉತ್ಪನ್ನಗಳ ಸಂಸ್ಕರಣೆ ಯೋಜನೆ	1500	185	1900	0
7	ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ ಬೀಮ	200	185	201	85
8	ರೈತರ ಆಕಸ್ಮಿಕ ಮರಣ/ಆತ್ಮಹತ್ಯೆ/ಹುಲ್ಲು ಬಣವೆ ನಷ್ಟ ಪರಿಹಾರ	26	19	0	0
9	ಸಾವಯವ ಕೃಷಿ	15	85	56	0
10	ಕೃಷಿ ಭಾಗ್ಯ ಯೋಜನೆ	586	413	55	0
11	ಕೇಂದ್ರ ವಲಯ ಕೃಷಿ ಯಾಂತ್ರೀಕರಣ(SMAM)	436	46	155	25
12	ಕೇಂದ್ರ ವಲಯ ಸೂಕ್ಷ್ಮ ನೀರಾವರಿ ಯೋಜನೆ(PMKSY-MI)	168	118	175	0
13	ಕೇಂದ್ರ ವಲಯ RKVY ಟಾರ್ಪಾಲ್ ವಿತರಣೆ	695	0	232	0
14	ಕೇಂದ್ರ ವಲಯ ರಾಷ್ಟ್ರೀಯ ಆಹಾರ ಭದ್ರತೆ ಯೋಜನೆ(NFSM)	639	986	996	352
15	ಮಣ್ಣು ಆರೋಗ್ಯ ಚೀಟಿ	165	195	232	0
ಒಟ್ಟು		8308	5330	6865	2584

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 232

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಎಸ್. ಎನ್. ನಾರಾಯಣಸ್ವಾಮಿ ಕೆ. ಎಂ. (ಬಂಗಾರಪೇಟೆ)

ಉತ್ತರಿಸುವ ಸಚಿವರು : ತೋಟಗಾರಿಕೆ ಮತ್ತು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಉತ್ತರಿಸಬೇಕಾದ ದಿನಾಂಕ : 15.12.2021

ಕ್ರ.ಸ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡಲಾಗುತ್ತಿರುವ ಸಹಾಯಧನದ (ಸಬ್ಸಿಡಿ) ಯೋಜನೆಗಳಾವುವು;	ರಾಜ್ಯದಲ್ಲಿ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡಲಾಗುತ್ತಿರುವ ಸಹಾಯಧನದ (ಸಬ್ಸಿಡಿ) ಯೋಜನೆಗಳ ವಿವರಗಳನ್ನು ಅನುಬಂಧ-1ರಲ್ಲಿ
ಆ)	ಯಾವ ಯೋಜನೆಯಲ್ಲಿ ಯಾವು ರೀತಿಯ ರಿಯಾಯಿತಿಯನ್ನು (ಸಬ್ಸಿಡಿ) ನೀಡಲಾಗುತ್ತಿದೆ;	2021-22ನೇ ಸಾಲಿನ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ ರೈತರಿಗೆ ನೀಡಲಾಗುತ್ತಿರುವ ಸಹಾಯಧನ/ಸೌಲಭ್ಯಗಳ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಿದೆ.
ಇ)	ಬಂಗಾರಪೇಟೆ ತಾಲ್ಲೂಕಿನಾದ್ಯಂತ ಆಯ್ಕೆ ಮಾಡಲಾದ ಫಲಾನುಭವಿಗಳ ಸಂಖ್ಯೆಯೆಷ್ಟು (ಯೋಜನೆವಾರು ಮಾಹಿತಿ ನೀಡುವುದು);	ಬಂಗಾರಪೇಟೆ ತಾಲ್ಲೂಕಿನಾದ್ಯಂತ 2021-22ನೇ ಸಾಲಿನ ನವೆಂಬರ್-2021ರ ಅಂತ್ಯದವರೆಗೆ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಡಿ 1599 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಯೋಜನಾವಾರು ವಿವರಗಳನ್ನು ಅನುಬಂಧ-3ರಲ್ಲಿ ಒದಗಿಸಿದೆ.
ಈ)	ಇತ್ತಿಚಿಗೆ ಬಿದ್ದ ಬಾರಿ ಮಳೆಯಿಂದ ಹಾಳಾಗಿರುವ ಬೆಳೆಗಳು ಯಾವುವು; ಅಂದಾಜು ಎಷ್ಟು ಹಣ ನಷ್ಟವಾಗುತ್ತಿದೆ; ನಷ್ಟ ಪರಿಹಾರವಾಗಿ ಸರ್ಕಾರ ಇದುವರೆಗೂ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ? (ಪೂರ್ಣ ವಿವರ ನೀಡುವುದು)	ಇತ್ತೀಚಿಗೆ ಕ್ಷೇತ್ರದಲ್ಲಿ ಬಿದ್ದ ಬಾರಿ ಮಳೆಯಿಂದ ಟೋಮ್ಯಾಟೋ, ಆಲೂಗಡ್ಡೆ, ಎಲೆಕೋಸು, ಹೂ ಕೋಸು, ಹೂವುಗಳು, ಇತರೆ ತರಕಾರಿಗಳು ಮತ್ತು ದಾಳಿಂಬೆ, ಪಪ್ಪಾಯ ಬೆಳೆಗಳು ಹಾನಿಯಾಗಿರುತ್ತವೆ. ಅಂದಾಜು ರೂ.427.96 ಲಕ್ಷ ಮೌಲ್ಯದ ಬೆಳೆಗಳು ಹಾನಿಯಾಗಿರುವುದಾಗಿ ಅಂದಾಜಿಸಲಾಗಿರುತ್ತದೆ. ಜಿಲ್ಲೆಯಾದ್ಯಂತ ಜಂಟಿ ಸಮೀಕ್ಷೆ ಕಾರ್ಯ ಪೂರ್ಣಗೊಳಿಸಿ ದಿನಾಂಕ:06.12.2021ರ ವರೆಗೆ ಪರಿಹಾರ ಪೋರ್ಟಲ್ ನಲ್ಲಿ 5804.73 ಹೆ ವಿಸ್ತೀರ್ಣದ ರೈತರ ವಿವರಗಳನ್ನು ನಮೂದಿಸಲಾಗಿರುತ್ತದೆ. ಪಾವತಿ ಪ್ರಕ್ರಿಯೆಯು ಜಾರಿಯಲ್ಲಿರುತ್ತದೆ. ಕೃಷಿ ಮತ್ತು ತೋಟಗಾರಿಕೆ ಬೆಳೆಗಳಿಗೆ ರಾಷ್ಟ್ರೀಯ/ ರಾಜ್ಯ ವಿಪತ್ತು ಪರಿಹಾರ ನಿಧಿ

		(NDRF/SDRF) ಮಾರ್ಗಸೂಚಿಯನ್ವಯ ಬಂಗಾರಪೇಟೆ ತಾಲ್ಲೂಕು ಸೇರಿದಂತೆ ಕೋಲಾರ ಜಿಲ್ಲೆಯಲ್ಲಿ ಈವರೆಗೆ 13302 ರೈತರಿಗೆ ರೂ.5.94 ಕೋಟಿ ಪರಿಹಾರ ಪಾವತಿಸಲಾಗಿರುತ್ತದೆ.

No.HORTI 507 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಅನುಬಂಧ-1

ರಾಜ್ಯದಲ್ಲಿ ರೈತರಿಗೆ ತೋಟಗಾರಿಕೆ ಇಲಾಖೆಯಿಂದ ನೀಡಲಾಗುತ್ತಿರುವ ಸಹಾಯಧನದ (ಸಬ್ಸಿಡಿ) ಯೋಜನೆಗಳ ವಿವರಗಳು

ಕ್ರ. ಸಂ.	ಯೋಜನೆಗಳು
I	ಕೇಂದ್ರ ನೆರವಿನ ಯೋಜನೆಗಳು
1	ಪಿಎಂಕೆಎಸ್ ವೈ- ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ
2	ರಾಷ್ಟ್ರೀಯ ತೋಟಗಾರಿಕೆ ಮಿಷನ್
3	ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗೆ ತೆಂಗಿನಲ್ಲಿ ಸಂಯೋಜಿತ ಬೇಸಾಯ
4	ರಾಷ್ಟ್ರೀಯ ಆಹಾರ ಭದ್ರತಾ ಮಿಷನ್(NFSM-OP)
5	ಪರಂಪರಾಗತ ಕೃಷಿ ವಿಕಾಸ ಯೋಜನೆ
6	ಕೃಷಿ ಯಾಂತ್ರೀಕರಣ ಉಪ ಅಭಿಯಾನ
7	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ
II	ರಾಜ್ಯವಲಯ ಯೋಜನೆಗಳು
1	ಸಮಗ್ರ ತೋಟಗಾರಿಕಾ ಅಭಿವೃದ್ಧಿ
2	ತೋಟಗಾರಿಕೆ ಬೆಳೆಗಳ ಕೀಟ ಮತ್ತು ರೋಗಗಳ ಸಮಗ್ರ ನಿಯಂತ್ರಣ ಯೋಜನೆ
3	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ ಯೋಜನೆ
4	ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೆ ಇರುವ ಮೊತ್ತ.
5	ಸೂಕ್ಷ್ಮ ನೀರಾವರಿ ಅನುಸ್ಥಾಪನ-ತೋಟಗಾರಿಕೆ (ನಬಾರ್ಡ ಕಾಮಗಾರಿ)
III	ಜಿಲ್ಲಾವಲಯ ಯೋಜನೆಗಳು
1	ಜೇನು ಸಾಕಾಣಿಕೆ
2	ರೈತರಿಗೆ ಸಹಾಯ

ತೋಟಗಾರಿಕೆ ಜಂಟಿ ನಿರ್ದೇಶಕರು
(ಯೋಜನೆ)

ಅನುಬಂಧ-2

2021-22 ನೇ ಸಾಲಿನ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಿಂದ ದೊರೆಯುತ್ತಿರುವ ಸೌಲಭ್ಯಗಳ ವಿವರ.

ಕ್ರ.ಸಂ	ಕಾರ್ಯಕ್ರಮಗಳ/ಘಟಕದ ವಿವರ	ಘಟಕ ವೆಚ್ಚ	ಶೇ. ಸಹಾಯಧನ		ಸಹಾಯಧನದ ಮೊತ್ತ
ಕೇಂದ್ರ ಪುರಸ್ಕೃತ ಯೋಜನೆಗಳು					
1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ – ಸೂಕ್ಷ್ಮ ನೀರಾವರಿ ಯೋಜನೆ					
			ಸಾಮಾನ್ಯ	ಪ.ಜಾ/ಪ.ಪಂ	
1	ಹನಿ ನೀರಾವರಿ ಅಳವಡಿಕೆಗೆ ಪ.ಜಾ ಮತ್ತು ಪ.ಪಂ ರೈತ ಕುಟುಂಬಗಳಿಗೆ 2 ಹೆಕ್ಟೇರ್ ವರೆಗೆ ಶೇ.90 ಮತ್ತು 2 ಹೆಕ್ಟೇರ್ ಮೇಲ್ಪಟ್ಟು ಗರಿಷ್ಟ ಶೇ 45 ರಷ್ಟು ಹಾಗೂ ಇತರೆ ವರ್ಗದ ರೈತ ಕುಟುಂಬಗಳಿಗೆ 5 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ನೀಡಲಾಗುವುದು.		ಶೇ. 45	ಶೇ. 90 ಶೇ. 45	
2. ರಾಷ್ಟ್ರೀಯ ತೋಟಗಾರಿಕೆ ಮಿಷನ್					
ನರ್ಸರಿ ಸ್ಥಾಪನೆ					
1.	ಮಾದರಿ ಸಸ್ಯಾಗಾರ (ಕನಿಷ್ಟ 4ಹ ವರೆಗೆ) ಸಾರ್ವಜನಿಕ ವಲಯ	ರೂ. 25.00ಲಕ್ಷಗಳು / ಹೆಕ್ಟೇರ್ ಗೆ	ಶೇ. 100		ರೂ. 25.00 ಲಕ್ಷಗಳು/ ಹೆಕ್ಟೇರ್ ಗೆ
2.	ಖಾಸಗಿ ವಲಯ (ಕನಿಷ್ಟ 4ಹ ವರೆಗೆ)	ರೂ. 25.00ಲಕ್ಷಗಳು / ಹೆಕ್ಟೇರ್ ಗೆ	ಶೇ. 40		ರೂ.10.00 ಲಕ್ಷಗಳು/ ಹೆಕ್ಟೇರ್ ಗೆ
3.	ಸಣ್ಣ ಸಸ್ಯಾಗಾರ (ಕನಿಷ್ಟ 1ಹೆ) ಸಾರ್ವಜನಿಕ ವಲಯ	ರೂ. 15.00ಲಕ್ಷಗಳು / ಹೆಕ್ಟೇರ್ ಗೆ	ಶೇ. 100		ರೂ. 15.00 ಲಕ್ಷಗಳು/ ಹೆಕ್ಟೇರ್ ಗೆ
4.	ಸಣ್ಣ ಸಸ್ಯಾಗಾರ (ಕನಿಷ್ಟ 1ಹೆ) ಖಾಸಗಿ ವಲಯ	ರೂ. 15.00ಲಕ್ಷಗಳು / ಹೆಕ್ಟೇರ್ ಗೆ	ಶೇ. 50		ರೂ. 7.50 ಲಕ್ಷಗಳು/ ಹೆಕ್ಟೇರ್ ಗೆ
ಹೊಸ ಅಂಗಾಂಶ ಕೃಷಿ ಘಟಕಗಳ ಸ್ಥಾಪನೆ					
1.	ಸಾರ್ವಜನಿಕ ವಲಯ	ರೂ. 250.00ಲಕ್ಷಗಳು / ಘಟಕಕ್ಕೆ	ಶೇ. 100		ರೂ. 250.00 ಲಕ್ಷಗಳು/ ಘಟಕಕ್ಕೆ

ಅನುಬಂಧ-2

2021-22 ನೇ ಸಾಲಿನ ತೋಟಗಾರಿಕೆ ಇಲಾಖೆಯ ವಿವಿಧ ಯೋಜನೆಗಳಿಂದ ದೊರೆಯುತ್ತಿರುವ ಸೌಲಭ್ಯಗಳ ವಿವರ.

ಕ್ರ.ಸಂ	ಕಾರ್ಯಕ್ರಮಗಳ/ಘಟಕದ ವಿವರ	ಘಟಕ ವೆಚ್ಚ	ಶೇ. ಸಹಾಯಧನ		ಸಹಾಯಧನದ ಮೊತ್ತ
	ಕೇಂದ್ರ ಪುರಸ್ಕೃತ ಯೋಜನೆಗಳು				
1. ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನಾ – ಸೂಕ್ಷ್ಮ ನೀರಾವರಿ ಯೋಜನೆ					
			ಸಾಮಾನ್ಯ	ಪ.ಜಾ/ಪ.ಪಂ	
1	ಹನಿ ನೀರಾವರಿ ಅಳವಡಿಕೆಗೆ ಪ.ಜಾ ಮತ್ತು ಪ.ಪಂ ರೈತ ಕುಟುಂಬಗಳಿಗೆ 2 ಹೆಕ್ಟೇರ್ ವರೆಗೆ ಶೇ.90 ಮತ್ತು 2 ಹೆಕ್ಟೇರ್ ಮೇಲ್ಪಟ್ಟು ಗರಿಷ್ಟ ಶೇ 45 ರಷ್ಟು ಹಾಗೂ ಇತರೆ ವರ್ಗದ ರೈತ ಕುಟುಂಬಗಳಿಗೆ 5 ಹೆಕ್ಟೇರ್ ವರೆಗೆ ಶೇ.45 ರಷ್ಟು ಸಹಾಯಧನ ನೀಡಲಾಗುವುದು.		ಶೇ. 45	ಶೇ. 90 ಶೇ. 45	
2. ರಾಷ್ಟ್ರೀಯ ತೋಟಗಾರಿಕೆ ಮಿಷನ್					
ನರ್ಸರಿ ಸ್ಥಾಪನೆ					
1.	ಮಾದರಿ ಸಸ್ಯಾಗಾರ (ಕನಿಷ್ಟ 4ಹೆ ವರೆಗೆ) ಸಾರ್ವಜನಿಕ ವಲಯ	ರೂ. 25.00ಲಕ್ಷಗಳು / ಹೆಕ್ಟೇರ್ ಗೆ	ಶೇ. 100		ರೂ. 25.00 ಲಕ್ಷಗಳು/ ಹೆಕ್ಟೇರ್ ಗೆ
2.	ಖಾಸಗಿ ವಲಯ (ಕನಿಷ್ಟ 4ಹೆ ವರೆಗೆ)	ರೂ. 25.00ಲಕ್ಷಗಳು / ಹೆಕ್ಟೇರ್ ಗೆ	ಶೇ. 40		ರೂ.10.00 ಲಕ್ಷಗಳು/ ಹೆಕ್ಟೇರ್ ಗೆ
3.	ಸಣ್ಣ ಸಸ್ಯಾಗಾರ (ಕನಿಷ್ಟ 1ಹೆ) ಸಾರ್ವಜನಿಕ ವಲಯ	ರೂ. 15.00ಲಕ್ಷಗಳು / ಹೆಕ್ಟೇರ್ ಗೆ	ಶೇ. 100		ರೂ. 15.00 ಲಕ್ಷಗಳು/ ಹೆಕ್ಟೇರ್ ಗೆ
4.	ಸಣ್ಣ ಸಸ್ಯಾಗಾರ (ಕನಿಷ್ಟ 1ಹೆ) ಖಾಸಗಿ ವಲಯ	ರೂ. 15.00ಲಕ್ಷಗಳು / ಹೆಕ್ಟೇರ್ ಗೆ	ಶೇ. 50		ರೂ. 7.50 ಲಕ್ಷಗಳು/ ಹೆಕ್ಟೇರ್ ಗೆ
ಹೊಸ ಅಂಗಾಂಶ ಕೃಷಿ ಘಟಕಗಳ ಸ್ಥಾಪನೆ					
1.	ಸಾರ್ವಜನಿಕ ವಲಯ	ರೂ. 250.00ಲಕ್ಷಗಳು / ಘಟಕಕ್ಕೆ	ಶೇ. 100		ರೂ. 250.00 ಲಕ್ಷಗಳು/ ಘಟಕಕ್ಕೆ

2.	ಖಾಸಗಿ ವಲಯ	ರೂ. 250.00ಲಕ್ಷಗಳು / ಘಟಕಕ್ಕೆ	ಶೇ. 40	ರೂ. 100.00 ಲಕ್ಷಗಳು/ ಘಟಕಕ್ಕೆ
ಬೀಜೋತ್ಪಾದನೆಗೆ ಮೂಲಭೂತ ಸೌಲಭ್ಯ				
1.	ಸಾರ್ವಜನಿಕ ವಲಯ	ರೂ. 200.00 ಲಕ್ಷಗಳು/ ಘಟಕಕ್ಕೆ	ಶೇ. 100	ರೂ. 200.00 ಲಕ್ಷಗಳು/ ಘಟಕಕ್ಕೆ
2.	ಖಾಸಗಿ ವಲಯ	ರೂ. 200.00 ಲಕ್ಷಗಳು/ ಘಟಕಕ್ಕೆ	ಶೇ. 50	ರೂ. 100.00 ಲಕ್ಷಗಳು/ ಘಟಕಕ್ಕೆ
ಜೈವಿಕ ನಿಯಂತ್ರಕಗಳ ಉತ್ಪಾದನಾ ಪ್ರಯೋಗಾಲಯ				
1.	ಸಾರ್ವಜನಿಕ ವಲಯ	ರೂ. 90.00 ಲಕ್ಷಗಳು/ ಘಟಕಕ್ಕೆ	ಶೇ. 100	ರೂ. 90.00 ಲಕ್ಷಗಳು/ ಘಟಕಕ್ಕೆ
2.	ಖಾಸಗಿ ವಲಯ	ರೂ. 90.00 ಲಕ್ಷಗಳು/ ಘಟಕಕ್ಕೆ	ಶೇ. 50	ರೂ. 45.00 ಲಕ್ಷಗಳು/ ಘಟಕಕ್ಕೆ
ತರಕಾರಿ ಬೀಜೋತ್ಪಾದನೆ				
1.	Open pollinated crops			
1a.	ಸಾರ್ವಜನಿಕ ವಲಯ (5 ಹೆಕ್ಟೇರ್ ವರೆಗೆ)	ರೂ. 0.35 ಲಕ್ಷ/ಹೆಕ್ಟೇರ್ ಗೆ	ಶೇ. 100	ರೂ. 0.35 ಲಕ್ಷ/ಹೆಕ್ಟೇರ್ ಗೆ
1b.	ಖಾಸಗಿ ವಲಯ(5 ಹೆಕ್ಟೇರ್ ವರೆಗೆ)	ರೂ. 0.35 ಲಕ್ಷ/ಹೆಕ್ಟೇರ್ ಗೆ	ಶೇ. 35	ರೂ. 0.1225 ಲಕ್ಷ/ಹೆಕ್ಟೇರ್ ಗೆ
2.	Hybrid seeds			
2a.	ಸಾರ್ವಜನಿಕ ವಲಯ (5 ಹೆಕ್ಟೇರ್ ವರೆಗೆ)	ರೂ. 1.50 ಲಕ್ಷಗಳು /ಹೆಕ್ಟೇರ್ ಗೆ	ಶೇ. 100	ರೂ. 1.50 ಲಕ್ಷಗಳು /ಹೆಕ್ಟೇರ್ ಗೆ
2b	ಖಾಸಗಿ ವಲಯ (5 ಹೆಕ್ಟೇರ್ ವರೆಗೆ)	ರೂ. 1.50 ಲಕ್ಷಗಳು /ಹೆಕ್ಟೇರ್ ಗೆ	ಶೇ. 35	ರೂ. 0.525 ಲಕ್ಷ/ಹೆಕ್ಟೇರ್ ಗೆ
ಅಣಬೆ ಉತ್ಪಾದನೆ ಘಟಕ				
1.	ಸಾರ್ವಜನಿಕ ವಲಯ	ರೂ. 20.00 ಲಕ್ಷಗಳು/ ಘಟಕಕ್ಕೆ	ಶೇ. 100	ರೂ. 20.00 ಲಕ್ಷಗಳು/ ಘಟಕಕ್ಕೆ
2.	ಖಾಸಗಿ ವಲಯ	ರೂ. 20.00 ಲಕ್ಷಗಳು/ ಘಟಕಕ್ಕೆ	ಶೇ. 40	ರೂ. 8.00 ಲಕ್ಷಗಳು/ ಘಟಕಕ್ಕೆ
ಸ್ಪಾನ್ ಉತ್ಪಾದನೆ ಘಟಕ				
1.	ಸಾರ್ವಜನಿಕ ವಲಯ	ರೂ. 15.00 ಲಕ್ಷಗಳು/ ಘಟಕಕ್ಕೆ	ಶೇ. 100	ರೂ. 15.00 ಲಕ್ಷಗಳು/ ಘಟಕಕ್ಕೆ

2.	ಖಾಸಗಿ ವಲಯ	ರೂ. 15.00 ಲಕ್ಷಗಳು/ ಘಟಕಕ್ಕೆ	ಶೇ. 40		ರೂ. 6.00 ಲಕ್ಷಗಳು/ ಘಟಕಕ್ಕೆ
ಗೊಬ್ಬರ ತಯಾರಿಕಾ ಘಟಕ					
1.	ಸಾರ್ವಜನಿಕ ವಲಯ	ರೂ. 20.00 ಲಕ್ಷಗಳು/ ಘಟಕಕ್ಕೆ	ಶೇ. 100		ರೂ. 20.00 ಲಕ್ಷಗಳು/ ಘಟಕಕ್ಕೆ
2.	ಖಾಸಗಿ ವಲಯ	ರೂ. 20.00 ಲಕ್ಷಗಳು/ ಘಟಕಕ್ಕೆ	ಶೇ. 40		ರೂ. 8.00 ಲಕ್ಷಗಳು/ ಘಟಕಕ್ಕೆ
ಪ್ರದೇಶ ವಿಸ್ತರಣೆ		ರೂ. 0.40 - 4.00 ಲಕ್ಷಗಳು/ ಹೆಕ್ಟೇರ್ ಗೆ	ಸಾಮಾನ್ಯ ಶೇ. 40	ಪ.ಜಾ/ಪ.ಪಂ ಶೇ. 90	ರೂ. 0.16-1.6 ಲಕ್ಷಗಳು/ಹೆಕ್ಟೇರ್ ಗೆ
ತೋಟಗಾರಿಕಾ ಬೆಳೆಗಳ ಪುನಶ್ಚೇತನ(ಗೇರು, ಮಾವು, ಕಿತ್ತಳೆ ಜಾತಿ, ಕಾಳುಮೆಣಸು)		ರೂ. 0.40 ಲಕ್ಷ/ ಹೆಕ್ಟೇರ್ ಗೆ	ಶೇ. 50	ಶೇ. 90	
ನೀರು ಸಂಗ್ರಹಣಾ ಘಟಕ					
1.	ವ್ಯೆಯಕ್ತಿಕ ಕೃಷಿ ಹೊಂಡ (20ಮೀ*20ಮೀ*3ಮೀ)	ರೂ. 125.00 /ಘ.ಮೀ	ಶೇ. 50	ಶೇ. 90	ರೂ. 62.50 /ಘ.ಮೀ (ಗರಿಷ್ಟ ರೂ. 1.50 ಲಕ್ಷಗಳವರೆಗೆ)
2.	ಸಮುದಾಯ ನೀರು ಸಂಗ್ರಹಣಾ ಘಟಕ (6000 ಘ.ಮೀ) (8000 ಘ.ಮೀ)	ರೂ. 66,666 / ಘ.ಮೀ ರೂ. 66,666 / ಘ.ಮೀ	ಶೇ. 100		ಗರಿಷ್ಟ 4.00 ಲಕ್ಷದವರೆಗೆ ಗರಿಷ್ಟ 5.32 ಲಕ್ಷದವರೆಗೆ
ಸಂರಕ್ಷಿತ ಬೇಸಾಯ					
1.	ಪಾಲಿ ಹೌಸ್ ನಿರ್ಮಾಣ	ರೂ. 789.00 – 1094.00/ ಚದರ ಮೀಟರ್ ಗೆ	ಸಾಮಾನ್ಯ ಶೇ. 50	ಪ.ಜಾ/ಪ.ಪಂ ಶೇ. 90	ರೂ. 394.50 – 547.00/ ಚದರ ಮೀಟರ್ ಗೆ
2.	ನೆರಳು ಪರದೆ ನಿರ್ಮಾಣ	ರೂ. 394.00/ ಚದರ ಮೀಟರ್ ಗೆ	ಶೇ. 50	ಶೇ. 90	ರೂ. 197.00/ ಚದರ ಮೀಟರ್ ಗೆ
3.	ಪಕ್ಷಿ ನಿರೋಧಕ ಬಲೆ (5000 ಚದರ ಮೀಟರ್ ಗೆ)	ರೂ. 20.00/ ಚದರ ಮೀಟರ್ ಗೆ	ಶೇ. 50	ಶೇ. 90	ರೂ. 10.00/ ಚದರ ಮೀಟರ್ ಗೆ

4.	ತರಕಾರಿ ಬೆಳೆಯಲ್ಲಿ ಪ್ಲಾಸ್ಟಿಕ್ ಹೊದಿಕೆ (ಗರಿಷ್ಟ 2 ಹೆಕ್ಟೇರ್ ವರೆಗೆ)	ರೂ. 0.32 ಲಕ್ಷ/ ಹೆಕ್ಟೇರ್ ಗೆ	ಶೇ. 50	ಶೇ. 90	ರೂ. 0.16 ಲಕ್ಷ/ ಹೆಕ್ಟೇರ್ ಗೆ
5.	ಸಮಗ್ರ ಕೀಟ/ರೋಗ ನಿಯಂತ್ರಣ ಮತ್ತು ಸಮಗ್ರ ಪೋಷಕಾಂಶ ನಿರ್ವಹಣೆ	ರೂ. 0.04 ಲಕ್ಷ/ ಹೆಕ್ಟೇರ್ ಗೆ	ಶೇ. 30	ಶೇ. 90	ರೂ. 0.012 ಲಕ್ಷ/ ಹೆಕ್ಟೇರ್ ಗೆ
ತೋಟಗಾರಿಕೆಯಲ್ಲಿ ಯಾಂತ್ರೀಕರಣ					
1.	ಟ್ರ್ಯಾಕ್ಟರ್ (20ಹೆಚ್.ಪಿ.ವರೆಗೆ)	ರೂ. 3.00 ಲಕ್ಷಗಳು/ Unit	ಸಾಮಾನ್ಯ ಶೇ. 25	ಪ.ಜಾ/ಪ.ಪಂ ಶೇ. 90	ರೂ. 0.75 - ರೂ. 1.00 ಲಕ್ಷದವರೆಗೆ /Unit
2.	ಪವರ್ ಟಿಲ್ಲರ್ (8ಬಿ.ಹೆಚ್.ಪಿ.ಗಿಂತ ಕಡಿಮೆ)	ರೂ. 1.00 ಲಕ್ಷಗಳು/ Unit	ಶೇ. 40	ಶೇ. 90	ರೂ. 0.40 – ರೂ. 0.50 ಲಕ್ಷ /Unit
3.	Manual Sprayer(Knapsack/foot operated sprayer)	ರೂ. 0.012 ಲಕ್ಷಗಳು /unit	ಶೇ. 40	ಶೇ. 90	ರೂ. 0.005 – ರೂ. 0.006 ಲಕ್ಷ /unit
4.	Tractor Mounted/Operated sprayer(Below 20 HP)	ರೂ. 0.20 ಲಕ್ಷಗಳು /unit	ಶೇ. 40	ಶೇ. 90	ರೂ. 0.08- ರೂ. 0.10 ಲಕ್ಷ /unit
ಸಮಗ್ರ ಕೊಯ್ಲೋತ್ತರ ನಿರ್ವಹಣೆ					
1.	ಪ್ಯಾಕ್ ಹೌಸ್ (9ಮೀ*6ಮೀ*6ಮೀ)	ರೂ. 4.00 ಲಕ್ಷಗಳು/ಘಟಕಕ್ಕೆ	ಸಾಮಾನ್ಯ ಶೇ. 50	ಪ.ಜಾ/ಪ.ಪಂ ಶೇ. 90	ರೂ. 2.00 ಲಕ್ಷಗಳು/ಘಟಕಕ್ಕೆ
2.	ಸಮಗ್ರ ಪ್ಯಾಕ್ ಹೌಸ್ (9ಮೀ*18ಮೀ)	ರೂ. 50.00 ಲಕ್ಷಗಳು/ಘಟಕಕ್ಕೆ	ಶೇ. 35	ಶೇ. 90	ರೂ. 17.50 ಲಕ್ಷಗಳು/ಘಟಕಕ್ಕೆ
3.	ಶೀತಲ ಗೃಹ (Staging)	ರೂ. 15.00 ಲಕ್ಷಗಳು/ 30 ಮೆ.ಟನ್ ಸಾಮರ್ಥ್ಯದ ಘಟಕಕ್ಕೆ	ಶೇ. 35	ಶೇ. 90	ರೂ. 5.25 ಲಕ್ಷಗಳು/ 30 ಮೆ.ಟನ್ ಸಾಮರ್ಥ್ಯದ ಘಟಕಕ್ಕೆ
4.	ಸೌರಶಾಖಿ ಘಟಕ		ಶೇ. 50	ಶೇ. 90	ರೂ. 0.275 ಲಕ್ಷ/ 100 ಕೆ.ಜಿ. ಮತ್ತು ರೂ. 2.85 ಲಕ್ಷಗಳು/1000 ಕೆ.ಜಿ. ಸಾಮರ್ಥ್ಯದ ಘಟಕಕ್ಕೆ
ಶೀತಲ ಗೃಹ ನಿರ್ಮಾಣ, ವಿಸ್ತರಣೆ, ಆಧುನೀಕರಣ					

1.	ಶೀತಲ ಗೃಹ (units Type-1-basic mezzanine strucutre)	ರೂ. 0.08ಲಕ್ಷ / ಮೆ.ಟನ್ (ಗರಿಷ್ಟ 5000 ಮೆ.ಟನ್ ಸಾಮರ್ಥ್ಯ)	ಶೇ. 35	ರೂ. 0.028 ಲಕ್ಷ/ಮೆ.ಟನ್
2.	ಶೀತಲ ಗೃಹ (units Type-2- PEB structure for multiple temperature (more than 6 chambers))	ರೂ. 0.10 ಲಕ್ಷ/ ಮೆ.ಟನ್ (ಗರಿಷ್ಟ 5000 ಮೆ.ಟನ್ ಸಾಮರ್ಥ್ಯ)	ಶೇ. 35	ರೂ. 0.035 ಲಕ್ಷ /ಮೆ.ಟನ್
3.	ಶೀತಲ ವಾಹನ ಖರೀದಿ	ರೂ. 26.00 ಲಕ್ಷಗಳು / 9ಮೆ.ಟನ್(Not below 4 MT)	ಶೇ. 35	ರೂ. 9.10 ಲಕ್ಷಗಳು /9ಮೆ.ಟನ್
4.	ಪ್ರಾಥಮಿಕ ಸಂಸ್ಕರಣಾ ಘಟಕ	ರೂ. 25.00 ಲಕ್ಷಗಳು/ಘಟಕಕ್ಕೆ	ಶೇ. 40	ರೂ. 10.00 ಲಕ್ಷಗಳು/ಘಟಕಕ್ಕೆ
5.	ಹಣ್ಣು ಮಾಗಿಸುವ ಘಟಕ (ಗರಿಷ್ಟ 300 ಮೆ.ಟನ್)	ರೂ. 1.00 ಲಕ್ಷ/ಮೆ.ಟನ್	ಶೇ. 35	ರೂ. 0.35 ಲಕ್ಷಗಳು/ಮೆ.ಟನ್
6.	ಕಡಿಮೆ ವೆಚ್ಚದ ಈರುಳ್ಳಿ ಶೇಖರಣಾ ಘಟಕ (ಕನಿಷ್ಟ 25ಮೆ.ಟನ್)	ರೂ. 1.75 ಲಕ್ಷಗಳು/ಘಟಕಕ್ಕೆ	ಶೇ. 50	ರೂ. 0.875 ಲಕ್ಷ/ಘಟಕಕ್ಕೆ
ಮಾನವ ಸಂಪನ್ಮೂಲ ಅಭಿವೃದ್ಧಿ				
1.	ರೈತರಿಗೆ ತರಬೇತಿ(ಒಳರಾಜ್ಯ)	ರೂ. 1000.00/ ರೈತನಿಗೆ		
2.	ರೈತರಿಗೆ ತರಬೇತಿ(ಹೊರರಾಜ್ಯ) 5ದಿನಗಳಿಗೆ	ರೂ. 1500.00/ ರೈತನಿಗೆ		
3.	ಅಧಿಕಾರಿಗಳಿಗೆ ತರಬೇತಿ/ಪ್ರವಾಸ (ಒಳರಾಜ್ಯ)	ರೂ. 300.00/ದಿನಕ್ಕೆ		
4.	ಅಧಿಕಾರಿಗಳಿಗೆ ತರಬೇತಿ/ಪ್ರವಾಸ (ಹೊರರಾಜ್ಯ)	ರೂ. 800.00/ದಿನಕ್ಕೆ		
ಮಾರುಕಟ್ಟೆ ಮೂಲಭೂತ ಸೌಕರ್ಯ ಸ್ಥಾಪನೆ				
1.	ಸಗಟು ಮಾರುಕಟ್ಟೆ(ಕನಿಷ್ಟ 50 ಎಕರೆ ಪ್ರದೇಶ)	ರೂ. 100.00 ಕೋಟಿ	ಶೇ. 25	ಗರಿಷ್ಟ ರೂ. 25.00 ಕೋಟಿ
2.	ಗ್ರಾಮೀಣ ಮಾರುಕಟ್ಟೆ (ಕನಿಷ್ಟ 0.5 ಎಕರೆ ಪ್ರದೇಶ)	ರೂ. 25.00 ಲಕ್ಷಗಳು	ಶೇ. 40	ಗರಿಷ್ಟ ರೂ. 10.00 ಲಕ್ಷಗಳು
3.	ಚಿಲ್ಲರೆ ಮಾರುಕಟ್ಟೆ (ಕನಿಷ್ಟ 0.1 ಎಕರೆ	ರೂ. 15.00 ಲಕ್ಷಗಳು	ಶೇ. 35	ಗರಿಷ್ಟ ರೂ. 5.25 ಲಕ್ಷಗಳು

	ಪ್ರದೇಶ)			
1.	ತಳ್ಳುವ ಗಾಡಿ	ರೂ. 0.30 ಲಕ್ಷಗಳು/ಘಟಕಕ್ಕೆ	ಶೇ. 50	ರೂ. 0.15 ಲಕ್ಷಗಳು/ಘಟಕಕ್ಕೆ
ಇತರೆ ಕಾರ್ಯಕ್ರಮಗಳು				
1.	ರಾಷ್ಟ್ರೀಯ ಮಟ್ಟ	ರೂ. 5.00 ಲಕ್ಷಗಳು/ಕಾರ್ಯಕ್ರಮಕ್ಕೆ		
2.	ರಾಜ್ಯ ಮಟ್ಟ	ರೂ. 3.00 ಲಕ್ಷಗಳು/ಕಾರ್ಯಕ್ರಮಕ್ಕೆ		
3.	ಜಿಲ್ಲಾ ಮಟ್ಟ	ರೂ. 2.00 ಲಕ್ಷಗಳು/ಕಾರ್ಯಕ್ರಮಕ್ಕೆ		
4.	ಪ್ರಚಾರ ಮತ್ತು ಸಾಹಿತ್ಯಕ್ಕಾಗಿ	ರೂ. 0.40 ಲಕ್ಷ/ ತಾಲ್ಲೂಕು		
3. ಉತ್ಪಾದನಾ ಸುಧಾರಣಾ ಕಾರ್ಯ ಯೋಜನೆಗಾಗಿ ತೆಂಗಿನಲ್ಲಿ ಸಂಯೋಜಿತ ಬೇಸಾಯ				
1.	ಹಳೆ ಪ್ರಾತ್ಯಕ್ಷತೆ ತಾಕುಗಳ ನಿರ್ವಹಣೆ	ರೂ. 17500/- ಪ್ರತಿ ಹೆಕ್ಟೇರ್ ಗೆ	ಶೇ. 100	ರೂ. 17,500/- ಪ್ರತಿ ಹೆಕ್ಟೇರ್ ಗೆ
2.	ತೆಂಗಿನ ತೋಟಗಳ ಪುನಃಶ್ಚೇತನ ಹಾಗೂ ಮರುನಾಟಿ ಮತ್ತು ನಿರ್ವಹಣೆ			
2a	ತೆಂಗಿನ ತೋಟಗಳಲ್ಲಿ ಸಂಪೂರ್ಣ ಒಣಗಿರುವ/ಹಳೆಯ/ಕೀಟ/ರೋಗ ಭಾದಿತ ಗಿಡಗಳನ್ನು ಬುಡ ಸಮೇತ ತೆಗೆದು ಹಾಕುವುದು.	ರೂ. 1000/- ಪ್ರತಿ ಗಿಡಕ್ಕೆ (ಗರಿಷ್ಟ 1 ಹೆಕ್ಟೇರ್ ಗೆ 32 ಗಿಡ/ಮರಗಳು)	ಶೇ. 100	ರೂ. 32,000/- ಪ್ರತಿ ಹೆಕ್ಟೇರ್ ಗೆ
2b	ಮರುನಾಟಿ ಮಾಡಲು ಬೇಕಾಗುವ ಗಿಡಗಳ ಖರೀದಿಗೆ (ಗರಿಷ್ಟ 1 ಹೆಕ್ಟೇರ್ ಗೆ 100 ಸಸಿಗಳು)	ರೂ. 8000/- ಪ್ರತಿ ಹೆಕ್ಟೇರ್ ಗೆ	ಶೇ. 50	ರೂ. 4000/- ಪ್ರತಿ ಹೆಕ್ಟೇರ್ ಗೆ
2c	ಪುನಶ್ಚೇತನ ಮತ್ತು ನಿರ್ವಹಣೆ	ರೂ. 70000/- ಪ್ರತಿ ಹೆಕ್ಟೇರ್	ಶೇ. 25	ರೂ. 17,500/- ಪ್ರತಿ ಹೆಕ್ಟೇರ್ ಗೆ

		ಗೆ		- 2 ವಾರ್ಷಿಕ ಕಂತುಗಳಲ್ಲಿ (ವರ್ಷಕ್ಕೆ ರೂ. 8,750/- ಗಳು)
3.	ಕ್ಷೇತ್ರೀಯ ತೆಂಗು ನರ್ಸರಿ ಕಾರ್ಯಕ್ರಮ	ಸಸಿಗಳ ಉತ್ಪಾದನೆ		
4. ಸಾಮರ್ಥ್ಯವುಳ್ಳ ರಾಜ್ಯಗಳಲ್ಲಿ ಎಣ್ಣೆ ತಾಳೆಯ ವ್ಯವಸಾಯ				
1.	ತಾಳೆ ಸಸಿಗಳಿಗೆ ಸಹಾಯಧನ (ಪೂರ್ಣ ವಿಸ್ತೀರ್ಣಕ್ಕೆ)	ದೇಶಿ ಮೂಲದ ಸಸಿಗಳಿಗೆ – ರೂ. 96/- ವಿದೇಶಿ ಮೂಲದ ಸಸಿಗಳಿಗೆ – ರೂ. 118/-	ಶೇ. 85	ಗರಿಷ್ಟ ರೂ.12,000/- ಪ್ರತಿ ಹೆಕ್ಟೇರ್ ಗೆ
2.	ಬೇಸಾಯ ಸಹಾಯಧನ: (ಪೂರ್ಣ ವಿಸ್ತೀರ್ಣಕ್ಕೆ) ಮೊದಲ 4 ವರ್ಷ ಸಸಿಗಳನ್ನು ಪೋಷಿಸಲು, ರಾಸಯನಿಕ ಗೊಬ್ಬರ ವನ್ನು ಒದಗಿಸುವುದು	ರೂ. 10,000/-ಪ್ರತಿ ಹೆಕ್ಟೇರ್ ಗೆ	ಶೇ. 50	ರೂ. 5,000/- ಪ್ರತಿ ಹೆಕ್ಟೇರ್ ಗೆ
3.	ಎತ್ತರವಾದ ತಾಳೆ ಮರಗಳಿಂದ ತಾಳೆ ಹಣ್ಣುಗಳನ್ನು ಕಟಾವು ಮಾಡಲು ಉತ್ತೇಜನ	ರೂ.2000/- ಪ್ರತಿ ಟನ್ ಗೆ	ಶೇ. 50	ರೂ.1,000/- ಪ್ರತಿ ಟನ್ ಗೆ
4.	ತಾಳೆ ಹಣ್ಣುಗಳ ಸಾಗಾಣಿಕೆಗಾಗಿ ಪ್ರೋತ್ಸಾಹಧನ	ಸಾಗಾಣಿಕೆ ಮಾಡಲು ತಗಲುವ ವೆಚ್ಚಕ್ಕೆ	ಶೇ. 50	ರೂ. 300/- ಪ್ರತಿ ಟನ್ ಗೆ
5.	1. ಕೊಳವೆ ಬಾವಿ ಕೊರೆಯಲು 2. ಡೀಸಲ್ ಪಂಪ್ ಸೆಟ್/ವಿದ್ಯುತ್ ಚಾಲಿತ ಪಂಪ್ ಸೆಟ್ ಗೆ ಸಹಾಯಧನ	ತಗಲುವ ವೆಚ್ಚಕ್ಕೆ	ಶೇ. 50	1. ಗರಿಷ್ಟ ರೂ. 50000/- 2. ರೂ. 22500/- (ಸಾಮಾನ್ಯ ರೈತರಿಗೆ) ರೂ. 27500/- (ಪ.ಜಾ., ಪ.ಪಂ., ಸಣ್ಣ, ಅತಿ ಸಣ್ಣ ರೈತರಿಗೆ)
6.	ತಾಳೆ ತೋಟದಲ್ಲಿ ಅಂತರ ಬೆಳೆ ಬೇಸಾಯಕ್ಕೆ ಸಹಾಯಧನ (ಪೂರ್ಣ ವಿಸ್ತೀರ್ಣಕ್ಕೆ)		ಶೇ. 50	ರೂ. 5,000/- ಪ್ರತಿ ಹೆಕ್ಟೇರ್ ಗೆ

7.	ತಾಳೆಬೆಳೆ ಬೇಸಾಯಕ್ಕೆ ಅವಶ್ಯವಿರುವ ಯಂತ್ರೋಪಕರಣಗಳ ಖರೀದಿಗೆ ಸಹಾಯಧನ			
7a.	Oil palm cutter		ಶೇ. 50	ರೂ. 3,000/- ಪ್ರತಿ ಘಟಕ
7b.	Motorised chisel		ಶೇ. 50	ರೂ. 10,000/- ಪ್ರತಿ ಘಟಕ
7c.	Aluminium portable ladder		ಶೇ. 50	ರೂ. 3,000/- ಪ್ರತಿ ಘಟಕ
7d.	Chaff cutter for chaffling of oil palm leaves		ಶೇ. 50	ರೂ. 1600/- ಸಾಮಾನ್ಯ ವರ್ಗಕ್ಕೆ, ರೂ. 2000/- ಪ.ಜಾ/ಪ.ಪಂ/ಸಣ್ಣ/ಅತಿ ಸಣ್ಣ/ಮಹಿಳೆ ರೈತರಿಗೆ ಪ್ರತಿ ಘಟಕಕ್ಕೆ
8	ತಾಳೆ ಹಣ್ಣುಗಳಿಗೆ ಖಚಿತ ಬೆಂಬಲ ಬೆಲೆ			ರೂ. 12500/- ಪ್ರತಿ ಟನ್
5.	**ಪರಂಪರಾಗತ ಕೃಷಿ ವಿಕಾಸ ಯೋಜನೆ**			
1.	ಸಾವಯುವ ಪರಿವರ್ತನೆಗಾಗಿ (ಗುಚ್ಛ ಮಾದರಿಯಲ್ಲಿ)(ಗರಿಷ್ಟ 2 ಹೆಕ್ಟೇರ್ ಗೆ)			ರೂ. 12,000/- ಪ್ರತಿ ಹೆಕ್ಟೇರ್ ಗೆ (ಮೊದಲನೇ ವರ್ಷ) ರೂ. 10,000/- ಪ್ರತಿ ಹೆಕ್ಟೇರ್ ಗೆ (ಎರಡನೇ ವರ್ಷ) ರೂ. 9,000/- ಪ್ರತಿ ಹೆಕ್ಟೇರ್ ಗೆ (ಮೂರನೇ ವರ್ಷ)
6.	**ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ**			
1.	ನೀರು ಸಂಗ್ರಹಣಾ ಘಟಕ ನಿರ್ಮಾಣಕ್ಕೆ ಸಹಾಯಧನ			

	ನೆಲಮಟ್ಟಕ್ಕಿಂತ ಕೆಳಗೆ • 4500 ಕ್ಯುಬಿಕ್ ಮೀಟರ್ • 6500 ಕ್ಯುಬಿಕ್ ಮೀಟರ್ • 9000 ಕ್ಯುಬಿಕ್ ಮೀಟರ್	ರೂ. 5.625 ಲಕ್ಷಗಳು ರೂ. 8.00 ಲಕ್ಷಗಳು ರೂ. 10.00 ಲಕ್ಷಗಳು	ಶೇ 50 ಶೇ 50 ಶೇ 50	ರೂ. 2.8125 ಲಕ್ಷಗಳು ರೂ.4.00ಲಕ್ಷಗಳು ರೂ.5.00ಲಕ್ಷಗಳು
	ನೆಲಮಟ್ಟಕ್ಕಿಂತ ಮೇಲೆ • 100000 ಲೀ Capacity • 200000 ಲೀ Capacity • 500000 ಲೀ Capacity	ರೂ. 6.5 ಲಕ್ಷಗಳು ರೂ. 10.00 ಲಕ್ಷಗಳು ರೂ. 15.00 ಲಕ್ಷಗಳು	ಶೇ 50 ಶೇ 50 ಶೇ 50	ರೂ. 3.25 ಲಕ್ಷಗಳು ರೂ.5.00 ಲಕ್ಷಗಳು ರೂ.7.50 ಲಕ್ಷಗಳು
2.	ಸಂರಕ್ಷಿತ ಬೇಸಾಯದಡಿ ಪಾಲಿಥೀನ್ ಶೀಟ್ ಬದಲಾವಣೆಗೆ ಸಹಾಯಧನ	ರೂ. 6.00 ಲಕ್ಷಗಳು/ ಹೆಕ್ಟೇರ್	ಶೇ. 25	ಗರಿಷ್ಟ ರೂ. 1.50 ಲಕ್ಷಗಳು
3.	ಸಂರಕ್ಷಿತ ಬೇಸಾಯದಡಿ ಗಿಡಗಳ ಬದಲಾವಣೆಗೆ ಸಹಾಯಧನ	ರೂ 5.00 ಲಕ್ಷಗಳು/ ಹೆಕ್ಟೇರ್ ಹೂವಿನ ಬೆಳೆಗಳು ರೂ 2.50 ಲಕ್ಷಗಳು/ ಹೆಕ್ಟೇರ್ ತರಕಾರಿ ಬೆಳೆಗಳು	ಶೇ. 25 ಶೇ. 25	ಗರಿಷ್ಟ ರೂ. 1.25 ಲಕ್ಷಗಳು ಗರಿಷ್ಟ ರೂ. 0.625 ಲಕ್ಷಗಳು
3.	ತೋಟಗಾರಿಕೆ ಬೆಳೆಗಳ ಗುಣಮಟ್ಟದ ಉತ್ಪಾದನೆಗೆ ವಿಶೇಷ ಉತ್ತೇಜನ ಕಾರ್ಯಕ್ರಮ			
	1.ನೀರಿನಲ್ಲಿ ಕರಗುವ ರಸಗೊಬ್ಬರ ಘಟಕಕ್ಕೆ			
	• ಸಂರಕ್ಷಿತ ಬೇಸಾಯದ ಬೆಳೆಗಳಿಗೆ	ರೂ. 0.50 ಲಕ್ಷ	ಶೇ. 25	ರೂ. 0.125 ಲಕ್ಷ

71

	ಸಹಾಯಧನ			
	• ತೆರೆದ ವಾತಾವರಣದಲ್ಲಿ ಬೆಳೆಯುವ ಬೆಳೆಗಳಿಗೆ ಸಹಾಯಧನ	ರೂ. 0.25 ಲಕ್ಷ	ಶೇ. 25	ರೂ. 0.05 ಲಕ್ಷ
	2. ಲಘು ಪೋಷಕಾಂಶಗಳ ಮಿಶ್ರಣ ಮತ್ತು ಬೆಳೆ ಸ್ಪೆಷಲ್ ಗಳಿಗೆ ಸಹಾಯಧನ (ಗರಿಷ್ಟ 1 ಹೆಕ್ಟೇರ್ ಗೆ)	ರೂ. 0.03 ಲಕ್ಷ	ಶೇ. 25	ರೂ. 750/-
	3. ಬೆಳೆ/ಹಣ್ಣು/ಹೂವು ಹೊದಿಕೆಗಳಿಗೆ ಸಹಾಯಧನ	ರೂ. 0.20 ಲಕ್ಷ	ಶೇ. 25	ರೂ. 0.05 ಲಕ್ಷ
	4. ಸುರಂಗ ಮಾದರಿಯಲ್ಲಿ ಹಸಿರು ಮನೆ	ರೂ. 4.80 ಲಕ್ಷಗಳು (800 ಚ.ಮೀ)	ಶೇ. 50	ಗರಿಷ್ಟ ರೂ2.40 ಲಕ್ಷಗಳು
	5. ಹಣ್ಣಿನ ಗಿಡಗಳ ಮೇಲಾವರಣ ನಿರ್ವಹಣೆ (ಗರಿಷ್ಟ 1 ಹೆಕ್ಟೇರ್ ಗೆ)	ರೂ. 0.40 ಲಕ್ಷ/ಹೆಕ್ಟೇರ್ ಗೆ	ಶೇ. 25	ಗರಿಷ್ಟ ರೂ 0.10 ಲಕ್ಷ
4.	ಪೂರ್ಣ ಪ್ರಮಾಣದ ಸಂಸ್ಕರಣೆ ಮತ್ತು ಮೌಲ್ಯವರ್ಧನೆ	ಕನಿಷ್ಟ ರೂ. 50.00 ಲಕ್ಷಗಳಿಂದ ಗರಿಷ್ಟ ರೂ. 200.00 ಲಕ್ಷಗಳು	ಶೇ. 25	ಗರಿಷ್ಟ ರೂ. 50.00 ಲಕ್ಷಗಳು
5.	ಪ್ರಾಥಮಿಕ ಸಂಸ್ಕರಣಾ ಘಟಕಗಳು	ಕನಿಷ್ಟ ರೂ. 25.00 ಲಕ್ಷಗಳು	ಶೇ. 40	ಗರಿಷ್ಟ ರೂ. 10.00 ಲಕ್ಷಗಳು
6.	ಕಡಿಮೆ ವೆಚ್ಚದ ಈರುಳ್ಳಿ ಶೇಕರಣಾ ಘಟಕಗಳು	ರೂ. 1.75 ಲಕ್ಷಗಳು	ಶೇ. 50	ರೂ. 0.875 ಲಕ್ಷ
7.	ವಿಂಗಡನೆ, ಪ್ಯಾಕಿಂಗ್ ಮತ್ತು ಸಂಗ್ರಹಣೆ	ರೂ. 2.00 ಲಕ್ಷಗಳು	ಶೇ. 50	ರೂ. 1.00 ಲಕ್ಷ

	ಘಟಕಗಳು			
8.	Puneet box/ Plastic crates / Corrugated box	ರೂ. 0.15 ಲಕ್ಷ	ಶೇ. 25	ರೂ0.0375 ಲಕ್ಷ
7. ಕೃಷಿ ಯಾಂತ್ರೀಕರಣ ಉಪ ಅಭಿಯಾನ (SMAM) ಯೋಜನೆಯಡಿ ತೋಟಗಾರಿಕೆಯಲ್ಲಿ ಯಾಂತ್ರೀಕರಣ				
1.	ಯಂತ್ರೋಪಕರಣಗಳ ಖರೀದಿಗೆ ಸಹಾಯಧನ	ಶೇ.50 – ಪ.ಜಾ., ಪ. ಪಂ., ಸಣ್ಣ ಮತ್ತು ಅತೀ ಸಣ್ಣ ಹಾಗೂ ಮಹಿಳಾ ರೈತರಿಗೆ ಮತ್ತು ಶೇ.40 - ಸಾಮಾನ್ಯ ಮತ್ತು ಇತರ ವರ್ಗ		ಗರಿಷ್ಟ ರೂ. 1.25 ಲಕ್ಷಗಳು/ 5 ಯಂತ್ರೋಪಕರಣಗಳಿಗೆ

ರಾಜ್ಯ ವಲಯ ಯೋಜನೆಗಳು

ಕ್ರ.ಸಂ	ಕಾರ್ಯಕ್ರಮಗಳ/ಘಟಕದ ವಿವರ	ಘಟಕ ವೆಚ್ಚ	ಶೇ ಸಹಾಯಧನ		ಸಹಾಯಧನದ ಮೊತ್ತ	
1. ಸಮಗ್ರ ತೋಟಗಾರಿಕೆ ಅಭಿವೃದ್ಧಿ						
1.	ಹೂವಿನ ಬೆಳೆಗಾರರಿಗೆ ಪರಿಹಾರಧನ				ರೂ. 10,000/- ಪ್ರತಿ ಹೆಕ್ಟೇರ್ ಗೆ	
2.	ಹಣ್ಣು ಮತ್ತು ತರಕಾರಿ ಬೆಳೆಗಾರರಿಗೆ ಪರಿಹಾರಧನ				ರೂ. 10,000/- ಪ್ರತಿ ಹೆಕ್ಟೇರ್ ಗೆ	
			ಸಾಮಾನ್ಯ	ಪ.ಜಾ/ಪ.ಪಂ	ಸಾಮಾನ್ಯ	ಪ.ಜಾ/ಪ.ಪಂ
3.	ನೀರಿನ ಟ್ಯಾಂಕರ್ ಗಳಿಗೆ ಸಹಾಯಧನ	4000 ಲೀ 5000 ಲೀ	ಶೇ. 50 ಶೇ. 50	ಶೇ. 90 ಶೇ. 90	ರೂ. 62,500 ರೂ. 70,000	ರೂ. 1,12,500 ರೂ. 1,26,000
4.	ಅಣಬೆ ಉತ್ಪಾದನಾ ಘಟಕ	ರೂ. 3.00 ಲಕ್ಷಗಳು	ಶೇ. 50		ರೂ. 1.50 ಲಕ್ಷಗಳು	
5.	FPO ಪತಿಯಿಂದ ನಿರ್ಮಿಸಲಾಗುವ ಮೂಲಭೂತ ಸೌಕರ್ಯ ಗಳಿಗೆ ಸಹಾಯಧನ, ಬಾಡಿಗೆ ಆಧಾರಿತ ಯಂತ್ರೋಪಕರಣಗಳ		ಶೇ. 90			

	ಸೇವಾ ಕೇಂದ್ರ ಸ್ಥಾಪನೆಗೆ ಯಂತ್ರೋಪಕರಣಗಳ ಖರೀದಿಗೆ			
6.	ಆಲೂಗಡ್ಡೆ ಬೆಳೆಯಲ್ಲಿ Apical rooted cuttings ತಾಂತ್ರಿಕತೆಯ ಮಂಚೂಣಿ ಪ್ರಾತ್ಯಕ್ಷಿತೆ ಕುರಿತು ರೈತರಿಗೆ ತರಬೇತಿ			
2.	**ಇಲಾಖಾ ಪ್ರಯೋಗ ಶಾಲೆಗಳ ಅಭಿವೃದ್ಧಿ**			
1.	ಪ್ರಯೋಗಶಾಲೆಗೆ ರೈತರಿಂದ ಬರುವ ಮಣ್ಣು, ನೀರು ಹಾಗೂ ಎಲೆ ಮಾದರಿಗಳ ವಿಶ್ಲೇಷಣೆಗೆ ಇಲಾಖೆಯು ನಿಗಧಿಪಡಿಸಿರುವ ಶುಲ್ಕವನ್ನು ವಿಧಿಸಿ ವಿಶ್ಲೇಷಣಾ ಕಾರ್ಯವನ್ನು ಮಾಡುವುದು.			
2.	ಅಂಗಾಂಶ ಕೃಷಿ ಪದ್ಧತಿ ಹಾಗೂ ಹಸಿರುಮನೆ ತಾಂತ್ರಿಕತೆಯನ್ನು ಅಳವಡಿಸಿ ಅಭಿವೃದ್ಧಿ ಪಡಿಸಿದ ವಿವಿಧ ತೋಟಗಾರಿಕೆ ಬೆಳೆಗಳ ಉತ್ಕೃಷ್ಟ ಗುಣಮಟ್ಟದ ಸಸಿಗಳನ್ನು ವಿವಿಧ ಇಲಾಖಾ ಯೋಜನೆಗಳಡಿಯಲ್ಲಿ ಫಲಾನುಭವಿಗಳಿಗೆ ವಿತರಿಸುವುದು ಹಾಗೂ ಇಲಾಖಾ ನಿಗಧಿತ ದರದಲ್ಲಿ ರೈತರಿಗೆ / ಸರ್ವಜನಿಕರಿಗೆ ವಿತರಣೆ ಮಾಡುವುದು.			
3.	ವಿವಿಧ ಜಿಲ್ಲೆಗಳಿಂದ ತರಕಾರಿ ಬೀಜವನ್ನು ನಿಯಮಾನುಸಾರ ಅಧಿಕಾರಿಗಳಿಂದ ಸಂಗ್ರಹಿಸಿ ಇಲಾಖೆಯ ಬೀಜ ಪರೀಕ್ಷೆ ಪ್ರಯೋಗಶಾಲೆಯಲ್ಲಿ ವಿಶ್ಲೇಷಣೆ ಮಾಡುವುದು.			
4.	ಅಣಬೆ ಕೃಷಿಯನ್ನು ಪ್ರೋತ್ಸಾಹಿಸುವ ಸಲುವಾಗಿ, ಇಲಾಖೆಯಲ್ಲಿರುವ ಅಣಬೆ ಪ್ರಯೋಗಶಾಲೆಗಳಲ್ಲಿ ಅಣಬೆ ಸ್ಪಾನ್, ಆರ್.ಟಿ.ಎಫ್ ಚೀಲ ಮತ್ತು ಅಣಬೆ ಉತ್ಪಾದಿಸಿ ಮಾರಾಟ ಕಾರ್ಯಕ್ರಮ ಕೈಗೊಳ್ಳುವುದು. ಇದಲ್ಲದೇ ಅಣಬೆ ಕೃಷಿ ಮತ್ತು ಅದರ ಉಪಯುಕ್ತತೆ ಕುರಿತಂತೆ ಗ್ರಾಮೀಣ ಜನರು, ರೈತರು/ರೈತ ಮಹಿಳೆಯರು ಹಾಗೂ ನಗರವಾಸಿಗಳಿಗೆ ಅರಿವು ಮೂಡಿಸುವ ಉದ್ದೇಶದಿಂದ ಅಣಬೆ ತರಬೇತಿ ಕಾರ್ಯಕ್ರಮ			
5.	ಇಲಾಖಾ ಜೈವಿಕ ಕೇಂದ್ರಗಳ ವಿವಿಧ ವಿಭಾಗಕ್ಕೆ (ಅಂಗಾಂಶ ಕೃಷಿ ಪ್ರಯೋಗಾಲಯ, ಸಸ್ಯ ಪೋಷಕಾಂಶ ವಿಭಾಗ ಮತ್ತು ಅಣಬೆ ವಿಭಾಗ) ಸಂಬಂಧಿಸಿದಂತೆ ಸಾರ್ವಜನಿಕರಿಗೆ, ರೈತರಿಗೆ, ವಿದ್ಯಾರ್ಥಿಗಳಿಗೆ ಅವರ ನೆಚ್ಚಿನ ಆಯ್ಕೆಯ ವಿಭಾಗಗಳಲ್ಲಿ ಕನಿಷ್ಟ ಒಂದು ವಾರದ ಸವಿಸ್ತಾರವಾದ ತರಬೇತಿಯನ್ನು ನೀಡಲಾಗುವುದು.			
6.	ಜೈವಿಕ ಗೊಬ್ಬರ, ಜೈವಿಕ ನಿಯಂತ್ರಕಗಳು ಮತ್ತು ಎರೆಹುಳು ಗೊಬ್ಬರ ಉತ್ಪಾದಿಸಿ ಇಲಾಖಾ ನಿಗಧಿತ ದರದಲ್ಲಿ ರೈತರಿಗೆ / ಸಾರ್ವಜನಿಕರಿಗೆ ವಿತರಣೆ ಮಾಡುವುದು.			
3.	**ತೋಟಗಾರಿಕೆ ಬೆಳೆಗಳ ರೋಗ ಮತ್ತು ಕೀಟಗಳ ಸಮಗ್ರ ನಿಯಂತ್ರಣ**			
1.	ತೋಟಗಾರಿಕೆ ಬೆಳೆಗಳಿಗೆ ತಗಲುವ ರೋಗ ಮತ್ತು ಕೀಟಗಳ ನಿಯಂತ್ರಣಕ್ಕಾಗಿ ಸಸ್ಯ ಸಂರಕ್ಷಣೆ ಔಷಧಿಗಳ ಖರೀದಿಗೆ ಸಹಾಯಧನ	ರೂ. 10,000/- ಪ್ರತಿ ಹೆಕ್ಟೇರ್ ಗೆ	ಸಾಮಾನ್ಯ ಶೇ. 75	ಪ.ಜಾ/ಪ.ಪಂ ಶೇ. 90	ರೂ. 9,000/- ಪ.ಜಾತಿ ಮತ್ತು ಪ.ಪಂ ರೂ. 7,500/- ಸಾಮಾನ್ಯ ವರ್ಗಕ್ಕೆ

2.	ತೆಂಗಿನ ಕಪ್ಪು ತಲೆ ಹುಳುವಿನ ನಿಯಂತ್ರಣೆಗಾಗಿ ಪರೋಪಜೀವಿಗಳ ಉತ್ಪಾದನೆ ಹಾಗೂ ಬಾಧಿತ ತೋಟಗಳಿಗೆ ಬಿಡುಗಡೆಗೊಳಿಸುವುದು				
3.	ತೆಂಗಿನ ಬಿಳಿನೊಣ ಕೀಟಬಾಧೆಯನ್ನು ತಡೆಗಟ್ಟಲು ಐಸೇರಿಯಾ ಶಿಲೀಂದ್ರ ಉತ್ಪಾದನೆ ಹಾಗೂ ಬಾಧಿತ ತೋಟಗಳಿಗೆ ಬಿಡುಗಡೆಗೊಳಿಸುವುದು.				
4.	ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013				
1.	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ವರ್ಗದವರು ಖರೀದಿಸುವ 8 BHP & above ಪವರ್ ಟಿಲ್ಲರ್ ಗೆ ಸಹಾಯಧನ		ಶೇ. 50	ಶೇ. 90	ಗರಿಷ್ಠ ರೂ.0.75 ಲಕ್ಷ
5.	ಮಧುವನ ಮತ್ತು ಜೇನು ಸಾಕಾಣೆ ಅಭಿವೃದ್ಧಿ (ರಾಜ್ಯ ಮತ್ತು ಜಿಲ್ಲಾ ವಲಯ)				
1.	ಜೇನು ಪೆಟ್ಟಿಗೆ, ಜೇನು ಕುಟುಂಬಗಳ ಹಾಗೂ ಸ್ಟ್ಯಾಂಡ್ ಗಳ ಖರೀದಿಗಾಗಿ ಸಹಾಯಧನ	ರೂ. 4500/-	ಶೇ. 75	ಶೇ. 90	ರೂ. 4,050/- ಪ.ಜಾತಿ ಮತ್ತು ಪ.ಪಂ ರೂ. 3,375/- ಸಾಮಾನ್ಯ ವರ್ಗಕ್ಕೆ
2.	ಜೇನು ಸಾಕಾಣೆ ಆಸಕ್ತರಿಗೆ 2 ದಿನದ ತರಬೇತಿ				ರೂ. 400/- ಪ್ರತಿ ದಿನದ ತರಬೇತಿಗೆ
3.	ರೈತ ಮಕ್ಕಳಿಗೆ 3 ತಿಂಗಳ ಅವಧಿಯ ವಸತಿ ಸಹಿತ ಜೇನುಕೃಷಿ ತರಬೇತಿ (20 ಸಂಖ್ಯೆ)				ರೂ. 1250/- ವಿದ್ಯಾರ್ಥಿ ವೇತನ ಪ್ರತಿ ಮಾಹೆಗೆ
4.	ಮಧುವನ ಜೇನು ಸಾಕಾಣೆ ಆಸಕ್ತರಿಗೆ ಖಾಸಗಿ ಮಧುವನ ಸ್ಥಾಪನೆಗೆ ಸಹಾಯಧನ	ರೂ. 1.00 ಲಕ್ಷ	ಶೇ.75		ರೂ. 75,000/-
6.	ಕೃಷಿ ಕ್ಷೇತ್ರ ಮತ್ತು ಸಸ್ಯವಾಟಿಕೆಗಳ ಅಭಿವೃದ್ಧಿ ಮತ್ತು ನಿರ್ವಹಣೆ (ರಾಜ್ಯ ಮತ್ತು ಜಿಲ್ಲಾ)				
1.	ಮಾವು, ಸೀಬೆ, ನೇರಳೆ, ಕೋಕೋ,ಗೇರು, ಅಂಗಾಂಶ ಕೃಷಿ ಸಸಿಗಳು, ಹಲಸು, ಕಾಳು ಮೆಣಸು, ತೆಂಗು ಹಾಗೂ ತರಕಾರಿ ಬೆಳೆಗಳು ಇತ್ಯಾದಿ ಅತ್ಯವಶ್ಯವಿರುವ ಕಸಿ/ಸಸಿಗಳ ಉತ್ಪಾದನೆ ಹಾಗೂ ರೈತರಿಗೆ ಮತ್ತು ಸಾರ್ವಜನಿಕರಿಗೆ ಇಲಾಖಾ ನಿಗದಿತ ದರದಲ್ಲಿ ನೀಡಲಾಗುವುದು.				

15	ಸಿದ್ದಗಂಗಮ್ಮ ಕೋಂ ಲೇ. ರಾಮಯ್ಯ (ರಾಮಣ್ಣ)	ಸಂಕಾಪುರ	ಗುಬ್ಬಿ
16	ಕರಿಯಮ್ಮ ಕೋಂ ಜಯರಾಮಯ್ಯ	ಹರಳೇಕಟ್ಟೆ	ಗುಬ್ಬಿ

ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 246

ಸದಸ್ಯರ ಹೆಸರು : ಡಾ|| ರಾಜೇಶ್ ಗೌಡ

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಬಹಳ ಹಿಂದಿನಿಂದಲೂ ಇದ್ದಂತಹ ಹಳೆಯ ಬಸ್ ಮಾರ್ಗಗಳಲ್ಲಿ ಕೆ.ಎಸ್.ಆರ್.ಟಿ.ಸಿ ಬಸ್‌ಗಳ ಓಡಾಟವನ್ನು ನಿಲ್ಲಿಸಿರುವುದರಿಂದ ಆ ಭಾಗದ ಸಾರ್ವಜನಿಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕೋವಿಡ್-19ರ ಸಾಂಕ್ರಾಮಿಕದಿಂದಾಗಿ ವಿಧಿಸಲಾಗಿದ್ದ ಲಾಕ್‌ಡೌನ್ ಪೂರ್ವದಲ್ಲಿ ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಲ್ಲಿ ಕಾರ್ಯಾಚರಣೆ ಮಾಡುತ್ತಿದ್ದ ಎಲ್ಲಾ ಅನುಸೂಚಿ/ ಸುತ್ತುವಳಿಗಳನ್ನು ಪ್ರಸ್ತುತ ಕಾರ್ಯಾಚರಣೆ ಮಾಡುತ್ತಿದ್ದು, ಸಾರ್ವಜನಿಕ ಪ್ರಯಾಣಿಕರ ಹಾಗೂ ಶಾಲಾ/ಕಾಲೇಜು ವಿದ್ಯಾರ್ಥಿಗಳ ಅವಶ್ಯಕತೆಗನುಗುಣವಾಗಿರುತ್ತವೆ. ಈ ಭಾಗದ ಸಾರ್ವಜನಿಕ ಪ್ರಯಾಣಿಕರು ಹಾಗೂ ಶಾಲಾ/ಕಾಲೇಜು ವಿದ್ಯಾರ್ಥಿಗಳು ನಿಗಮದ ಸಾರಿಗೆಗಳ ಪ್ರಯೋಜನವನ್ನು ಪಡೆದುಕೊಳ್ಳುತ್ತಿದ್ದಾರೆ.
ಆ.	ಬಂದಿದ್ದಲ್ಲಿ, ಈ ಭಾಗದಲ್ಲಿ ಬಸ್ ಸಂಚಾರ ಪ್ರಾರಂಭಿಸಲು ಶಿರಾ ಡಿಪೋದಲ್ಲಿ ಸಿಬ್ಬಂದಿಗಳ ಕೊರತೆಯಿರುವುದಾಗಿ ಮೇಲಾಧಿಕಾರಿಗಳು (ಡಿಪೋ ಮ್ಯಾನೇಜರ್) ತಿಳಿಸಿದ್ದು, ಸಿಬ್ಬಂದಿಗಳ ಕೊರತೆ ನೀಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು;	ಪ್ರಸ್ತುತ ಶಿರಾ ಘಟಕದಿಂದ ಆಚರಣೆ ಮಾಡುತ್ತಿರುವ ಅನುಸೂಚಿಗಳ ಕಾರ್ಯಾಚರಣೆಗೆ 7 ಚಾಲಕ/ನಿರ್ವಾಹಕರ ಕೊರತೆ ಇರುತ್ತದೆ. ಕೋವಿಡ್-19ರ ಪೂರ್ವದಲ್ಲಿ ಚಾಲಕ/ ನಿರ್ವಾಹಕರನ್ನು ನೇಮಿಸಿಕೊಳ್ಳಲು ಅಧಿಸೂಚನೆ ಹೊರಡಿಸಿದ್ದು, ಪ್ರಸ್ತುತ ಕರೋನಾ ಪ್ರಯುಕ್ತ ನಿಗಮದ ಆರ್ಥಿಕ ಪರಿಸ್ಥಿತಿಯು ಸಂಕಷ್ಟದಲ್ಲಿರುವ ಕಾರಣ ಹಾಗೂ ಆರ್ಥಿಕ ಇಲಾಖೆಯು ನೇರ ನೇಮಕಾತಿ ಪ್ರಕ್ರಿಯೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿರುವ ಹಿನ್ನೆಲೆಯಲ್ಲಿ, ಪ್ರಸ್ತುತ ಸದರಿ ನೇರ ನೇಮಕಾತಿಯನ್ನು ಪುನರ್ ಪ್ರಾರಂಭಿಸಲು ಆರ್ಥಿಕ ಇಲಾಖೆಯ ಅನುಮೋದನೆ ಪಡೆಯುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.
ಇ.	ಸಾರ್ವಜನಿಕರು ಮತ್ತು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಮುಂದಿನ ದಿನಗಳಲ್ಲಿ ಶಿರಾ ವ್ಯಾಪ್ತಿಯಲ್ಲಿ ಸ್ಥಗಿತಗೊಳಿಸಿರುವ ಹಳೆಯ ಬಸ್ ಮಾರ್ಗಗಳನ್ನು ಪುನಃ ಆರಂಭಿಸಲು ಕೈಗೊಂಡ ಕ್ರಮಗಳೇನು;	ಉಪ ಪ್ರಶ್ನೆ "ಅ" ರಲ್ಲಿ ಉತ್ತರಿಸಲಾಗಿದೆ

ಈ.	ಹಳೆಯ ಬಸ್ ಮಾರ್ಗಗಳನ್ನು ಪುನಃ ಪ್ರಾರಂಭಿಸುವಂತೆ ಸಾರ್ವಜನಿಕರಿಂದ ಹಾಗೂ ಜನಪ್ರತಿನಿಧಿಗಳಿಂದ ಮನವಿಗಳೇನಾದರೂ ಬಂದಿವೆಯೇ; ಬಂದಿದ್ದಲ್ಲಿ, ಈ ಬಗ್ಗೆ ಕೈಗೊಂಡಿರುವ ಕ್ರಮವೇನು? (ಪೂರ್ಣ ವಿವರ ನೀಡುವುದು)	ಲಾಕ್‌ಡೌನ್ ಪೂರ್ವದಲ್ಲಿ ಆಚರಣೆ ಮಾಡುತ್ತಿದ್ದ ಎಲ್ಲಾ ಅನುಸೂಚಿ/ ಸುತ್ತುವಳಿಗಳನ್ನು ಪ್ರಸ್ತುತ ಕಾರ್ಯಾಚರಣೆ ಮಾಡಲಾಗುತ್ತಿರುವುದರಿಂದ ಈ ಬಗ್ಗೆ ಸಾರ್ವಜನಿಕರು/ ಜನಪ್ರತಿನಿಧಿಗಳಿಂದ ಮನವಿಗಳು ಬಂದಿರುವುದಿಲ್ಲ.

ಸಂಖ್ಯೆ: ಟಿಡಿ 250 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 247

ಸದಸ್ಯರ ಹೆಸರು : ಶ್ರೀ ಸಂಜೀವ ಮಠಂದೂರ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಪುತ್ತೂರು ವಿಭಾಗದಲ್ಲಿ ಚಾಲಕ, ನಿರ್ವಾಹಕ, ತಾಂತ್ರಿಕ ಸಿಬ್ಬಂದಿಗಳ ಕೊರತೆಯಿಂದ ಗ್ರಾಮೀಣ ಸಾರಿಗೆ ವ್ಯವಸ್ಥೆಯಲ್ಲಿ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪುತ್ತೂರು ವಿಭಾಗದಿಂದ 493 ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲಾಗುತ್ತಿದ್ದು, ಸದರಿ ಅನುಸೂಚಿಗಳ ಕಾರ್ಯಾಚರಣೆಗೆ 1564 ಚಾಲನಾ ಸಿಬ್ಬಂದಿಗಳ ಅವಶ್ಯಕತೆ ಇರುತ್ತದೆ. ಪ್ರಸ್ತುತ 1545 ಚಾಲನಾ ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಅದರಂತೆ, ವಿಭಾಗದಲ್ಲಿ 19 ಚಾಲನಾ ಸಿಬ್ಬಂದಿಗಳ ಕೊರತೆಯಾಗಿರುತ್ತದೆ. ಕೋವಿಡ್-19ರ ಲಾಕ್‌ಡೌನ್ ಪೂರ್ವದಲ್ಲಿ 282 ಸಾಮಾನ್ಯ ಅನುಸೂಚಿಗಳಿದ್ದು (ಗ್ರಾಮೀಣ ಸಾರಿಗೆಗಳು), ಪ್ರಸ್ತುತ ಸ್ಥಳೀಯ ಬೇಡಿಕೆಗಳಿಗನುಗುಣವಾಗಿ 272 ಅನುಸೂಚಿಗಳಿಂದ 2054 ಸರತಿಗಳ ಸಾರಿಗೆ ಸೌಲಭ್ಯವನ್ನು ಪುತ್ತೂರು ವಿಭಾಗದಿಂದ ಕಾರ್ಯಾಚರಿಸಲಾಗುತ್ತಿದ್ದು, ಅವಶ್ಯಕತೆಗೆ ಅನುಗುಣವಾಗಿದೆ. ಪುತ್ತೂರು ವಿಭಾಗದ ಚಾಲಕ, ನಿರ್ವಾಹಕ, ತಾಂತ್ರಿಕ ಸಿಬ್ಬಂದಿಗಳ ಮಂಜೂರಾತಿ, ಕಾರ್ಯನಿರ್ವಹಣೆ, ಖಾಲಿ ಸ್ಥಾನ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ. ಪ್ರಸ್ತುತ 19 ಚಾಲನಾ ಸಿಬ್ಬಂದಿ, 189 ತಾಂತ್ರಿಕ ಸಹಾಯಕ ಹುದ್ದೆಗಳು ಖಾಲಿಯಿದ್ದು, ಅವುಗಳನ್ನು ನೇರ ನೇಮಕಾತಿಯಿಂದ ತುಂಬಬೇಕಾಗಿರುತ್ತದೆ.
ಆ.	ಬಂದಿದ್ದಲ್ಲಿ, ಸಿಬ್ಬಂದಿ ನೇಮಕಾತಿ ಪ್ರಕ್ರಿಯೆಗಳನ್ನು ಜಿಲ್ಲಾವಾರು ನಡೆಸುವ ಯೋಜನೆ ಸರ್ಕಾರದ ಮುಂದಿದೆಯೇ?	ಕ.ರಾ.ರ.ಸಾ.ನಿಗಮದ ವ್ಯಾಪ್ತಿಯಲ್ಲಿನ ಒಟ್ಟು 16 ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಕ್ರೋಢೀಕರಿಸಿ ಕೇಂದ್ರ ಕಛೇರಿ ಮಟ್ಟದಲ್ಲಿ ನೇಮಕಾತಿ ಮಾಡಿ ಎಲ್ಲಾ ವಿಭಾಗಗಳಿಗೆ ಹಂಚಿಕೆ ಮಾಡುವ ಪದ್ಧತಿ ರೂಢಿಯಲ್ಲಿರುತ್ತದೆ. ಅದರಂತೆ, ವಿಭಾಗಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಆಧರಿಸಿ ಒಟ್ಟು 3745 ಚಾಲನಾ ಸಿಬ್ಬಂದಿಗಳ ನೇರನೇಮಕಾತಿಗಾಗಿ ಜಾಹೀರಾತು ಹೊರಡಿಸಿ ಅರ್ಜಿಗಳನ್ನು ಸ್ವೀಕರಿಸಲಾಗಿರುತ್ತದೆ. ಮುಂದುವರೆದು, ಖಾಲಿ ಇರುವ 726 ತಾಂತ್ರಿಕ ಸಹಾಯಕ ಹುದ್ದೆಗಳಿಗೆ ಆಯ್ಕೆಪಟ್ಟಿ ಪ್ರಕಟಿಸಲು ಬಾಕಿ ಇರುತ್ತದೆ. ಪ್ರಸ್ತುತ, ನೇರ ನೇಮಕಾತಿ ಪ್ರಕ್ರಿಯೆಯನ್ನು ಕೈಗೊಳ್ಳಲು ಕೋವಿಡ್-19ರ ಹಿನ್ನಲೆಯಲ್ಲಿ ಆರ್ಥಿಕ ಇಲಾಖೆಯಿಂದ ನಿರ್ಬಂಧಿಸಲಾಗಿರುತ್ತದೆ. ಪ್ರಸ್ತುತ ಆರ್ಥಿಕ ಇಲಾಖೆಯ ಅನುಮತಿ ಪಡೆಯಲು ಕ್ರಮವಹಿಸಲಾಗುತ್ತಿದೆ.

ಸಂಖ್ಯೆ: ಟಿಡಿ 251 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರಾರಸಾ ನಿಗಮ:: ಕೇಂದ್ರ ಕಛೇರಿ::ಬೆಂಗಳೂರು

ಪುತ್ತೂರು ವಿಭಾಗದ ಚಾಲನಾ ಹಾಗೂ ತಾಂತ್ರಿಕ ಸಿಬ್ಬಂದಿಗಳ ಮಂಜೂರಾತಿ, ಕಾರ್ಯನಿರ್ವಹಣೆ ಹಾಗೂ ಖಾಲಿಸ್ಥಾನದ ವಿವರ ನವಂಬರ್-2021

ಅನುಬಂಧ-ಅ

ಕ್ರ.ಸಂ	ಘಟಕ	ಚಾಲನಾ ಸಿಬ್ಬಂದಿಗಳು									ಒಟ್ಟು		
		ಚಾಲಕ			ಚಾಲಕ-ಕಂ-ನಿರ್ವಾಹಕ			ನಿರ್ವಾಹಕ					
		S	W	V	S	W	V	S	W	V	S	W	V
1	ಪುತ್ತೂರು ಘಟಕ	179	127	-52	0	178	178	179	42	-137	**358**	**347**	**-11**
2	ಧರ್ಮಸ್ಥಳ ಘಟಕ	194	136	-58	0	200	200	194	43	-151	**388**	**379**	**-9**
3	ಬಿ.ಸಿ.ರೋಡ್ ಘಟಕ	144	86	-58	0	186	187	144	17	-127	**288**	**289**	**1**
4	ಮಡಿಕೇರಿ ಘಟಕ	167	108	-59	0	187	186	167	39	-128	**334**	**334**	**0**
5	ಸುಳ್ಯ ಘಟಕ	93	60	-33	0	113	113	93	13	-80	**186**	**186**	**0**
6	ವಿಭಾಗೀಯ ಕಾರ್ಯಗಾರ/ ವಿಭಾಗೀಯ ಕಛೇರಿ	10	4	-6	0	6	6	0	0	0	**10**	**10**	**0**
	ಒಟ್ಟು	**787**	**521**	**-266**	**0**	**870**	**870**	**777**	**154**	**-623**	**1564**	**1545**	**-19**

ಕ್ರ ಸಂ	ಘಟಕ	ತಾಂತ್ರಿಕ ಸಿಬ್ಬಂದಿಗಳು																	
		ಕುಶಲಕರ್ಮಿ			ಸಹಾಯಕ ಕುಶಲಕರ್ಮಿ			ತಾಂತ್ರಿಕ ಸಹಾಯಕ			ಸಹಾಯಕ ಕಾರ್ಯಧೀಕ್ಷಕರು			ಪಾರುಪತ್ತೇಗಾರ			ಒಟ್ಟು		
		S	W	V	S	W	V	S	W	V	S	W	V	S	W	V	S	W	V
1	ಪುತ್ತೂರು	31	25	-6	27	31	4	60	7	-53	1	1	0	3	2	-1	122	66	-56
2	ಧರ್ಮಸ್ಥಳ	31	17	-14	27	22	-5	60	19	-41	1	1	0	3	4	1	122	63	-59
3	ಬಿ.ಸಿ.ರೋಡ್	21	20	-1	19	16	-3	41	7	-34	1	1	0	2	2	0	84	46	-38
4	ಮಡಿಕೇರಿ	26	14	-12	26	25	-1	43	8	-35	1	0	-1	2	2	0	98	49	-49
5	ಸುಳ್ಯ	8	12	4	8	8	0	22	6	-16	0	0	0	2	1	-1	40	27	-13
6	ವಿಭಾಗೀಯ ಕಾರ್ಯಗಾರ/ ವಿಭಾಗೀಯ ಉಗ್ರಾಣ/ಚಕ್ರ ಪುನ:ಸ್ಥಾಪರ	15	10	-5	17	18	1	17	7	-10	2	2	0	2	0	-2	53	37	-16
	ಒಟ್ಟು	132	98	-34	124	120	-4	243	54	-189	6	5	-1	**14**	**11**	**-3**	**519**	**288**	**231**

ಉಪ ಮುಖ್ಯ ಸಿಬ್ಬಂದಿ ವ್ಯವಸ್ಥಾಪಕರು
ಕ ರಾ ರ ಸಾ ನಿಗಮ, ಕೇಂದ್ರ ಕಛೇರಿ
ಬೆಂಗಳೂರು - 560 027

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 399
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 15-12-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ ಸಂಗ್ರಹದ ಪ್ರಮಾಣ ನಿಗಧಿತ ಗುರಿಯನ್ನು ತಲುಪದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣಗಳೇನು;	ಬಂದಿಲ್ಲ. 2020-21 ನೇ ಸಾಲಿಗಾಗಿ ರಾಜ್ಯದಲ್ಲಿನ ಗ್ರಾಮ ಪಂಚಾಯತಿಗಳಿಂದ ಶೇಕಡ 100 ರಷ್ಟು ಆಸ್ತಿ ತೆರಿಗೆ ಮೊತ್ತ ಸಂಗ್ರಹಿಸುವ ಗುರಿ ಹೊಂದಲಾಗಿತ್ತು. ಕೋವಿಡ್-19 ಲಾಕ್‌ಡೌನ್‌ನಿಂದಾಗಿ 2020-21ನೇ ಸಾಲಿನಲ್ಲಿ ಪ್ರಸಕ್ತ ಸಾಲಿನ ಬೇಡಿಕೆಗನುಗುಣವಾಗಿ ಶೇ. 88 ರಷ್ಟು ತೆರಿಗೆಯನ್ನು ಗ್ರಾಮ ಪಂಚಾಯತಿಗಳು ವಸೂಲಿ ಮಾಡಿರುತ್ತವೆ. 2021-22ನೇ ಸಾಲಿನಲ್ಲಿ ಪ್ರಸಕ್ತ ಸಾಲಿನ ಬೇಡಿಕೆಗನುಗುಣವಾಗಿ ದಿನಾಂಕ:06-12-2021 ರವರೆಗೆ ಶೇ.36 ರಷ್ಟು ತೆರಿಗೆಯನ್ನು ಗ್ರಾಮ ಪಂಚಾಯತಿಗಳು ವಸೂಲಿ ಮಾಡಿರುತ್ತವೆ. ಗ್ರಾಮ ಪಂಚಾಯತಿ ವ್ಯಾಪ್ತಿಯ ಭೂಮಿ ಮತ್ತು ಕಟ್ಟಡಗಳ ಮೇಲೆ ತೆರಿಗೆ ಸಂಗ್ರಹಣೆ ಮಾಡಲು ಸರ್ಕಾರದಿಂದ ಮತ್ತು ಜಿಲ್ಲಾ ಪಂಚಾಯತಿಗಳಲ್ಲಿ ಪ್ರತಿ ಮಾಹೆ ಪ್ರಗತಿ ಪರಿಶೀಲನಾ ಸಭೆಗಳನ್ನು ಜರುಗಿಸಿ, ಗ್ರಾಮ ಪಂಚಾಯತಿವಾರು ಗುರಿ ನಿಗಧಿಪಡಿಸಿ, ವಸೂಲಿ ಮಾಡಲು ಕ್ರಮ ವಹಿಸಲಾಗುತ್ತಿದೆ. ಮುಂದುವರೆದು, ತೆರಿಗೆ ವಸೂಲಾತಿಗಾಗಿ ಗ್ರಾಮಗಳಲ್ಲಿ ಡಂಗುರ ಸಾರಿಸಿ, ಜಾಥಾ ಕಾರ್ಯಕ್ರಮಗಳನ್ನು ಆಯೋಜಿಸಿ ಜನರಿಗೆ ತೆರಿಗೆ ಕಟ್ಟಿಸಲು ಉತ್ತೇಜಿಸುವುದು ಹಾಗೂ ಕರ ವಸೂಲಾತಿ ಮಾಸಾಚರಣೆಯನ್ನು ಹಮ್ಮಿಕೊಳ್ಳಲಾಗುತ್ತಿದೆ.
(ಆ)	ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿ ಆಸ್ತಿ ತೆರಿಗೆ (ಖಾಲಿ ನಿವೇಶನ ಮತ್ತು ಕಟ್ಟಡಗಳು) ಸಂಗ್ರಹಕ್ಕೆ ಸರ್ಕಾರ ಶಾಸನವನ್ನು ರೂಪಿಸಿದೆಯೇ; ಇಲ್ಲದಿದ್ದಲ್ಲಿ, ತೆರಿಗೆ ಸಂಗ್ರಹಕ್ಕೆ ಅನುಸರಿಸುತ್ತಿರುವ ಮಾನದಂಡಗಳೇನು;	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಯು ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆಗಳನ್ನು ಅಥವಾ ಫೀಜುಗಳನ್ನು ವಿಧಿಸಬಹುದಾಗಿದೆ.

(ಇ)	ಗ್ರಾಮ ಪಂಚಾಯಿತಿ ವ್ಯಾಪ್ತಿಯ ಪ್ರದೇಶಗಳಲ್ಲಿ ಆಸ್ತಿ ತೆರಿಗೆ ಸಂಗ್ರಹಕ್ಕಾಗಿ ಸರ್ಕಾರ ನಿಗಧಿಪಡಿಸಿದ ತೆರಿಗೆ ದರ ಮತ್ತು ತೆರಿಗೆ ಲೆಕ್ಕಾಚಾರದ ಮೂಲಗಳ ವಿವರಗಳೇನು; (ಸಮಗ್ರ ವಿವರಗಳ ಮಾರ್ಗಸೂಚಿ ಪ್ರತಿಗಳನ್ನು ಒದಗಿಸುವುದು)	ಗ್ರಾಮ ಪಂಚಾಯತಿಯು ಆಸ್ತಿ ತೆರಿಗೆ ಸಂಗ್ರಹಕ್ಕಾಗಿ ಸರ್ಕಾರ ನಿಗಧಿಪಡಿಸಿರುವ ತೆರಿಗೆ ದರ ಮತ್ತು ತೆರಿಗೆ ಲೆಕ್ಕಚಾರವನ್ನು ಈ ಕೆಳಕಂಡಂತೆ ಮಾಡಬೇಕಾಗಿರುತ್ತದೆ. 1. ತೆರಿಗೆಗೆ ಗುರಿಯಾಗುವ ಸ್ವತ್ತಿನ ಮೂಲ ಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, 1957 ರ 45–ಬಿ ಪ್ರಕರಣದಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು ಕಾಲಕಾಲಕ್ಕೆ ಅಧಿಸೂಚಿಸಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು. 2. ಕಟ್ಟಡದ ಖಾಲಿ ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣ ವಿಧಾನ, ಅದರ ಉಪಯೋಗ ಮತ್ತು ಕಟ್ಟಡದ ಆಯುಸ್ಸು ಮತ್ತು ನೇಮಿಸಬಹುದಾದ ಅಂತಹ ಇತರೆ ಯಾವುದೇ ಮಾನದಂಡಗಳನ್ನು ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ ನಿಯಮಿಸಲಾದ ತೆರಿಗೆಯ ನಿರ್ಧರಣೆ.
(ಈ)	ಗ್ರಾಮ ಪಂಚಾಯಿತಿಗಳಿಂದ 2020–21 ಹಾಗೂ 2021–22ನೇ ಸಾಲಿನಲ್ಲಿ ಆಸ್ತಿ ತೆರಿಗೆ ಸಂಗ್ರಹವಾದ ಭೌತಿಕ ಮತ್ತು ಆರ್ಥಿಕ ಗುರಿ ಎಷ್ಟು; ಸಂಗ್ರಹಿಸುವ ಮೊತ್ತದ ವಿವರ ಹಾಗೂ 2020–21 ಮತ್ತು 2021–22ನೇ ಸಾಲಿನ ನವೆಂಬರ್ 20 ರವರೆಗೆ ಸಂಗ್ರಹವಾದ ಮೊತ್ತವೆಷ್ಟು? (ವರ್ಷವಾರು, ಜಿಲ್ಲಾವಾರು ಮತ್ತು ತಾಲ್ಲೂಕುವಾರು ವಿರಗಳನ್ನು ನೀಡುವುದು)	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪಂಚತಂತ್ರ ವರದಿಯ ಪ್ರಕಾರ ರಾಜ್ಯದಲ್ಲಿನ ಗ್ರಾಮ ಪಂಚಾಯಿತಿಗಳು 2020–21ನೇ ಸಾಲಿನಲ್ಲಿ ಶೇ. 88 ರಷ್ಟು ಮತ್ತು 2021–22ನೇ ಸಾಲಿನಲ್ಲಿ ದಿನಾಂಕ: 06–12–2021 ರವರೆಗೆ ಶೇ. 36 ರಷ್ಟು ತೆರಿಗೆಯನ್ನು ವಸೂಲಿ ಮಾಡಿರುತ್ತವೆ. 2020–21 ಹಾಗೂ 2021–22ನೇ ಸಾಲಿನ ವರ್ಷವಾರು ಮತ್ತು ಜಿಲ್ಲಾವಾರು ಆಸ್ತಿ ತೆರಿಗೆ ವಿವರಗಳನ್ನು ಅನುಬಂಧದಲ್ಲಿ ನೀಡಿದೆ.

ಸಂ. ಗ್ರಾಅಪ 410 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:399 ಕ್ಕೆ ಅನುಬಂಧ

Financial Year : 2020-21AS ON 04/12/2021

District Name	OB (Rs in Lakhs)	Current Demand (Rs in Lakhs)	Total Demand (Rs in Lakhs)	Collection (Rs in Lakhs)	Balance (Rs in Lakhs)	% of Current Demand	% of Total Demand
GADAG	3095.8663	751.9264	3847.7928	681.2608	3166.532	91	18
SHIVAMOGGA	1187.7666	1057.0946	2244.8613	1074.3086	1170.5527	102	48
CHITRADURGA	5576.9056	1587.272	7164.1777	1108.7456	6055.4321	70	15
KALABURAGI	7868.0057	1073.4436	8941.4493	886.2619	8055.1874	83	10
HAVERI	7826.1862	1561.3149	9387.5012	1320.0103	8067.4909	85	14
KOLAR	2994.0519	1766.5824	4760.6343	1618:1405	3142.4938	92	34
UDUPI	716.5469	2535.3826	3251.9295	2525.2234	726.7061	100	78
BALLARI	2500.9281	1165.0318	3665.96	1118.8393	2547.1208	96	31
VIJAYAPURA	6739.9232	1250.1914	7990.1147	1005.0205	6985.0942	80	13
CHIKKAMAGALURU	3137.5648	1571.8877	4709.4524	1518.7469	3190.7056	97	32
CHAMARAJANAGARA	2039.837	937.1828	2977.0199	589.8983	2387.1216	63	20
KODAGU	831.1536	903.1376	1734.2911	888.2165	846.0746	98	51
KOPPAL	2469.6487	703.0038	3172.6526	746.9388	2425.7138	106	24
TUMAKURU	4887.576	2819.2024	7706.7784	2835.224	4871.5543	101	37
CHIKKABALLAPURA	3259.3077	1135.0697	4394.3774	905.0304	3489.3471	80	21
BAGALKOTE	4816.5486	1413.3349	6229.8838	1205.4815	5024.4023	85	19
BENGALURU RURAL	3702.8252	7164.2078	10867.033	5291.7246	5575.3084	74	49
BELAGAVI	15462.3301	3807.1965	19269.5268	3641.7003	15627.8265	96	19
BIDAR	4621.5967	881.2224	5502.8191	521.4614	4981.3577	59	9
DAVANAGERE	4069.5496	1130.7079	5200.2576	1078.9001	4121.3575	95	21
MYSURU	4760.8768	5185.7128	9946.5896	3727.1021	6219.4874	72	37
RAMANAGARA	2750.4851	3258.2748	6008.7599	2991.2532	3017.5067	92	50
YADGIR	3224.6165	526.3709	3750.9873	523.075	3227.9123	99	14
BENGALURU	8453.3158	15230.6691	23683.9849	14027.0122	9656.9727	92	59
DAKSHINA KANNADA	762.4845	3390.5996	4153.0844	3269.7651	883.3192	96	79
DHARWAR	2455.898	770.3027	3226.2009	749.8032	2476.3977	97	23
HASSAN	4612.6508	2822.0034	7434.6543	2171.2171	5263.4372	77	29
MANDYA	5812.7838	2653.9879	8466.7716	2300.8179	6165.9538	87	27
RAICHUR	2078.0161	1036.4982	3114.5144	1054.3707	2060.1438	102	34
UTTARA KANNADA	202.3053	1023.343	1225.6483	1016.0915	209.5568	99	83
TOTAL	122917.5512	71112.1556	194029.7085	62391.6417	131638.067	88	32

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 399 ಕ್ಕೆ ಅನುಬಂಧ

DISTRICT WISE DEMAND,COLLECTIONS AND BALANCE (Tax on Land,Tax on Building,Tax on Advertisement,Tax on Entertainment,Tax on Vehicle, Water Rate General,Water Rate Special, Street Light Charges)

Financial Year : 2021-22AS ON 06/12/2021 03:16:33

District Name	OB (Rs In Lakhs)	Current Demand (Rs In Lakhs)	Total Demand (Rs In Lakhs)	Collection (Rs In Lakhs)	Balance (Rs In Lakhs)	% of Collection against Currect Demand	% of Collection against Total Demand
UDUPI	598.17	2282.25	2880.42	779.17	2101.25	34	27
KODAGU	869.22	957.47	1826.68	332.55	1494.13	35	18
YADGIR	3056.43	548.29	3604.72	206.45	3398.27	38	6
DAVANAGERE	4227.42	1181.81	5409.23	376.81	5032.43	32	7
KOLAR	3079.07	1893.31	4972.38	870.37	4102.01	46	18
MANDYA	6243.47	2743.13	8986.60	1216.42	7770.18	44	14
BIDAR	4962.45	905.87	5868.33	234.42	5633.91	26	4
BALLARI	2493.31	1217.55	3710.87	557.76	3153.10	46	15
CHAMARAJANAGARA	2361.23	931.03	3292.26	297.26	2995.00	32	9
RAMANAGARA	2998.62	3454.71	6453.34	1197.15	5256.19	35	19
CHIKKABALLAPURA	3503.86	1175.04	4678.90	474.58	4204.32	40	10
BAGALKOTE	5012.80	1468.66	6481.46	612.92	5868.54	42	9
CHITRADURGA	6141.42	1757.63	7899.04	574.05	7324.99	33	7
GADAG	3176.03	751.24	3927.27	319.59	3607.68	43	8
SHIVAMOGGA	1186.12	1120.75	2306.87	317.28	1989.59	28	14
BELAGAVI	15404.55	3821.86	19226.41	551.50	18674.91	14	3
KALABURAGI	8010.78	1213.37	9224.15	600.49	8623.66	49	7
RAICHUR	2042.11	1050.80	3092.91	611.56	2481.35	58	20
DAKSHINA KANNADA	748.07	2619.28	3367.35	926.10	2441.25	35	28
HAVERI	7731.34	1572.90	9304.24	535.04	8769.20	34	6
BENGALURU	10862.53	24298.43	35160.95	7732.93	27428.03	32	22
UTTARA KANNADA	212.69	1088.36	1301.05	171.54	1129.51	16	13
CHIKKAMAGALURU	3089.51	1556.87	4646.39	585.04	4061.35	38	13
DHARWAR	2535.36	824.38	3359.74	642.26	2717.48	78	19
MYSURU	6390.32	5340.08	11730.40	609.64	11120.76	11	5
VIJAYAPURA	6902.67	1240.64	8143.31	261.95	7881.36	21	3
HASSAN	5280.20	2980.77	8260.97	985.78	7275.19	33	12
BENGALURU RURAL	3833.44	6387.00	10220.43	4184.22	6036.22	66	41
KOPPAL	2345.45	757.66	3103.11	549.80	2553.31	73	18
TUMAKURU	4972.56	2984.31	7956.87	1422.29	6534.58	48	18
TOTAL	**130271.20**	**80125.45**	**210396.65**	**28736.89**	**181659.76**	**36**	**14**

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 400

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ಶಾಲಾ- ಕಾಲೇಜುಗಳಿಗೆ ಹೋಗಲು ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಸಾರಿಗೆ ಸಂಸ್ಥೆಯ ಬಸ್‌ಗಳು ಸಮಯಕ್ಕೆ ಸರಿಯಾಗಿ ಸಂಚರಿಸದೇ ಇರುವುದರಿಂದ ತೀವ್ರ ತೊಂದರೆಗೆ ಒಳಗಾಗಿರುವುದನ್ನು ಸರ್ಕಾರ ಗಮನಿಸಿದೆಯೇ;	ರಾಜ್ಯದ ಸಾರಿಗೆ ಸಂಸ್ಥೆಗಳು ಕೋವಿಡ್-19ರ 2ನೇ ಅಲೆಯ ಲಾಕ್‌ಡೌನ್ ತೆರವುಗೊಂಡ ನಂತರದಲ್ಲಿ ಸ್ಥಗಿತಗೊಳಿಸಲಾಗಿದ್ದ ಸಾರಿಗೆಗಳನ್ನು ಪುನರಾರಂಭಿಸಿ ಗ್ರಾಮೀಣ ಪ್ರದೇಶದಲ್ಲಿ ಶಾಲಾ-ಕಾಲೇಜುಗಳಿಗೆ ಹೋಗಲು ಸಮಯಕ್ಕೆ ಸರಿಯಾಗಿ ವಿದ್ಯಾರ್ಥಿ/ ವಿದ್ಯಾರ್ಥಿನಿಯರಿಗೆ ಅವಶ್ಯಕ ಸಾರಿಗೆ ಸೌಲಭ್ಯ ಕಲ್ಪಿಸಲಾಗಿದೆ.
ಆ.	ಆಯಾ ಪ್ರದೇಶದಲ್ಲಿ ಶಾಲಾ ಕಾಲೇಜುಗಳ ಸಮಯಕ್ಕೆ ಅನುಗುಣವಾಗಿ ಸಾರಿಗೆ ಬಸ್ಸುಗಳನ್ನು ಸಂಚರಿಸುವಂತೆ ಆದೇಶಿಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ಹೌದು ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳ ವ್ಯಾಪ್ತಿಯಲ್ಲಿನ ಗ್ರಾಮೀಣ ಭಾಗದಲ್ಲಿ ಶಾಲಾ/ಕಾಲೇಜು ವಿದ್ಯಾರ್ಥಿಗಳಿಗೆ ಅವರ ಶಾಲಾ ಕಾಲೇಜು ಸಮಯಕ್ಕೆ ಸಾರಿಗೆ ಸೇವೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಸುತ್ತುವಳಿಗಳು/ ಬಸ್ಸುಗಳನ್ನು ಕಲ್ಪಿಸಲು ಸೂಚಿಸಲಾಗಿರುತ್ತದೆ ಹಾಗೂ ಪಾಯಿಂಟ್-ಟು-ಪಾಯಿಂಟ್ ಮಾರ್ಗಗಳಲ್ಲಿ ಬೆಳಿಗ್ಗೆ ಮತ್ತು ಸಾಯಂಕಾಲ ಅನುಸೂಚಿಗಳಲ್ಲಿ ಸರತಿಗಳನ್ನು ಅಳವಡಿಸಿ ಕಾರ್ಯಚರಣೆ ಮಾಡಲಾಗುತ್ತದೆ.

| ಇ. | ಹಾಗಿದ್ದರೆ, ಗ್ರಾಮೀಣ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಶಾಲಾ ಕಾಲೇಜುಗಳಿಗೆ ಸಮಯಕ್ಕೆ ಸರಿಯಾಗಿ ತಲುಪಲು ಬಸ್ ಗಳನ್ನು ಸಂಚರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ವಿವರ ನೀಡುವುದು) | ಅಲ್ಲದೇ, ಶಾಲಾ/ಕಾಲೇಜು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಅನುಸರಿಸಲು ಸಂಬಂಧಿಸಿದ ಅಧಿಕಾರಿಗಳಿಗೆ ಈ ಕೆಳಕಂಡ ಅಂಶಗಳನ್ನು ಸೂಚನೆಗಳನ್ನು ನೀಡಲಾಗಿದೆ:-

•ಗ್ರಾಮೀಣ ಪ್ರದೇಶಗಳ ವಿಭಾಗದ ವ್ಯಾಪ್ತಿಯಲ್ಲಿ ಬರುವ ಶಾಲಾ/ ಕಾಲೇಜುಗಳ ಪ್ರಾಂಶುಪಾಲರು/ ಮುಖ್ಯಸ್ಥರುಗಳನ್ನು ಸಂಪರ್ಕಿಸಿ, ಶಾಲಾ/ ಕಾಲೇಜುಗಳ ಸಮಯಗಳನ್ನು ತಿಳಿದುಕೊಂಡು ಸದರಿ ಸಮಯಕ್ಕೆ ಸಾರಿಗೆಗಳನ್ನು ಕಾರ್ಯಾಚರಿಸಲು ಸೂಕ್ತ ಕ್ರಮಕೈಗೊಳ್ಳುವುದು.

•ಶಾಲಾ ಕಾಲೇಜು/ ವಿದ್ಯಾರ್ಥಿಗಳಿಂದ ಯಾವುದೇ ಸಾರಿಗೆ ಸೇವೆಗಳ ವಿಷಯಕ್ಕೆ ಸಂಬಂಧಿಸಿದಂತೆ ಮನವಿಗಳು ಬಂದಲ್ಲಿ, 24 ಗಂಟೆಯೊಳಗೆ ಸದರಿ ಮನವಿಯನ್ನು ಪರಿಶೀಲಿಸಿ, ಸೂಕ್ತಕ್ರಮ ಕೈಗೊಳ್ಳುವುದು.

•ಶಾಲಾ/ಕಾಲೇಜು ವಿದ್ಯಾರ್ಥಿಗಳು ಹೆಚ್ಚಿಗೆ ಸೇರುವ ಬಸ್ ನಿಲ್ದಾಣ/ ಜಂಕ್ಷನ್‌ಗಳಲ್ಲಿ ಸಾರಿಗೆ ಸೇವೆಗಳ ಮೇಲ್ವಿಚಾರಣೆಗೆ ಸಂಚಾರ ನಿಯಂತ್ರಕರು/ ಇತರೆ ಮೇಲ್ವಿಚಾರಕರನ್ನು ತಪ್ಪದೇ ನಿಯೋಜಿಸಿ ಸುಗಮ ಕಾರ್ಯಾಚರಣೆ ಬಗ್ಗೆ ನಿಗಾವಹಿಸುವುದು.

•ವಿಭಾಗದ ಎಲ್ಲಾ ಚಾಲನಾ ಸಿಬ್ಬಂದಿಗಳಿಗೆ ಶಾಲಾ ಕಾಲೇಜು ವಿದ್ಯಾರ್ಥಿಗಳು ಬಸ್ಸುಗಳಲ್ಲಿ ಪ್ರಯಾಣಿಸಲು ಅನುವಾಗಲು ನಿಗದಿತ ಬಸ್ ನಿಲ್ದಾಣಗಳಲ್ಲಿ ನಿಲುಗಡೆ ನೀಡಿ ಅವರನ್ನು ಹತ್ತಿಸಿ/ಇಳಿಸಿಕೊಂಡು ಮುಂದೆ ಹೋಗುವುದರ ಜೊತೆಗೆ ವಿದ್ಯಾರ್ಥಿಗಳೊಂದಿಗೆ ಸೌಜನ್ಯ ಯುತವಾಗಿ ವರ್ತಿಸಲು ತಿಳುವಳಿಕೆ ನೀಡುವುದು.

ಬೆಂ.ಮ.ಸಾ.ಸಂಸ್ಥೆಯು ಗ್ರಾಮೀಣ ಪ್ರದೇಶಗಳನ್ನೊಳಗೊಂಡಂತೆ ಬೆಂ.ಮ.ಸಾ.ಸಂಸ್ಥೆಯ ವ್ಯಾಪ್ತಿಯೊಳಗೆ ಬರುವ ಪ್ರದೇಶಗಳಿಗೆ ಪ್ರತಿದಿನ (ದಿನಾಂಕ 30-11-2021ರಂತೆ) 5288 ಬಸ್ಸುಗಳಿಂದ 09.00 ಲಕ್ಷ ಕಿ.ಮೀಗಳಲ್ಲಿ 48,204 ಸರತಿಗಳನ್ನು ಕಾರ್ಯಾಚರಣೆಗೊಳಿಸುತ್ತಿದೆ. ಪ್ರಯಾಣಿಕರ ಬೇಡಿಕೆ ಹಾಗೂ ಒತ್ತಡಕ್ಕನುಗುಣವಾಗಿ ಹೊಸ ಮಾರ್ಗಗಳನ್ನು ಪರಿಚಯಿಸುವುದು, ಹಾಲಿಯಿರುವ ಮಾರ್ಗಗಳಲ್ಲಿ ಸಾರಿಗೆಗಳನ್ನು ಹೆಚ್ಚಿಸುವುದು, ಪ್ರಯಾಣಿಕರ ಸಂಚಾರ ದಟ್ಟಣೆಗನುಗುಣವಾಗಿ ಸಾರಿಗೆಗಳನ್ನು ಪರಿಷ್ಕರಿಸಿ, ಕಾರ್ಯಾಚರಣೆಗೊಳಿಸಲಾಗುತ್ತಿದೆ. |

ಸಂಖ್ಯೆ: ಟಿಡಿ 252 ಟಿಸಿಕ್ಯೂ 2021

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

ಕರ್ನಾಟಕ ವಿಧಾನಸಭೆ

ಚುಕ್ಕೆಗುರುತಿಲ್ಲದ ಪ್ರಶ್ನೆ ಸಂಖ್ಯೆ : **401**

ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)

ಉತ್ತರಿಸಬೇಕಾದ ಸಚಿವರು : ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸಬೇಕಾದ ದಿನಾಂಕ : 15-12-2021

ಕ್ರ. ಸಂ.	ಪ್ರಶ್ನೆ	ಉತ್ತರ
(ಅ)	ರಾಜ್ಯದ ಸಾರಿಗೆ ಇಲಾಖೆಯ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ಏಜೆಂಟರ್ ಅಥವಾ ಡೀಲರ್‌ಗಳ ಮೂಲಕ ಜೀವಿತಾವಧಿ ತೆರಿಗೆ ಪಾವತಿಸಿಕೊಂಡು ವಾಹನ ನೊಂದಣಿ ಮಾಡಿಕೊಡುತ್ತಿರುವುದು ನಿಜವಲ್ಲವೇ;	ರಾಜ್ಯದ ಸಾರಿಗೆ ಇಲಾಖೆಯ ಎಲ್ಲಾ ಪ್ರಾದೇಶಿಕ ಸಾರಿಗೆ ಕಛೇರಿಗಳಲ್ಲಿ ವಾಹನಗಳ ಅಧಿಕೃತ ಡೀಲರ್‌ಗಳ ಮೂಲಕ ವಾಹನಕ್ಕೆ ಸಂಬಂಧಿಸಿದ ದಾಖಲೆಗಳನ್ನು ವಾಹನ್-4 ತಂತ್ರಾಂಶಕ್ಕೆ ಅಳವಡಿಸಿ ಆನ್‌ಲೈನ್‌ನಲ್ಲಿ ತೆರಿಗೆ ಪಾವತಿಸಿಕೊಂಡು ವಾಹನಗಳನ್ನು ನೋಂದಣಿ ಮಾಡಿಕೊಡಲಾಗುತ್ತಿದೆ. ದಿನಾಂಕ:01-11-2021 ರಿಂದ ಹೊಸದಾಗಿ ನೋಂದಣಿ ಮಾಡುವ ವಾಹನಗಳನ್ನು ವಾಹನ ಮಾರಾಟ ಮಾಡುವ ಅಧಿಕೃತ ವಾಹನ ಮಾರಾಟಗಾರರೇ ವಾಹನ್-4 ತಂತ್ರಾಂಶದಡಿ ನೋಂದಣಿ ಮಾಡಿ ಅವರ ಹಂತದಲ್ಲಿ ನೋಂದಣಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಕಛೇರಿಗಳಲ್ಲಿ ಏಜೆಂಟರುಗಳ ಮೂಲಕ ಯಾವುದೇ ವಾಹನ ನೋಂದಣಿ ಮಾಡುತ್ತಿರುವುದಿಲ್ಲ.
(ಆ)	ಹಾಗಾದರೆ, ಐಷಾರಾಮಿ ಕಾರುಗಳಿಂದ ತೆರಿಗೆ ಕಟ್ಟಿಸಿಕೊಳ್ಳದೆಯೇ ವಾಹನ ನೊಂದಣಿ ಮಾಡಿಕೊಟ್ಟು ಸರ್ಕಾರಕ್ಕೆ ವಂಚಿಸಿರುವುದು ಸರ್ಕಾರ ಗಮನಿಸಿದೆಯೇ;	ಐಷಾರಾಮಿ ಕಾರುಗಳಿಂದ ತೆರಿಗೆ ಕಟ್ಟಿಸಿಕೊಳ್ಳದೆ ವಾಹನ ನೋಂದಣಿಯಾಗಿರುವ ಕೆಲವೊಂದು ಪ್ರಕರಣಗಳು ಪತ್ತೆಯಾಗಿರುವುದನ್ನು ಸರ್ಕಾರವು ಗಮನಿಸಿದೆ.
(ಇ)	ಮಾಲೀಕರು ಕೊಟ್ಟ ಹಣವನ್ನು ಕೆಲವರು ಸರ್ಕಾರಕ್ಕೆ ಪಾವತಿಸದೇ ವಾಹನ ನೋಂದಣಿಯ ದಾಖಲೆ ನೀಡಿದ್ದು ನಿಜವೇ;	ಕೆಲವೊಂದು ಪ್ರಕರಣಗಳಲ್ಲಿ ತೆರಿಗೆ ಮೊತ್ತವನ್ನು ಸರ್ಕಾರಕ್ಕೆ ಪಾವತಿಸದೆ ವಾಹನ ನೋಂದಣಿಯಾಗಿದ್ದು, ಅಂತಹ ವಾಹನಗಳ ತೆರಿಗೆಯನ್ನು ಸರ್ಕಾರಕ್ಕೆ ಪಾವತಿಸದೇ ನೋಂದಣಿ ದಾಖಲೆಗಳನ್ನು ವಾಹನ ಮಾಲೀಕರಿಗೆ ನೀಡಿರುವುದು ಮೇಲ್ನೋಟಕ್ಕೆ ಸತ್ಯವೆಂದು ಕಂಡುಬಂದಿರುತ್ತದೆ.
(ಈ)	ಈ ರೀತಿ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿ ವಂಚಿಸುತ್ತಿರುವ ಜಾಲವನ್ನು ಸರ್ಕಾರ ಭೇಧಿಸಿದೆಯೇ; ಈ ಜಾಲದಲ್ಲಿ ಭಾಗಿಯಾಗಿರುವ ಅಧಿಕಾರಿಗಳು	ಈ ರೀತಿಯಾಗಿ ಸರ್ಕಾರಕ್ಕೆ ತೆರಿಗೆ ವಂಚನೆ ಮಾಡುತ್ತಿರುವ ಜಾಲವನ್ನು ಇಲಾಖೆಯು ಭೇಧಿಸುತ್ತಿದೆ. ಈ ಹಿಂದೆ ವಾಹನ್-1 ತಂತ್ರಾಂಶದ server ಅನ್ನು

	ಏಜೆಂಟರ್, ಡೀಲರ್‌ಗಳು ಯಾರು ಯಾರು; ಈ ರೀತಿ ಎಷ್ಟು ಪ್ರಕರಣಗಳಲ್ಲಿ ವಂಚಿಸಲಾಗಿದೆ; ಹಾಗೂ ಎಷ್ಟು ವರ್ಷಗಳಿಂದ ವಂಚಿಸಲಾಗಿದೆ;	ಸ್ಥಳಿಯವಾಗಿ ಕಛೆರಿಯ ಹಂತದಲ್ಲಿ ನಿರ್ವಹಿಸಲಾಗುತ್ತಿತ್ತು. ವಾಹನ್-1 ತಂತ್ರಾಂಶದಡಿ ವಾಹನ್ ನೋಂದಣಿ ಪ್ರಕ್ರಿಯೆಯಲ್ಲಿ ಅಕ್ರಮವಾಗಿ ತೆರಿಗೆ ವಂಚನೆ ಮಾಡಲು ಭಾಗಿಯಾಗಿರುವ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಇನ್ನಿತರರ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ. ಈಗಾಗಲೇ ಇಂತಹ 33 ಐಷಾರಾಮಿ ಕಾರುಗಳು ನೇರವಾಗಿ ನೋಂದಣಿಯಾಗಿ ತೆರಿಗೆ ವಂಚಿಸಿರುವ ಪ್ರಕರಣಗಳು ಕಂಡುಬಂದಿರುತ್ತವೆ ಹಾಗೂ ಹೊರ ರಾಜ್ಯಗಳಿಂದ ಬಂದಿರುವ ವಾಹನಗಳ ತೆರಿಗೆ ಪಾವತಿಸಿಕೊಳ್ಳದೆ ಮರು ನೋಂದಣಿಯಾಗಿರುವ ಪ್ರಕರಣಗಳನ್ನು ಕೂಡ ಪತ್ತೆಹಚ್ಚಲಾಗಿರುತ್ತದೆ. ಈ ವಂಚನೆಯ ಪ್ರಕರಣದ ಪ್ರಾಥಮಿಕ ವಿಚಾರಣೆಯಿಂದ ಇಂತಹ ವಂಚನೆ ಪ್ರಕರಣಗಳು 2017 ರಿಂದ ಸಂಭವಿಸುತ್ತಿರುವುದು ಕಂಡುಬಂದಿರುತ್ತದೆ.
(ಉ)	ತಪ್ಪಿತಸ್ಥರ ವಿರುದ್ಧ ಯಾವ ಕಠಿಣ ಕ್ರಮ ಕೈಗೊಳ್ಳಲಾಗಿದೆ;	ವಂಚನೆ ಪ್ರಕರಣಗಳ ವಿಚಾರಣೆಯು ಪ್ರಾಥಮಿಕ ಹಂತದಲ್ಲಿದ್ದು, ತೆರಿಗೆ ವಂಚನೆ ಮಾಡಿ ನೋಂದಣಿಯಾದ ವಾಹನಗಳನ್ನು ಜಪ್ತು ಮಾಡಿ ಕ್ರಮ ಕೈಗೊಳ್ಳಲಾಗುತ್ತಿದ್ದು, ಅಂತಹ ವಾಹನ ಮಾಲೀಕರಿಂದ ತೆರಿಗೆ ವಸೂಲಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ. ಪ್ರಕರಣದ ವಿಚಾರಣೆ ಪೂರ್ಣಗೊಂಡಾಗ ತಪ್ಪಿತಸ್ಥ ಅಧಿಕಾರಿ, ಸಿಬ್ಬಂದಿ ವಿರುದ್ಧ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುವುದು.
(ಊ)	ಈ ರೀತಿ ಅಕ್ರಮಗಳು ನಡೆದಿರುವ ಬಗ್ಗೆ ಉನ್ನತ ಮಟ್ಟದ ತನಿಖೆಯನ್ನು ನಡೆಸಲು ಸರ್ಕಾರ ಆಸಕ್ತಿ ಹೊಂದಿದೆಯೇ;	ತೆರಿಗೆ ಪಾವತಿಸಿಕೊಳ್ಳದೆ ಐಷಾರಾಮಿ ಕಾರುಗಳ ನೋಂದಣಿಯನ್ನು ಮಾಡಿಕೊಟ್ಟಿರುವ ಪ್ರಕರಣಗಳ ಪರಿಶೀಲನೆಗಾಗಿ ಸಾರಿಗೆ ಆಯುಕ್ತರು ತಮ್ಮ ಅಧಿಕೃತ ಜ್ಞಾಪತ ಪತ್ರ ಸಂಖ್ಯೆ:ಸಾಆ/ಪ್ರ-3/ಪಿಆರ್-144/2021-22 ದಿನಾಂಕ:13-12-2021ರಂದು ಇಲಾಖೆಯ ಅಧಿಕಾರಿಗಳು ಹಾಗೂ ವಾಹನ್-I ಮತ್ತು IV ತಂತ್ರಾಂಶ ಅಭಿವೃದ್ಧಿಪಡಿಸಿರುವ ಕೇಂದ್ರ ಸರ್ಕಾರದ National Informatic Centre ಅಧಿಕಾರಿಗಳನ್ನೊಳಗೊಂಡ 7 ಅಧಿಕಾರಿಗಳ ತಂಡವನ್ನು ರಚಿಸಿ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ, ಕೋರಮಂಗಲ, ಬೆಂಗಳೂರು (ಕೇಂದ್ರ) ಇಲ್ಲಿಗೆ ನಿಯೋಜಿಸಲಾಗಿದ್ದು, ತೆರಿಗೆ ಪಾವತಿಸದೆ ನೋಂದಣಿ ಆಗಿರುವ ವಾಹನಗಳ ಸಂಪೂರ್ಣ ಮಾಹಿತಿ ಹಾಗೂ ಈ ಕೃತ್ಯದಲ್ಲಿ ಶಾಮೀಲಾಗಿರುವ ಅಧಿಕಾರಿ, ಸಿಬ್ಬಂದಿಗಳ ಹಾಗೂ ಇನ್ನಿತರೆ ವ್ಯಕ್ತಿಗಳ ಮಾಹಿತಿಯನ್ನು ಪತ್ತೆಹಚ್ಚಿ ವರದಿ ಮಾಡಲು ಆದೇಶ ಮಾಡಲಾಗಿರುತ್ತದೆ.

		ಪರಿಶೀಲನಾ ತಂಡವು ಈಗಾಗಲೇ ತನ್ನ ಕಾರ್ಯವನ್ನು ಪ್ರಾರಂಭಿಸಿರುತ್ತದೆ. ಪರಿಶೀಲನೇ ತನಿಖೆ ಪೂರ್ಣಗೊಂಡ ನಂತರ ಪ್ರಕರಣದ ಉನ್ನತ ಮಟ್ಟದ ತನಿಖೆಯನ್ನು ಕೈಗೊಳ್ಳುವ ಕುರಿತು ಕ್ರಮವಹಿಸಲಾಗುವುದು.
(ಖ)	ಇಂತಹ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಕೈಗೊಳ್ಳುವ ಕಟ್ಟುನಿಟ್ಟಿನ ಕ್ರಮಗಳೇನು? (ವಿವರ ನೀಡುವುದು)	ಇಂತಹ ಪ್ರಕರಣಗಳು ಮರುಕಳಿಸದಂತೆ ಕೇಂದ್ರ ಸರ್ಕಾರವು ಅತ್ಯಾಧುನಿಕ ವಾಹನ್-4 ತಂತ್ರಾಂಶ ಅಭಿವೃದ್ಧಿಪಡಿಸಿದ್ದು, ವಾಹನಗಳ ನೋಂದಣಿ ಮತ್ತು ಅದಕ್ಕೆ ಸಂಬಂಧಿಸಿದ ಇತರೆ ಉಳಿದ ಕೆಲಸಗಳನ್ನು ಈ ತಂತ್ರಾಂಶದಡಿ ಕೈಗೊಳ್ಳುವ ವಿಧಾನ ಜಾರಿಯಲ್ಲಿದೆ.

ಟಿಡಿ 113 ಟಿಡಿಕ್ಯೂ 2021

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ
ಪಂಗಡಗಳ ಕಲ್ಯಾಣ ಸಚಿವರು.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ	:	402
ವಿಧಾನ ಸಭೆಯ ಸದಸ್ಯರ ಹೆಸರು	:	ಶ್ರೀ. ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ (ಇಂಡಿ)
ಉತ್ತರಿಸುವ ಸಚಿವರು	:	ಮಾನ್ಯ ತೋಟಗಾರಿಕೆ ಹಾಗು ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು
ಉತ್ತರಿಸಬೇಕಾದ ದಿನಾಂಕ	:	15-12-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಇಂಡಿ ಪಟ್ಟಣದಲ್ಲಿರುವ ಕರ್ನಾಟಕ ರಾಜ್ಯ ಲಿಂಬೆ ಅಭಿವೃಧ್ಧಿ ಮಂಡಳಿಗೆ ಸೂಕ್ತ ಜಮೀನು, ಸಿಬ್ಬಂದಿ, ಶೀಥಲಗೃಹ, ಮಾರುಕಟ್ಟೆ ಯಾರ್ಡ್, ಗೋದಾಮು, ಖರೀದಿ ಕೇಂದ್ರ, ಆವರ್ತನಿಧಿ, ತರಬೇತಿ ಕೇಂದ್ರ ಮೊದಲಾದ ಮೂಲಭೂತ ಸೌಕರ್ಯಗಳು ಇಲ್ಲದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿದೆ.
ಆ)	ಬಂದಿದ್ದಲ್ಲಿ, ಸದರಿ ಕಟ್ಟಡಗಳನ್ನು ಯಾವಾಗ ನಿರ್ಮಾಣ ಮಾಡಲಾಗುವುದು;	ಇಂಡಿ ಪಟ್ಟಣದ ವಸಂತ ನಗರ ಬಡಾವಣೆ ಸರ್ವೆ ನಂ. 529/1 ನ 3.13 ಎಕರೆ ಜಮೀನು ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದೆ. ಸದರಿ ಜಮೀನು ಕರ್ನಾಟಕ ರಾಜ್ಯ ಲಿಂಬೆ ಅಭಿವೃಧ್ಧಿ ಮಂಡಳಿಗೆ ಹಸ್ತಾಂತರವಾದ ನಂತರ ಸದರಿ ಕಟ್ಟಡಗಳನ್ನು ನಿರ್ಮಾಣ ಮಾಡಲು ಕ್ರಮ ವಹಿಸಲಾಗುವುದು.
ಇ)	ಬೆಲೆ ಕುಸಿತವಾದಾಗ ಖರೀದಿ ಕೇಂದ್ರ (ಆವರ್ತನಿಧಿ) ಕ್ಕೆ ಎಷ್ಟು ಅನುದಾನ ಮೀಸಲಿರಿಸಲಾಗುವುದು; ಯಾವಾಗ ಜಾರಿಗೆ ಬರುತ್ತದೆ;	ಬೆಲೆ ಕುಸಿತವಾದಾಗ ಖರೀದಿ ಕೇಂದ್ರ (ಆವರ್ತನಿಧಿ) ಕ್ಕೆ ಪ್ರಸ್ತುತ ಸಾಲಿನಲ್ಲಿ ಅನುದಾನ ಮೀಸಲಿರಿಸಲಾಗಿಲ್ಲ. ಮಂಡಳಿಗೆ ನೀಡಿರುವ ಜಮೀನು ಹಸ್ತಾಂತರ ಪ್ರಕ್ರಿಯೆ ಕಂದಾಯ ಇಲಾಖೆಯ ಪರಿಶೀಲನೆಯಲ್ಲಿದ್ದು, ಜಮೀನು ಹಸ್ತಾಂತರವಾದ ನಂತರ ಮೂಲಭೂತ ಸೌಕರ್ಯಗಳನ್ನು ಅಭಿವೃಧ್ಧಿಪಡಿಸಿ ಆವರ್ತನಿಧಿಗೆ ಅನುದಾನ ಮೀಸಲಿರಿಸುವ ಬಗ್ಗೆ ಪರಿಶೀಲಿಸಲಾಗುವುದು.
ಈ)	ಹೊಂದಿದ್ದರೆ, ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು)	

No.HORTI 515 HGM 2021

(ಮುನಿರತ್ನ)
ತೋಟಗಾರಿಕೆ ಮತ್ತು ಯೋಜನೆ,
ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 403
ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
ಉತ್ತರಿಸುವ ದಿನಾಂಕ : 15-12-2021.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರಸಂ	ಪ್ರಶ್ನೆ	ಉತ್ತರ
(ಅ)	ಗ್ರಾಮ ಪಂಚಾಯಿತಿಗಳ ಪ್ರಮುಖ ಜವಾಬ್ದಾರಿಗಳೇನು; (ವಿವರ ನೀಡುವುದು); ಸದರಿ ಜವಾಬ್ದಾರಿಗಳನ್ನು ನಿರ್ವಹಿಸಲು ಮೂರು ವರ್ಷದಿಂದ ಅಭಿವೃದ್ಧಿ ನಿಧಿಯೇ ಇಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ;	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 58 ರಲ್ಲಿ ಗ್ರಾಮ ಪಂಚಾಯತಿ ಕಡ್ಡಾಯ ಪ್ರಕಾರ್ಯಗಳ/ಜವಾಬ್ದಾರಿಗಳ ಬಗ್ಗೆ ವಿವರಿಸಲಾಗಿದೆ. ಅವು ಈ ಕೆಳಕಂಡಂತಿವೆ. 1) ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು. 2) ಮಕ್ಕಳಿಗೆ ಸಾರ್ವತ್ರಿಕವಾಗಿ ರೋಗ ನಿರೋಧಕ ಚುಚ್ಚುಮದ್ದು ನೀಡುವ ಕಾರ್ಯಕ್ರಮಗಳನ್ನು ಸಾಧಿಸುವುದು. 3) ನೈರ್ಮಲ್ಯ ವ್ಯವಸ್ಥೆ ಮತ್ತು ಸರಿಯಾದ ಚರಂಡಿ ವ್ಯವಸ್ಥೆಯನ್ನು ಒದಗಿಸುವುದು. 4) ಸಾಕಷ್ಟು ರಸ್ತೆ ದೀಪಗಳನ್ನು ಒದಗಿಸುವುದು ಮತ್ತು ವಿದ್ಯುತ್ ಶುಲ್ಕಗಳನ್ನು ನಿಯತವಾಗಿ ಸಂದಾಯ ಮಾಡುವುದು. 5) ಗ್ರಾಮ ಪಂಚಾಯತಿಗಳಲ್ಲಿ ನಿಯತವಾತರುವ ಎಲ್ಲಾ ಸಮುದಾಯ ಆಸ್ತಿಗಳನ್ನು ನಿರ್ವಹಿಸುವುದು. 6) ಪ್ರಕರಣ 58-ಎ ರಲ್ಲಿ ಜೀತಗಾರಿಕೆ ಪದ್ಧತಿ ಸಂಬಂಧದಲ್ಲಿ ವರದಿ ಸಲ್ಲಿಸುವುದು, 7) ಪ್ರಕರಣ 58-ಬಿ ರಲ್ಲಿ ಮಾನವ ಘನತೆಗೆ ಕಳಂಕ ತರುವ ಪಾರಂಪರಿಕ, ಸಾಮಾಜಿಕ ಮತ್ತು ಧಾರ್ಮಿಕ ಪದ್ಧತಿಗಳನ್ನು ಪ್ರತಿಬಂಧಿಸುವುದು. 8) ಪ್ರಕರಣ 58-ಸಿ ರಲ್ಲಿ ಮಹಿಳೆಯರಿಗೆ ಲೈಂಗಿಕ ಕಿರುಕುಳ ಆಗದಂತೆ ತಡೆಗಟ್ಟುವುದು, 9) ಪ್ರಕರಣ 58-ಡಿ ರಲ್ಲಿ ಕಂದಾಯ ಭೂಮಿಯನ್ನು ಹೊರತುಪಡಿಸಿ ಒತ್ತುವರಿ ಮಾಡಿಕೊಂಡಿರುವ ಗ್ರಾಮ ಪಂಚಾಯತಿಯ ಸ್ವತ್ತನ್ನು ಪುನಃ ಸ್ವಾಧೀನ ಪಡೆಯುವುದು. 10) ಪ್ರಕರಣ 58-ಇ ರಡಿ ಸ್ವಚ್ಛ ಪರಿಸರವನ್ನು ಕಾಪಾಡುವುದು.

		11) ಅಪಾಯಕಾರಿ ಕಲ್ಲು ಗಣಿಗಾರಿಕೆ, ಕೊಳವೆ ಬಾವಿಗಳನ್ನು, ತೆರೆದ ಬಾವಿಗಳನ್ನು ತೋಡುವುದು ಮತ್ತು ಹೊಂಡಗಳನ್ನು ನಿರ್ಮಿಸುವುದುನ್ನು ತಡೆಗಟ್ಟುವುದು. 12) ಅನುಸೂಚಿ–1 ರಲ್ಲಿನ ಕಾರ್ಯಗಳನ್ನು ನಿರ್ವಹಿಸುವುದು. ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಂತೆ ಗ್ರಾಮ ಪಂಚಾಯತಿಗಳು ಭೂಮಿ ಮತ್ತು ಕಟ್ಟಡಗಳು, ನೀರು, ಮೊಬೈಲ್ ಟವರ್‌ಗಳು, ವಿಂಡ್‌ಮಿಲ್‌ಗಳು ಮತ್ತು ಸೋಲಾರ್ ಪಾರ್ಕ್‌ಗಳ ಮೇಲೆ ತೆರಿಗೆ ವಿಧಿಸಬಹುದಾಗಿರುತ್ತದೆ. ಇವುಗಳು ಗ್ರಾಮ ಪಂಚಾಯತಿಗಳ ಗ್ರಾಮ ಪಂಚಾಯತಿ ನಿಧಿಯ ಮೂಲಗಳಾಗಿರುತ್ತವೆ.
(ಆ)	ಕಳೆದ ಮೂರು ವರ್ಷಗಳಿಂದ ಪಂಚಾಯಿತಿಗಳ ಆರ್ಥಿಕ ಸ್ಥಿತಿ ಎಷ್ಟು ಕುಸಿದು ಹೋಗಿದೆ ಎಂದರೆ ಕಛೇರಿ ನಿರ್ವಹಣೆ ಮತ್ತು ಸಿಬ್ಬಂದಿ ವೇತನಕ್ಕೂ ಅನುದಾನವಿಲ್ಲದೇ ಇರುವುದನ್ನು ಸರ್ಕಾರ ಗಮನಿಸಿದೆಯೇ;	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 113 ರಂತೆ ಗ್ರಾಮ ಪಂಚಾಯತಿಯ ಸಿಬ್ಬಂದಿಗಳ ವೇತನವನ್ನು ಗ್ರಾಮ ಪಂಚಾಯತಿ ನಿಧಿಯಿಂದ ಅಂದರೆ ಸ್ವಂತ ಸಂಪನ್ಮೂಲದಿಂದ ಪಾವತಿಸುವುದು, ಪ್ರತಿಯೊಂದು ಗ್ರಾಮ ಪಂಚಾಯತಿಯ ಕರ್ತವ್ಯವಾಗಿರುತ್ತದೆ. ಆದರೂ ರಾಜ್ಯದ ಹಲವಾರು ಗ್ರಾಮ ಪಂಚಾಯತಿಗಳಲ್ಲಿ ಸಂಪನ್ಮೂಲದ ಕೊರತೆಯಿಂದ ಸಮಯಕ್ಕೆ ಸರಿಯಾಗಿ ಸಿಬ್ಬಂದಿಗಳ ವೇತನ ಪಾವತಿಸದ ಕಾರಣ ಸರ್ಕಾರವು ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಭಾಗಶಃ ವೇತನಕ್ಕಾಗಿ ಪ್ರತ್ಯೇಕ ಅನುದಾನವನ್ನು ಬಿಡುಗಡೆ ಮಾಡುತ್ತಿದೆ. ಪ್ರಸ್ತುತ ರಾಜ್ಯದ ಗ್ರಾಮ ಪಂಚಾಯತಿಗಳಲ್ಲಿ 1) ಬಿಲ್ ಕಲೆಕ್ಟರ್, 2) ಕ್ಲರ್ಕ್ ಕಂ ಡಾಟಾ ಎಂಟ್ರಿ ಆಪರೇಟರ್ / ಡಾಟಾ ಎಂಟ್ರಿ ಆಪರೇಟರ್, 3) ವಾಟರ್ ಆಪರೇಟರ್, 4) ಅಟೆಂಡೆಂಟ್ ಮತ್ತು 5) ಕ್ಲೀನರ್ಸ್ ಸೇರಿದಂತೆ ಸಿಬ್ಬಂದಿಗಳ ವೇತನಕ್ಕಾಗಿ ವಾರ್ಷಿಕವಾಗಿ ಒಟ್ಟು ರೂ.783.61 ಕೋಟಿ ಅನುದಾನದ ಅವಶ್ಯಕತೆ ಇದ್ದು, ಇದರಲ್ಲಿ ರೂ. 511.20 ಕೋಟಿಗಳನ್ನು ಸರ್ಕಾರದಿಂದ ತ್ರೈಮಾಸಿಕವಾಗಿ 4 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತಿದೆ. ವೇತನಕ್ಕಾಗಿ ಕೊರತೆಯಾಗುವ ರೂ.272.41 ಕೋಟಿಗಳಲ್ಲಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಕಾರ್ಯಕ್ರಮದ ಸೇವೆ ನೀಡುವವರಿಗೆ ಸದರಿ ಯೋಜನೆಯಡಿ ರೂ. 61.50 ಕೋಟಿಗಳನ್ನು ವಾರ್ಷಿಕವಾಗಿ 2 ಕಂತುಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. 15ನೇ ಹಣಕಾಸು ಆಯೋಗದ ಅನುದಾನದಡಿಯಲ್ಲಿ ಕುಡಿಯುವ ನೀರು ನಿರ್ವಹಣೆ, ನೈರ್ಮಲ್ಯ ಕಾಪಾಡುವ ಕಾರ್ಯಕ್ರಮಗಳಿಗೆ ಅನುದಾನವನ್ನು ಮೀಸಲಿರಿಸಲಾಗಿದ್ದು, ಕುಡಿಯುವ ನೀರು ಸರಬರಾಜು ಮತ್ತು ಸ್ವಚ್ಛತೆ ಸೇವೆ

		ನೀಡುವವರಿಗೆ 15ನೇ ಹಣಕಾಸು ಆಯೋಗದ ಅನುದಾನದಡಿ ರೂ.160.90 ಕೋಟಿಗಳ ಅನುದಾನ ಮತ್ತು ಸ್ವಂತ ಸಂಪನ್ಮೂಲದಲ್ಲಿ 50.01 ಕೋಟಿಗಳನ್ನು ಗ್ರಾಮ ಪಂಚಾಯತಿಗಳು ಸಿಬ್ಬಂದಿಗಳ ವೇತನಕ್ಕಾಗಿ ಭರಿಸಲು ಅನುದಾನವನ್ನು ವರ್ಗಾವಣೆ ಮಾಡಿಕೊಂಡು ಸಿಬ್ಬಂದಿಗಳ ವೇತನ ಭರಿಸಲು ಕ್ರಮ ಕೈಗೊಳ್ಳುವಂತೆ ಗ್ರಾಮ ಪಂಚಾಯತಿಗಳಿಗೆ ದಿನಾಂಕ:25-11-2020 ರ ಸರ್ಕಾರದ ಆದೇಶದಲ್ಲಿ ನಿರ್ದೇಶನ ನೀಡಲಾಗಿದೆ. ಪ್ರಸ್ತುತ ಗ್ರಾಮ ಪಂಚಾಯತಿ ನೌಕರರ ವೇತನಕ್ಕಾಗಿ 2021-22ನೇ ಸಾಲಿನಲ್ಲಿ ರೂ. 383.40 ಕೋಟಿಗಳನ್ನು ಸರ್ಕಾರದಿಂದ ತ್ರೈಮಾಸಿಕವಾಗಿ 3 ಕಂತುಗಳಲ್ಲಿ ಬಿಡುಗಡೆ ಮಾಡಲಾಗಿದೆ.
(ಇ)	ಕಳೆದ ಎರಡು ವರ್ಷದಿಂದ 15ನೇ ಹಣಕಾಸು ಯೋಜನೆಯಡಿ ಅಲ್ಪ ಮೊತ್ತದ ಅನುದಾನ ಬಂದಿದ್ದು, ಬಿಟ್ಟರೆ ಬೇರೆಲ್ಲ ಅನುದಾನಗಳು ಕಡಿತಗೊಂಡಿವೆ ಇಲ್ಲವೇ ಸಂಪೂರ್ಣವಾಗಿ ಸ್ಥಗಿತಗೊಂಡಿರುವುದು ನಿಜವೇ;	15ನೇ ಹಣಕಾಸು ಆಯೋಗ ಅನುದಾನದಡಿ 2020-21ನೇ ಸಾಲಿನಲ್ಲಿ ಭಾರತ ಸರ್ಕಾರವು ರೂ.321700.00 ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಅದರಂತೆ, ಸಂಪೂರ್ಣ ಅನುದಾನವನ್ನು ಪಂಚಾಯತ್ ರಾಜ್ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾಗಿರುತ್ತದೆ. 15ನೇ ಹಣಕಾಸು ಆಯೋಗದಡಿ 2021-22ನೇ ಸಾಲಿನಲ್ಲಿ ಭಾರತ ಸರ್ಕಾರವು ರೂ. 237700.00 ಲಕ್ಷಗಳನ್ನು ಹಂಚಿಕೆ ಮಾಡಿದ್ದು, ಮೊದಲನೇ ಕಂತು ಮೂಲ ಅನುದಾನ (ಅನಿರ್ಬಂಧಿತ)ರೂ.47540.00 ಲಕ್ಷಗಳನ್ನು ಹಾಗೂ ನಿರ್ಬಂಧಿತ ಅನುದಾನ ರೂ.71310.00 ಲಕ್ಷಗಳನ್ನು ಬಿಡುಗಡೆಗೊಳಿಸಲಾಗಿರುತ್ತದೆ.
(ಈ)	15ನೇ ಹಣಕಾಸು ಆಯೋಗದ 60% ಹಣ ವಾಪಸ್ಸು ಪಡೆದಿರುವುದು ನಿಜವೇ; ವಾಪಸ್ಸು ಪಡೆಯಲು ಕಾರಣಗಳೇನು; (ವಿವರ ನೀಡುವುದು)	ಇಲ್ಲ.
(ಉ)	ಬೀದಿ ದೀಪದ ವಿದ್ಯುತ್ ಬಿಲ್ ಕಟ್ಟಲಾಗದೇ ಬಾಕಿ ಇರುವುದು ಮತ್ತು ಹೆಚ್ಚಿನ ಪಂಚಾಯಿತಿಗಳಿಗೆ ಮನೆ ನೀರಿನ ಕಂದಾಯವೇ ಆಸರೆಯಾಗಿದ್ದು ಅದು ಸಿಗುತ್ತಿಲ್ಲದಿರುವುದನ್ನು ಸರ್ಕಾರ ಗಮನಿಸಿದೆಯೇ;	2021-22ನೇ ಸಾಲಿನ ಆಯವ್ಯಯದಲ್ಲಿ ಲೆಕ್ಕಶೀರ್ಷಿಕೆ 2515-00-198-1-07-300 ರಡಿಯಲ್ಲಿ ಗ್ರಾಮ ಪಂಚಾಯತಿಗಳಿಗೆ ಸಹಾಯ ಎಂಬ ಹೆಸರಿನಲ್ಲಿ ಒಟ್ಟು ರೂ.902.99,00,000/- ಗಳ ಅನುದಾನ ಒದಗಿಸಿದ್ದು, ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಮೊತ್ತ ಪಾವತಿಸಲು ರೂ.391,79,40,000/- ಗಳ ಅನುದಾನ ಹಂಚಿಕೆ ಮಾಡಿದ್ದು, 4 ತ್ರೈಮಾಸಿಕ ಕಂತುಗಳಲ್ಲಿ ಬಿಡುಗಡೆ ಮಾಡಲು ಉದ್ದೇಶಿಸಲಾಗಿದ್ದು, ಅದರಲ್ಲಿ ಡಿಸೆಂಬರ್ 2021 ರ ಅಂತ್ಯದವರೆಗೆ ಗ್ರಾಮ ಪಂಚಾಯತಿಗಳ ವಿದ್ಯುತ್ ಬಿಲ್ ಪಾವತಿಗಾಗಿ 3 ತ್ರೈಮಾಸಿಕ ಕಂತುಗಳಲ್ಲಿ ರೂ. 295,60,87,211/- ಗಳನ್ನು ಬಿಡುಗಡೆ ಮಾಡಲಾಗಿದೆ. ಇನ್ನುಳಿದ ಒಂದು ತ್ರೈಮಾಸಿಕ ಕಂತಿನ ಅನುದಾನವನ್ನು ಫೆಬ್ರವರಿ-ಮಾರ್ಚ್ ತಿಂಗಳಿನಲ್ಲಿ ಬಿಡುಗಡೆ

		ಮಾಡಲಾಗುತ್ತದೆ.
(ಊ)	ನರೇಗಾ ಯೋಜನೆಯಡಿ ಮಂಜೂರು ಮಾಡಬೇಕಾಗಿರುವ ಬಾಕಿ ಅನುದಾನ ಎಷ್ಟು; ಗ್ರಾಮ ಪಂಚಾಯಿತಿಗಳ ಅಭಿವೃದ್ಧಿಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ತಾಲ್ಲೂಕುವಾರು ವಿವರ ನೀಡುವುದು)	2021-22ನೇ ಸಾಲಿಗೆ ಸಂಬಂಧಿಸಿದಂತೆ ನರೇಗಾ ಯೋಜನೆಯಡಿ ಆರ್ಥಿಕ ಪ್ರಗತಿ ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಗ್ರಾಮ ಪಂಚಾಯಿತಿಗಳಿಗೆ ವಾರ್ಷಿಕವಾಗಿ ಸಿಗುವ ಅನುದಾನದ ವಿವರ ಈ ಕೆಳಕಂಡಂತಿದೆ.

ಕ್ರ.ಸಂ	**ಯೋಜನೆ / ಕಾರ್ಯಕ್ರಮ**	**ಅನುದಾನದ ಮೊತ್ತ**
1	ಶಾಸನಬದ್ಧ ಅನುದಾನ	ರೂ.10-12 ಲಕ್ಷಗಳು.
2	15ನೇ ಹಣಕಾಸು ಆಯೋಗದ ಅನುದಾನ	ಜನ ಸಂಖ್ಯೆ ಮತ್ತು ಭೌಗೋಳಿಕ ಪ್ರದೇಶದ ಆಧಾರದ ಮೇಲೆ ರೂ. 20-30 ಲಕ್ಷಗಳು.
3	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ	ಪ್ರತಿ ಗ್ರಾಮ ಪಂಚಾಯಿತಿಯಲ್ಲಿನ ಕಾರ್ಮಿಕ ಆಯವ್ಯಯ ಆಧರಿಸಿ ಅನುದಾನ ನೀಡಲಾಗುತ್ತಿದೆ.
4	ಸ್ವಚ್ಛ ಭಾರತ್ ಮಿಷನ್	ಶೌಚಾಲಯ ನಿರ್ಮಿಸಿಕೊಳ್ಳಲು ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಫಲಾನುಭವಿಗೆ ರೂ.15,000/- ಮತ್ತು ಸಾಮಾನ್ಯ ಫಲಾನುಭವಿಗೆ ರೂ.12,000/-ಗಳು.
5	ಮುಖ್ಯ ಮಂತ್ರಿ ಗ್ರಾಮ ವಿಕಾಸ ಯೋಜನೆ	ಆಯ್ಕೆಯಾದ ಗ್ರಾಮ ಒಂದಕ್ಕೆ ಒಂದು ಕೋಟಿ ರೂಪಾಯಿಗಳು.

ಸಂ. ಗ್ರಾಅಪ 407 ಗ್ರಾಪಂಅ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 403 ಕ್ಕೆ ಅನುಬಂಧ

Govt. of India
Ministry of Rural Development
Department of Rural Development

The Mahatma Gandhi National Rural Employment Guarantee Act | Tuesday, December 7, 2021

Back

Financial Performance Under MGNREGA during the Financial Year 2021-2022

State:KARNATAKA (Rs. in Lakhs)

S.No	District	Opening Balance(OB): Entered OB	Release of Last FY but Received during the Current FY: Centre	Release of Last FY but Received during the Current FY: State	Release from State Fund(*) to districts	Authorisation of EFMS	Misc Reciept	Borrowed Fund: From other district or Revolving Fund	Borrowed Fund: Refunded to district/state	Inter-district fund transfer: Fund transfer to other district	Inter-district fund transfer: Fund received from other districts	Total Availabilty	Cumulative LB Estimation of Expenditure upto Reporting months (December)	Cumulative Expenditure: Actual Expenditure: Unskilled Wage	Actual Expenditure: Semi-skilled and Skilled Wage	Actual Expenditure: Material	Actual Expenditure: Tax	Adm.Exp: Rec Exp	Adm.Exp: Non-Rec Exp	Adm.Exp: Total Adm. Exp	Total	%age Utilization	Balance	Payment due**: On Unskilled Wage	Payment due**: On Semi-skilled and Skilled Wage	Payment due**: On Material	Payment due**: Tax	Payment due**: Total
1	2	4	5	6	7	8	9	10	11	12	13	14=(4+5+6+7+8+9+10+13)-(11+12)	15	16	17	18	19	20	21	22=20+21	23=16+17+18+19+22	24=(23/14)*100	25=14-23	26	27	28	29	30=26+27+28+29
Phase I																												
1	BIDAR	169.68	0	0	0	16718.1	0	0	0	0	0	16887.78	0	12945.31	8.24	3160.63	332.12	191.5	29.23	220.73	16667.03	98.69	220.75	163.97	0	2169.37	223.57	2556.91
2	CHITRADURGA	-65.35	0	0	0	20390.28	0	0	0	0	0	20324.93	0	15077.19	57.24	4721.51	3.48	484.5	0	484.5	20343.92	100.09	-18.99	188.13	2.75	1689.03	3.11	1883.02
3	DAVANAGERE	25.89	0	0	0	15308.29	0	0	0	0	0	15334.17	0	9193.12	39.82	5720.67	156.07	183	0	183	15292.67	99.73	41.5	104.64	0.24	956.66	9.99	1071.53
4	KALABURAGI	1502.81	0	0	0	19512.21	0	0	0	0	0	21015.02	0	15980.36	75.84	3136.01	23.47	361.65	7.5	369.15	19484.84	92.72	1530.18	421.01	15.05	1974.52	26.56	2437.14
5	RAICHUR	887.38	0	0	0	33870.44	0	0	0	0	0	34757.82	0	25314.21	301.93	7334.55	594.44	247.5	0	247.5	33792.64	97.22	965.17	190.83	67.46	3580.68	252.22	4091.19
PhaseI Total		2520.41	0	0	0	105799.32	0	0	0	0	0	108319.72	0	78410.18	483.08	24073.38	1109.58	1468.15	36.73	1504.88	105581.1	97.47	2738.61	1068.58	85.5	10370.26	515.45	12039.79
Phase II																												
6	BALLARI	177.84	0	0	0	20021.47	0	0	0	0	0	20199.31	0	11226.2	34.94	2964.21	54.3	301.82	0	301.82	14581.47	72.19	5617.83	48.69	2.85	265.34	7.23	324.11
7	BELAGAVI	25.74	0	0	0	45997.29	0	0	0	0	0	46023.03	0	29608.35	1520.77	13831.56	173.27	709.9	0	709.9	45843.85	99.61	179.18	427.35	45.84	1647.5	31.83	2152.52
8	CHIKKAMAGALURU	-112.1	0	0	0	9292.61	0	0	0	0	0	9180.51	0	6891.77	22.84	2062.28	0	253	0	253	9229.89	100.54	-49.38	22.6	3.1	1379.56	0.23	1405.49
9	HASSAN	-44.09	0	0	0	17964.98	0.99	0	0	0	0	17921.88	0	13903.42	41.19	3432.31	1.35	458.21	1	459.21	17837.47	99.53	84.41	141.34	0	973.18	5.25	1119.77
10	KODAGU	50.45	0	0	0	2402.37	0	0	0	0	0	2452.82	0	1283.28	0	525.04	30.5	43.57	0.6	44.17	2382.99	97.15	69.82	10.84	0	329.47	16.22	356.53
11	SHIVAMOGGA	403.16	0	0	0	13385.33	0	0	0	0	0	13788.49	0	9062.76	142.64	3849.86	38.34	217.74	35	252.74	13346.34	96.79	442.14	52.84	17.06	300.7	3.27	373.87
PhaseII Total		501	0	0	0	109064.05	0.99	0	0	0	0	109566.03	0	72475.79	1762.37	26665.26	297.76	1984.24	36.6	2020.84	103222.02	94.21	6344	703.66	68.85	4895.75	64.03	5722.29
Phase III																												
12	BAGALKOTE	-252.99	0	0	0	21496.89	0	0	0	0	0	21243.9	0	13617.57	26.75	7226.29	123.47	411.44	0	411.44	21405.51	100.76	-161.61	123.54	1.6	665.29	11.35	801.78
13	BENGALURU	0.49	0	0	0	337.56	0	0	0	0	0	338.05	0	159.28	0	119.03	0.55	32.5	23	55.5	334.37	98.91	3.69	10.38	0	109.94	0.35	120.67
14	BENGALURU RURAL	63.09	0	0	0	6261.93	0	0	0	0	0	6325.02	0	4426.33	0.85	1574.65	13.49	232.85	0.72	233.57	6248.93	98.8	76.09	46.07	0.1	557.41	8.78	612.36
15	CHAMARAJA NAGARA	-97.3	0	0	0	8377.24	0	0	0	0	0	8279.94	0	7993.98	28.52	0	0	346.93	2.99	349.92	8372.43	101.12	-92.49	88.4	0.03	960.52	4.81	1053.76
16	CHIKKABALLAPURA	76.67	0	0	0	23542.94	0	0	0	0	0	23619.61	0	15369.21	27.73	7295.81	560.53	275	0	275	23528.27	99.61	91.34	304.59	0.21	1366.26	71.45	1742.52
17	DAKSHINA KANNADA	73.5	0	0	0	5820.32	0	0	0	0	0	5893.81	0	3766.76	66.37	1612.64	31.68	282.6	6	288.6	5766.05	97.83	127.76	41.15	9.12	275.03	4.56	329.86
18	DHARWAR	20.35	0	0	0	9498.73	0	0	0	0	0	9519.08	0	6719.21	58.25	2182.3	53.81	465.13	0	465.13	9478.69	99.58	40.39	160.01	33.85	2013.23	59.05	2266.14
19	GADAG	-53.66	0	0	0	13267.64	0	0	0	0	0	13213.97	0	10082.87	31.56	2764.87	28.92	321.75	2.5	324.25	13232.47	100.14	-18.49	92.14	0	594.17	12.75	699.06
20	HAVERI	288.07	0	0	0	18382.6	0	0	0	0	0	18670.67	0	12917.23	32.36	4995.97	155.89	213.16	3	216.16	18323.1	98.14	347.57	233.01	1.5	1391.16	11.04	1636.71
21	KOLAR	432.16	0	0	0	22313.84	0	0	0	0	0	22746.01	0	12808.17	31.89	8505.67	515.28	321.82	98	419.82	22280.83	97.95	465.18	120.5	0.04	842.32	38.61	1001.47
22	KOPPAL	-21.61	0	0	0	22603.02	0	0	0	0	0	22581.42	0	19971.79	53.02	2016.87	78.84	426.17	20	446.17	22566.69	99.93	14.73	150.59	4.99	1434.91	52.73	1643.22
23	MANDYA	3.46	0	0	0	11347.68	0	0	0	0	0	11351.14	0	8927.46	52.2	1897.41	7.5	420.38	0	420.38	11304.95	99.59	46.18	100.38	1.86	1530.63	50.23	1683.1
24	MYSURU	74.88	0	0	0	14868.37	0	0	0	0	0	14943.25	0	11146.62	61.21	3490.64	7.8	83	0	83	14789.27	98.97	153.98	234.26	25.91	1293.57	10.03	1563.77
25	RAMANAGARA	559.64	0	0	0	21494.43	0	0	0	0	0	22054.08	0	17264.98	16.38	3811.92	2.58	323.96	0	323.96	21419.82	97.12	634.26	145.26	0.02	3342.9	10.61	3498.79
26	TUMAKURU	166.94	0	0	0	27480.07	0	0	0	0	0	27647.01	0	17420.56	96.88	9564.75	34.24	253.66	0	253.66	27370.09	99	276.92	157.6	4.97	1659.04	8.88	1830.49
27	UDUPI	14.95	0	0	0	2804.67	0	0	0	0	0	2819.62	0	1867.13	12.82	811.04	0.66	99.5	0	99.5	2791.15	98.99	28.47	8.92	0.62	396.82	0.69	407.05
28	UTTARA KANNADA	50.82	0	0	0	6410.29	0	0	0	0	0	6461.11	0	4159.25	27.55	2056.8	51.51	90.5	2.5	93	6388.12	98.87	72.98	73.23	1.88	238.79	7.52	321.42
29	VIJAYANAGARA	0.43	0	0	0	11656.43	0	0	0	0	0	11656.85	0	14883.12	63.17	2070.73	18.99	0	0	0	17036.01	146.15	-5379.15	89	29.34	2600.45	139.98	2858.77
30	VIJAYPURA	14.58	0	0	0	19101.53	0	0	0	0	0	19116.11	0	13434.85	38.87	4953.68	7.27	437.92	47.85	485.77	18920.44	98.98	195.67	225.34	4.96	2306.17	1.4	2537.87
31	Yadgir	607.89	0	0	0	14993.32	0	0	0	0	0	15601.21	0	11650.1	14.52	2850.28	176.22	184.58	9	193.58	14884.7	95.41	716.51	223.96	0	1782.42	114.3	2120.68
PhaseIII Total		2022.37	0	0	0	282059.5	0	0	0	0	0	284081.86	0	208586.96	745.89	69801.39	1869.23	5222.84	215.56	5438.4	286441.88	100.83	-2360.02	2628.33	121.01	25161.03	619.12	28729.49
All District Total		5043.78	0	0	0	496922.84	0.99	0	0	0	0	501967.61	0	359472.93	2991.34	120540.03	3276.58	8675.23	288.89	8964.12	495245	98.66	6722.59	4400.57	275.36	40527.04	1198.58	46501.55
State Fund		14978.37		47.32		0	27293		0			-285172.32						2652.5	847.5	3500	3500		-288672.32					
Grand Total of State		20022.15	0	47.32	0	496922.84	27293.99	0	0	0	0	216795.29	0	359472.93	2991.34	120540.03	3276.58	11327.73	1136.39	12464.12	498745	228.44	-281949.73	4400.57	275.36	40527.04	1198.58	46501.55

Status of State Fund:

* OB of State Fund= 14978.36529
* OB of State Fund= 14978.36529

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ : 404

ವಿಧಾನ ಸಭೆಯ ಸದಸ್ಯರ ಹೆಸರು : ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)

ಉತ್ತರಿಸುವ ದಿನಾಂಕ : 15-12-2021

ಉತ್ತರಿಸುವ ಸಚಿವರು : ಮಾನ್ಯ ಕೃಷಿ ಸಚಿವರು

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಕೃಷಿ ಇಲಾಖೆಯ ವಿವಿಧ ವೃಂದಗಳಿಗೆ ಕಲ್ಯಾಣ ಕರ್ನಾಟಕ ಆರ್ಟಿಕಲ್ 371(ಜೆ)ರ ಪ್ರಕಾರ ಅರ್ಹ ಎಲ್ಲಾ ವರ್ಗದ ನೌಕರರಿಗೆ ಇಲ್ಲಿಯವರೆಗೆ ಯಾವ ಯಾವ ಅನುಕೂಲಗಳನ್ನು ಒದಗಿಸಿ ಕೊಡಲಾಗಿದೆ; ಯಾವುವು; (ಸಂಪೂರ್ಣ ವಿವರ ನೀಡುವುದು)	ಕೃಷಿ ಇಲಾಖೆಯಲ್ಲಿ ವಿವಿಧ ವೃಂದಗಳಿಗೆ ಕಲ್ಯಾಣ ಕರ್ನಾಟಕ ಆರ್ಟಿಕಲ್ 371(ಜೆ) ಪ್ರಕಾರ ಪ್ರಾದೇಶಿಕ ಮತ್ತು ರಾಜ್ಯ ವೃಂದದ ಅಧಿಕಾರಿ / ನೌಕರರಿಗೆ ಪ್ರತ್ಯೇಕವಾಗಿ ಜೇಷ್ಠತಾ ಪಟ್ಟಿ ತಯಾರಿಸಿ ಅರ್ಹ ಎಲ್ಲಾ ವಿವಿಧ ವರ್ಗದ ನೌಕರರಿಗೆ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ ಹಾಗೂ ನೇರ ನೇಮಕಾತಿಗೆ ಮೀಸಲಿಟ್ಟ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಕ್ರಮವಹಿಸಿದೆ.
ಆ)	ಮುಖ್ಯವಾಗಿ ಕ್ಷೇತ್ರ ಸಿಬ್ಬಂದಿಗಳಾದ ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿ ಹಾಗೂ ಇತರೆ ವೃಂದದ ಅಧಿಕಾರಿಗಳಿಗೆ ಸರ್ಕಾರವು ನೀಡಿದ ಸೌಲಭ್ಯಗಳೇನು?	ಕ್ಷೇತ್ರ ಸಿಬ್ಬಂದಿಯಾದ ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಅಧಿಕಾರಿ, ಸಹಾಯಕ ಕೃಷಿ ಅಧಿಕಾರಿಗಳಿಗೆ ನಿಗಧಿಪಡಿಸಲಾದ ಸರ್ಕಾರಿ ಸೌಲಭ್ಯಗಳನ್ನು ಕೆ.ಸಿ.ಎಸ್.ಆರ್ ಹಾಗೂ ಸರ್ಕಾರದ ಅಧಿಸೂಚನೆ-1 ಮತ್ತು 2ರ ಸಂಖ್ಯೆ:ಡಿಪಿಎಆರ್ 43 ಹೆಚ್.ಕೆ.ಸಿ 2013, ದಿನಾಂಕ:29.01.2014ರನ್ವಯ ಕ್ರಮವಹಿಸಲಾಗಿದೆ.

AGRI-AGS/221/2021

(ಬಿ.ಸಿ.ಪಾಟೀಲ್)
ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	405
ಸದಸ್ಯರ ಹೆಸರು	:	ಶ್ರೀ ಬಸವನಗೌಡ ದದ್ದಲ (ರಾಯಚೂರು ಗ್ರಾಮಾಂತರ)
ಉತ್ತರಿಸುವ ದಿನಾಂಕ	:	15.12.2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕಲ್ಯಾಣ ಕರ್ನಾಟಕ ಅಭಿವೃದ್ಧಿ ಮಂಡಳಿ ಅಡಿಯಲ್ಲಿ ಅನುದಾನವನ್ನು ಯಾವ ಮಾನದಂಡಗಳನ್ವಯ ಹಂಚಿಕೆ ಮಾಡಲಾಗುತ್ತದೆ; (ವಿಧಾನ ಸಭಾ ಕ್ಷೇತ್ರವಾರು, ತಾಲ್ಲೂಕುವಾರು ಸಂಪೂರ್ಣ ವಿವರವನ್ನು ನೀಡುವುದು)	ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯು ಅನುದಾನವನ್ನು ಡಾ|| ಡಿ.ಎಂ.ನಂಜುಂಡಪ್ಪ ವರದಿಯನ್ವಯ ತಾಲ್ಲೂಕು ದುಸ್ಥಿತಿ ಸೂಚ್ಯಾಂಕದ ಪ್ರಕಾರ ಹಂಚಿಕೆ ಮಾಡಲಾಗುತ್ತಿದೆ. ದುಸ್ಥಿತಿ ಸೂಚ್ಯಾಂಕದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ. ಕಲ್ಯಾಣ (ಹಿಂದಿನ ಹೈದ್ರಾಬಾದ) ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯು ವಿಧಾನ ಸಭಾ ಕ್ಷೇತ್ರವಾರು ಯಾವುದೇ ಅನುದಾನ ಹಂಚಿಕೆ ಮಾಡುವುದಿಲ್ಲ.
ಆ	ಆದರೆ ಒಂದೇ ತಾಲ್ಲೂಕಿನಡಿ ಕೆಲವೊಂದು ವಿಧಾನಸಭಾ ಕ್ಷೇತ್ರಗಳು ಬರುವುದರಿಂದ ಅತಿ ಕಡಿಮೆ ಅನುದಾನ ಹಂಚಿಕೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ತಾರತಮ್ಯ ಸರಿಪಡಿಸಿಲು ಸರ್ಕಾರವು ಯಾವ ಕ್ರಮ ಕೈಗೊಳ್ಳುತ್ತದೆ; ಈ ಬಗ್ಗೆ ಸರ್ಕಾರದ ನಿರ್ಧಾರವೇನು? (ಸಂಪೂರ್ಣ ವಿವರವನ್ನು ನೀಡುವುದು)	ಇಲ್ಲ. ಡಾ|| ಡಿ.ಎಂ.ನಂಜುಂಡಪ್ಪ ವರದಿಯನ್ವಯ ತಾಲ್ಲೂಕಿನ ದುಸ್ಥಿತಿ ಸೂಚ್ಯಾಂಕಕ್ಕೆ ಅನುಗುಣವಾಗಿ ಅನುದಾನ ಹಂಚಿಕೆ ಮಾಡಲಾಗುತ್ತಿದೆ. ತಾಲ್ಲೂಕಿನ ಒಳಗೆ ಎರಡು ಕ್ಷೇತ್ರಗಳು ಬರುತ್ತಿದ್ದರು ತಾಲ್ಲೂಕಿಗೆ ಒಟ್ಟಾರೆ ದುಸ್ಥಿತಿ ಸೂಚ್ಯಾಂಕ ಪರಿಗಣಿಸಲಾಗುವುದರಿಂದ ಅನುದಾನ ಹಂಚಿಕೆಯಲ್ಲಿ ಯಾವುದೇ ತಾರತಮ್ಯವಾಗುವುದಿಲ್ಲ. ಆದ್ದರಿಂದ ಸರ್ಕಾರ ಯಾವುದೇ ಕ್ರಮವಹಿಸುವ ಅಗತ್ಯವಿಲ್ಲ.

ಸಂಖ್ಯೆ: ಪಿಡಿಎಸ್ 134 ಹೆಚ್ ಕೆಡಿ 2021


(ಮುನಿರತ್ನ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:405ಕ್ಕೆ ಅನುಬಂಧ-1

ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ತಾಲ್ಲೂಕವಾರು ಸಿ.ಡಿ.ಐ ಇಂಡೆಕ್ಸ್

Division	District	Sl. No	Nature of the taluk	Taluka	CDI
1	2	3	4	5	6
Gulbarga	Bellary	1	Most backward	Sandur	0.25
		2	Most backward	Kudligi	0.26
		3	More backward	Siruguppa	0.14
		4	More backward	H.B. Halli	0.16
		5	More backward	Hadagali	0.19
		6	Most backward	Harapanahalli	0.28
	Bellary District Total				1.28
	Bidar	7	Most backward	Bhalki	0.26
		8	Most backward	Humnabad	0.27
		9	Most backward	Basavakalyan	0.31
		10	Most backward	Aurad	0.35
	Bidar District Total				1.19
	Yadigir	11	Most backward	Shahpur	0.38
		12	Most backward	Shorapur	0.30
		13	Most backward	Yadgiri	0.33
	Yadigir District Total				1.01
	Gulbarga	14	Most backward	Sedam	0.28
		15	Most backward	Chittapur	0.35
		16	Most backward	Afzalpur	0.38
		17	Most backward	Aland	0.39
		18	Most backward	Chincholi	0.43
		19	Most backward	Jevargi	0.43
		20	Backward	Gulbarga	0.11
	Gulbarga District Total				2.37
	Raichur	21	Most backward	Sindhanur	0.22
		22	Most backward	Manvi	0.31
		23	Most backward	Lingasagur	0.37
		24	Most backward	Devdurga	0.47
		25	More backward	Raichur	0.13
	Raichur District Total				1.50
	Koppal	26	Most backward	Kushtagi	0.36
		27	Most backward	Yelburga	0.37
		28	More backward	Koppal	0.19
		29	Backward	Gangavathi	0.07
	Koppal District Total				0.99
Gulbarga Division Total					8.34
Grand Total					8.34

ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ



ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	406
ಸದಸ್ಯರ ಹೆಸರು	:	ಶ್ರೀ ಸುಬ್ಬಾರೆಡ್ಡಿ ಎಸ್. ಎನ್(ಬಾಗೇಪಲ್ಲಿ)
ಉತ್ತರಿಸುವ ದಿನಾಂಕ	:	15.12.2021
ಉತ್ತರಿಸುವ ಸಚಿವರು	:	ಸಾರಿಗೆ ಹಾಗೂ ಪರಿಶಿಷ್ಟ ವರ್ಗಗಳ


ಕ್ರ.ಸಂ	ಪ್ರಶ್ನೆ	ಉತ್ತರ
ಅ	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳಲ್ಲಿ ಮಹರ್ಷಿ ವಾಲ್ಮೀಕಿ ಭವನ ನಿರ್ಮಾಣ ಮಾಡದಿರುಲು ಕಾರಣಗಳೇನು;	ಬಾಗೇಪಲ್ಲಿ ತಾಲ್ಲೂಕು ವಾಲ್ಮೀಕಿ ಭವನ ನಿರ್ಮಿಸಲು ದಿನಾಂಕ:14.08.2017 ರಲ್ಲಿ ರೂ. 150.00 ಲಕ್ಷಗಳನ್ನು ಬಿಡುಗಡೆ ಮಾಡಲು ತಾತ್ವಿಕ ಮಂಜೂರಾತಿ ನೀಡಲಾಗಿತ್ತು ಮತ್ತು ರೂ. 50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳ ಜಂಟಿ ಖಾತೆಗೆ ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಭವನ ನಿರ್ಮಾಣ ಕಾಮಗಾರಿಯನ್ನು ಜಿಲ್ಲಾ ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಇವರಿಂದ ನಿರ್ವಹಿಸಲು ಆದೇಶ ನೀಡಲಾಗಿದ್ದು, ತದನಂತರದಲ್ಲಿ ಸದರಿ ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್ ವತಿಯಿಂದ ಕೈಗೊಳ್ಳಲು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ರವರು ಕೋರಿದ ಹಿನ್ನೆಲೆಯಲ್ಲಿ ಪ್ರಸ್ತಾಪಿತ ಕಾಮಗಾರಿಯನ್ನು ಕೆ.ಟಿ.ಪಿ.ಪಿ ಕಾಯ್ದೆಯನ್ವಯ ಇ-ಟೆಂಡರ್ ಪ್ರಕ್ರಿಯೆ ಮುಖಾಂತರ ಲೋಕೋಪಯೋಗಿ ಇಲಾಖೆ ಅಥವಾ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸಲು ಆದೇಶಿಸಲಾಗಿತ್ತು (ಅನುಬಂಧದಲ್ಲಿ ನೀಡಲಾಗಿದೆ). ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿನಾಂಕ:20.07.2018 ಹಾಗೂ 25.07.2018 ರಂದು ನಡೆದ ಸಭೆಯಲ್ಲಿ ಪರಿಶಿಷ್ಟ ಪಂಗಡದ ಕಲ್ಯಾಣ ಇಲಾಖಾ ವತಿಯಿಂದ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಈ ಹಿಂದೆ ಜಿಲ್ಲಾಧಿಕಾರಿಗಳ, ಪಿಡಿ ಖಾತೆಗೆ ಹಾಗೂ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಕಛೇರಿ ಅಧೀಕ್ಷಕರ ಜಂಟಿ
ಆ	ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಬಾಗೇಪಲ್ಲಿ ಪಟ್ಟಣಕ್ಕೆ ವಾಲ್ಮೀಕಿ ಭವನ ಮಂಜೂರಾಗಿ 5 ವರ್ಷ ಕಳೆದರು ಭವನ ನಿರ್ಮಾಣಕ್ಕೆ ಅಧಿಕಾರಿಗಳು ಉದ್ದೇಶ ಪೂರ್ವಕವಾಗಿ ಅನುದಾನ ಮಂಜೂರು ಮಾಡಲು ವಿಳಂಬ ಮಾಡುತ್ತಿರುವುದು ಅಥವಾ ನಿರ್ಲಕ್ಷ್ಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	
ಇ	ಬಾಗೇಪಲ್ಲಿ ಮತ್ತು ಗುಡಿಬಂಡೆ ಪಟ್ಟಣಗಳ ಮಹರ್ಷಿ ವಾಲ್ಮೀಕಿ ಭವನಗಳ ಕಟ್ಟಡ ನಿರ್ಮಾಣಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	
ಈ	ಪ್ರಸಕ್ತ ಸಾಲಿನಲ್ಲಿ ಸದರಿ ಭವನಗಳನ್ನು ನಿರ್ಮಾಣ ಮಾಡಲು ಅನುದಾನ ಮಂಜೂರು ಮಾಡಲು ಸರ್ಕಾರ ಆಸಕ್ತಿ ಹೊಂದಿದೆಯೇ; ಹೊಂದಿದ್ದಲ್ಲಿ, ಯಾವ ಕಾಲಮಿತಿಯೊಳಗೆ ಅನುದಾನ ಮಂಜೂರು ಮಾಡಲಾಗುವುದು? (ವಿವರ ನೀಡುವುದು).	

		ಖಾತೆಗೆ ಬಿಡುಗಡೆ ಮಾಡಿರುವ ಅನುದಾನದಲ್ಲಿ ಇದುವರೆವಿಗೂ ವೆಚ್ಚವಾಗಿ ಉಳಿಕೆಯಾಗಿರುವ ಅನುದಾನವನ್ನು ಕಡ್ಡಾಯವಾಗಿ ವಾಪಸ್ಸು ಪಡೆಯುವಂತೆ ಸೂಚನೆ ನೀಡಿರುತ್ತಾರೆ. ವಿವಿಧ ಕಾರ್ಯಕ್ರಮಗಳಿಗೆ ಜಿಲ್ಲಾಧಿಕಾರಿಗಳ ಪಿಡಿ ಖಾತೆಗೆ ಹಾಗೂ ಇಲಾಖೆಯ ಜಿಲ್ಲಾ ಮಟ್ಟದ ಅಧಿಕಾರಿಗಳು/ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಕಛೇರಿ ಅಧೀಕ್ಷಕರ ಜಂಟಿ ಖಾತೆಗಳಲ್ಲಿ ಉಳಿಕೆಯಾಗಿರುವ ಅನುದಾನವನ್ನು ಅಗತ್ಯ ಕಾರ್ಯಕ್ರಮಗಳಿಗೆ ಬಳಸುವ ಉದ್ದೇಶದಿಂದ ಹಿಂದಿರುಗಿಸಲು ನಿರ್ದೇಶನ ನೀಡಲಾಗಿ. ಅದರಂತೆ ಜಿಲ್ಲಾಧಿಕಾರಿಗಳು/ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಜಂಟಿ ಖಾತೆಯಲ್ಲಿ ವೆಚ್ಚವಾಗದೇ ಉಳಿಕೆಯಾಗಿರುವ ಅನುದಾನವನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರು ಹಿಂದಿರುಗಿಸಿರುತ್ತಾರೆ. ಬಾಗೇಪಲ್ಲಿ ತಾಲ್ಲೂಕು ಮಟ್ಟದ ವಾಲ್ಮೀಕಿ ಭವನ ನಿರ್ಮಾಣ ಕಾಮಗಾರಿ ಕೈಗೊಳ್ಳಲು ರೂ.150.00 ಲಕ್ಷಗಳ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ ಕೂಡಲೇ ಪರಿಶೀಲಿಸಿ ಕ್ರಮವಹಿಸಲಾಗುವುದು. ಮುಂದುವರೆದು, ಗುಡಿಬಂಡೆ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ಅನುದಾನವನ್ನು ಮಂಜೂರು ಮಾಡುವ ಬಗ್ಗೆ ಸೂಕ್ತ ಕ್ರಮವಹಿಸಲಾಗುವುದು.

ಸಕಇ 431 ಎಸ್‌ಟಿಪಿ 2021


(ಬಿ. ಶ್ರೀರಾಮುಲು)
ಸಾರಿಗೆ ಹಾಗೂ ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಅನುಬಂಧ - 01



ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ ಬಾಗೆಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವ ಕುರಿತು.



ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ:ಸಕಇ 327 ಪಕವಿ 2015 ದಿನಾಂಕ:16.09.2015

2. ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಇವರ ಪತ್ರ ಸಂಖ್ಯೆ:ಪವಕನಿ/ಸಂ.ವಿ/ಸಿಆರ್-50/2016-17, ದಿ:11.07.2016. ಮತ್ತು 03.02.2017.

****

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ದಿ:16.09.2015ರ ಆದೇಶದಲ್ಲಿ ಸಮುದಾಯ ಭವನ ನಿರ್ಮಾಣ ಕುರಿತಂತೆ ಪರಿಷ್ಕೃತ ಮಾರ್ಗಸೂಚಿಗಳನ್ನು ನಿಗಧಿಪಡಿಸಲಾಗಿದ್ದು, ಸದರಿ ಮಾರ್ಗಸೂಚಿಯನ್ವಯ ಭವನದ ನಿರ್ಮಾಣಕ್ಕೆ ಈ ಕೆಳಕಂಡ ಅನುದಾನವನ್ನು ಮಂಜೂರು ಮಾಡಲು ಅವಕಾಶವಿರುತ್ತದೆ.

ಕ್ರ.ಸಂ	ವಲಯ	ನಿಗಧಿಪಡಿಸಿದ ಅನುದಾನ ರೂ. (ಲಕ್ಷಗಳಲ್ಲಿ)
1	ಹಳ್ಳಿ/ಗ್ರಾಮ ಪ್ರದೇಶದಲ್ಲಿ	ರೂ. 12.00
2	ಹೋಬಳಿ ಮಟ್ಟದಲ್ಲಿ	ರೂ. 50.00
3	ತಾಲ್ಲೂಕು ಕೇಂದ್ರ ಸ್ಥಾನದಲ್ಲಿ	ರೂ. 150.00
4	ಜಿಲ್ಲಾ ಕೇಂದ್ರ ಕೇಂದ್ರ ಸ್ಥಾನದಲ್ಲಿ	ರೂ. 350.00
5	ರಾಜ್ಯ ಮಟ್ಟದಲ್ಲಿ	ರೂ. 500.00

ಮೇಲೆ ಕ್ರಮ ಸಂಖ್ಯೆ 2ರಲ್ಲಿ ಓದಲಾದ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರ ಪತ್ರದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೆಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗಳಿಗೆ ಆಡಳತಾತ್ಮಕ ಅನುಮೋದನೆ ನೀಡಿ ರೂ. 150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಆದೇಶ ಹೊರಡಿಸುವಂತೆ ಕೋರಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಕಇ 218 ಪವಯೋ 2016 ಬೆಂಗಳೂರು, ದಿನಾಂಕ:24.04.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಬಾಗೆಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ. 150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಭವನ ನಿರ್ಮಾಣ ಕಾಮಗಾರಿಯನ್ನು ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಮೂಲಕ ಕಾಮಗಾರಿ ಅನುಷ್ಠಾನ ಟೆಂಡರ್ ಕರೆದು ನಿರ್ಮಾಣ ಮಾಡುವ ಮತ್ತು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ತಾತ್ವಿಕ ಮಂಜೂರಾತಿ ನೀಡಲಾಗಿದೆ.

1. ಸರ್ಕಾರದ ಆದೇಶ ಸಂಖ್ಯೆ: ಸಕಇ 327 ಪಕವಿ 2015,ದಿನಾಂಕ:16.09.2015 ರಲ್ಲಿ ಭವನಗಳ ನಿರ್ಮಾಣಕ್ಕಾಗಿ ಹೊರಡಿಸಲಾದ ಪರಿಷ್ಕೃತ ಮಾರ್ಗ ಸೂಚಿಗಳನ್ನು ಪಾಲಿಸತಕ್ಕದ್ದು.

--2

2. ಉದ್ದೇಶಿತ ಭವನದ ಕಟ್ಟಡ ಕಾಮಗಾರಿಗಳಿಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ತಾಂತ್ರಿಕ ಹಾಗೂ ಆಡಳಿತಾತ್ಮಕ ಅನುಮೋದನೆ ಪಡೆಯತಕ್ಕದ್ದು.

3. ಈ ಭವನ ನಿರ್ಮಾಣ ವೆಚ್ಚವು ಉಲ್ಲೇಖಿತ ಅಂದಾಜು ವೆಚ್ಚ ಮೀರಿದ್ದಲ್ಲಿ ಅಂತಹ ಮೊತ್ತವನ್ನು ಸ್ಥಳೀಯ ಮೂಲಗಳಿಂದ ಸಂಗ್ರಹಿಸತಕ್ಕದ್ದು.

4. ಸದರಿ ಭವನದ ನಿರ್ಮಾಣ ಉಸ್ತುವಾರಿಯನ್ನು ಜಿಲ್ಲಾ ಪರಿಶಿಷ್ಟ ಪಂಗಡಗಳ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ, ಇವರು ನೋಡಿಕೊಳ್ಳತಕ್ಕದ್ದು.

5. ಕಾಮಗಾರಿಯನ್ನು ನಿರ್ಮಿತಿ ಕೇಂದ್ರದವರಿಗೆ ವಹಿಸುವುದಾದಲ್ಲಿ, ಕೆ.ಟಿ.ಪಿ.ಪಿ ಕಾಯ್ದೆ ನಿಯಮ 4ಜಿರಡಿ ವಿನಾಯಿತಿಯನ್ನು ಆರ್ಥಿಕ ಇಲಾಖೆಯಿಂದ ಪಡೆದುಕೊಳ್ಳುವುದು.

6. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗಧಿಗೊಳಿಸಿರುವ "ಕಾರ್ಯವಿಧಾನ" (procedure) ಪಾಲಿಸತಕ್ಕದ್ದು.

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಬೆಂಗಳೂರು ಇವರು ಮೇಲಿನ ಷರತ್ತುಗಳು ಪೂರೈಕೆಯಾಗಿರುವುದನ್ನು ಖಚಿತಪಡಿಸಿಕೊಂಡು ಅನುದಾನವನ್ನು ಬಿಡುಗಡೆ ಮಾಡುವುದು. ಇದಕ್ಕೆ ತಗಲುವ ವೆಚ್ಚವನ್ನು 2016-17ನೇ ಸಾಲಿನ ರಾಜ್ಯವಲಯ ಯೋಜನಾ ಲೆಕ್ಕ ಶೀರ್ಷಿಕೆ 4225-02-277-2-02 ರಡಿ ವಿದ್ಯಾರ್ಥಿನಿಲಯ/ಆಶ್ರಮ ಶಾಲೆ ಹಾಗೂ ವಾಲ್ಮೀಕಿ ಭವನ ಕಟ್ಟಡ ನಿರ್ಮಾಣ ಮತ್ತು ನಿವೇಶನ ಖರೀದಿಗಾಗಿ ನಿಗಧಿಪಡಿಸಿಕೊಂಡಿರುವ ರೂ.52.60 ಕೋಟಿಗಳಲ್ಲಿ ಭರಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 03 ಟಿಎಫ್‌ಪಿ 2016, ದಿ:02.04.2014ರಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿ/ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

(ರಾಜಶ್ರೀ ಹೆಚ್. ಕುಲಕರ್ಣಿ)
ಸರ್ಕಾರದ ಅಧೀನ ಕಾರ್ಯದರ್ಶಿ-2,
ಸಮಾಜ ಕಲ್ಯಾಣ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಎ ಮತ್ತು ಇ) (ಲೆಕ್ಕಪರಿಶೋಧನೆ-2)ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಕೃಷಿಭವನ, ಬೆಂಗಳೂರು.
3. ಜಿಲ್ಲಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ.
4. ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ, ಚಿಕ್ಕಬಳ್ಳಾಪುರ ಜಿಲ್ಲೆ.
5. ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

ಪ್ರತಿ ಮಾಹಿತಿಗಾಗಿ:

1. ಮಾನ್ಯ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರ ಆಪ್ತ ಶಾಖೆ, ವಿಧಾನಸೌಧ.
2. ಸರ್ಕಾರದ ಕಾರ್ಯದರ್ಶಿ, ಸಮಾಜ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ.
3. ಸರ್ಕಾರದ ಜಂಟಿ ಕಾರ್ಯದರ್ಶಿ-2, ಸಮಾಜ ಕಲ್ಯಾಣ ಇಲಾಖೆ.

ಅನುಬಂಧ - 02

ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು, ಇವರ ನಡವಳಿಗಳು

ವಿಷಯ: ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಾಣ ಮಾಡಲು ಅಂದಾಜುಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1 ಸರ್ಕಾರದ ಆದೇಶ ಸಂಖ್ಯೆ:ಸಕಇ 327 ಪಕವಿ 2015 ದಿನಾಂಕ: 16.09.2015.
2 ಸರ್ಕಾರದ ಆದೇಶ ಸಂಖ್ಯೆ:ಸಕಇ 218 ಪಕಯೋ 2016 ದಿನಾಂಕ:24.04.2017.
3 ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ-2/ಟಿಎಫ್‌ಪಿ/2010 ದಿನಾಂಕ: 30.04.2010.
4 ಸರ್ಕಾರದ ಆದೇಶ ಸಂಖ್ಯೆ:ಸಕಇ 212 ಎಸ್‌ಎಲ್‌ಪಿ 2017 ದಿನಾಂಕ: 20.06.2017.

*****

ಪ್ರಸ್ತಾವನೆ:

ವಾಲ್ಮೀಕಿ ಭವನ/ಸಮುದಾಯ ಭವನಗಳ ನಿರ್ಮಾಣಕ್ಕೆ ಉಲ್ಲೇಖ (1)ರ ಸರ್ಕಾರದ ಆದೇಶದಲ್ಲಿ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಸದರಿ ಮಾರ್ಗಸೂಚಿಯನ್ವಯ ಭವನಗಳ ನಿರ್ಮಾಣಕ್ಕೆ ಕೆಳಕಂಡ ಅನುದಾನವನ್ನು ಮಂಜೂರಾತಿ ನೀಡಲು ಅವಕಾಶವಿರುತ್ತದೆ.

(ರೂ. ಲಕ್ಷಗಳಲ್ಲಿ)

ಹಳ್ಳಿ/ಗ್ರಾಮ ಪ್ರದೇಶದಲ್ಲಿ	ರೂ.12.00
ಹೋಬಳಿ ಮಟ್ಟದಲ್ಲಿ	ರೂ. 50.00
ತಾಲ್ಲೂಕು ಕೇಂದ್ರ ಸ್ಥಾನದಲ್ಲಿ	ರೂ. 150.00
ಜಿಲ್ಲಾ ಕೇಂದ್ರ ಸ್ಥಾನದಲ್ಲಿ	ರೂ.350.00
ರಾಜ್ಯ ಮಟ್ಟದಲ್ಲಿ	ರೂ. 500.00

ಉಲ್ಲೇಖ(2)ರ ಸರ್ಕಾರದ ಆದೇಶದಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ರೂ.150.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಕೆಲವು ಷರತ್ತುಗಳಿಗೊಳಪಟ್ಟು ಮಂಜೂರಾತಿ ನೀಡಲಾಗಿದೆ. ಸರ್ಕಾರದ ಆದೇಶದನ್ವಯ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಮೊದಲನೇ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಬೇಕಾಗಿರುತ್ತದೆ.

ಉಲ್ಲೇಖ(4)ರಲ್ಲಿ ಇಲಾಖಾ ಮುಖ್ಯಸ್ಥರಿಗೆ ಪ್ರತ್ಯಾಯೋಜಿಸಿದ ಆರ್ಥಿಕ ಅಧಿಕಾರದನ್ವಯ ಉಲ್ಲೇಖ(5)ರ ಸ'ರ್ಕಾರದ ಆದೇಶದಲ್ಲಿ 2017-18ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದವರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು, ರಾಜ್ಯವಲಯ ಬಂಡವಾಳ ಲೆಕ್ಕಶೀರ್ಷಿಕೆ: 4225-02-794-0-01 (059) ರಡಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾ ಮಟ್ಟದ ವಾಲ್ಮೀಕಿ/ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.50.00 ಕೋಟಿಗಳನ್ನು ನಿಗಧಿಪಡಿಸಲಾಗಿದ್ದು, ನಿಗಧಿಪಡಿಸಿದ ಅನುದಾನದಲ್ಲಿ ಭರಿಸಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿ ಮೊದಲನೇ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಬಿಡುಗಡೆ ಇವರಿಗೆ ಬಿಡುಗಡೆ ಮಾಡಬೇಕಾಗಿರುವುದರಿಂದ ಕೆಳಕಂಡ ಆದೇಶ ಹೊರಡಿಸಿದೆ.

ಆದೇಶ

ಸಂಖ್ಯೆ:ಪವಕಇ/ವಾ.ಭ/ಸಿಆರ್-30/2017-18 ದಿನಾಂಕ: 14.08.2017

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳನ್ನು ಅನುಸರಿಸಿ ಚಿಕ್ಕಬಳ್ಳಾಪುರ ಜಿಲ್ಲೆ, ಬಾಗೇಪಲ್ಲಿ ಪಟ್ಟಣದಲ್ಲಿ ವಾಲ್ಮೀಕಿ ಭವನ ನಿರ್ಮಿಸಲು ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ, ಚಿಕ್ಕಬಳ್ಳಾಪುರ ಜಿಲ್ಲೆ ಇವರು ತಯಾರಿಸಿ ಸಲ್ಲಿಸಿರುವ ರೂ.150.00 ಲಕ್ಷಗಳ ಅಂದಾಜು ಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಹಾಗೂ ಸದರಿ ವಾಲ್ಮೀಕಿ ಭವನದ ಕಟ್ಟಡ ಕಾಮಗಾರಿಗಳಿಗೆ ಮೊದಲನೇ ಕಂತಾಗಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರಿಗೆ ಬಿಡುಗಡೆ ಮಾಡಲು ಮಂಜೂರಾತಿ ನೀಡಿ ಆದೇಶಿಸಿದೆ.

ಈ ಸಂಬಂಧ ವೆಚ್ಚವನ್ನು 2017-18ನೇ ಸಾಲಿನಲ್ಲಿ ಪರಿಶಿಷ್ಟ ಪಂಗಡದವರಿಗೆ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳು, ರಾಜ್ಯವಲಯ ಬಂಡವಾಳ ಲೆಕ್ಕಶೀರ್ಷಿಕೆ: 4225-02-794-0-01 (059) ರಡಿ ಗ್ರಾಮ/ಹೋಬಳಿ/ತಾಲ್ಲೂಕು/ಜಿಲ್ಲಾ ಮಟ್ಟದ ವಾಲ್ಮೀಕಿ/ಸಮುದಾಯ ಭವನ ನಿರ್ಮಾಣಕ್ಕಾಗಿ ರೂ.50.00 ಕೋಟಿಗಳನ್ನು ನಿಗಧಿಪಡಿಸಲಾಗಿದ್ದು, ಈ ಮೊತ್ತದಲ್ಲಿ ರೂ.50.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರ ಹೆಸರಿನಲ್ಲಿ ಚೆಕ್‌ನ್ನು ಪಡೆದು ವಿತರಿಸಲು ಆದೇಶಿಸಿದೆ.

ಷರತ್ತುಗಳು

1 ಸರ್ಕಾರದ ಆದೇಶ ಸಂಖ್ಯೆ:ಸಕಇ 327 ಪಕವಿ 2015 ದಿನಾಂಕ:16.09.2015.ರ ಮಾರ್ಗಸೂಚಿಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

2 ಸರ್ಕಾರದ ಆದೇಶ ಸಂಖ್ಯೆ:ಸಕಇ 218 ಪವಯೋ 2016 ದಿನಾಂಕ:24.04.2017. ಷರತ್ತುಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

3 ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯ ಅಧಿನಿಯಮ (1999) ಹಾಗೂ ಅದರಡಿ ರೂಪಿಸಿರುವ ನಿಯಮಗಳಲ್ಲಿ ನಿಗಧಿಪಡಿಸಿರುವ ಕಾರ್ಯವಿಧಾನ ಪಾಲಿಸತಕ್ಕದ್ದು.

4 ಸರ್ಕಾರದ ಆದೇಶ ಸಂಖ್ಯೆ:ಸಕಇ 132 ಪವಯೋ 2017 ದಿನಾಂಕ: 13.06.2017 ರ ಷರತ್ತುಗಳನ್ನು ಪಾಲಿಸತಕ್ಕದ್ದು.

5 ಭವನಗಳ ಕಾಮಗಾರಿಗೆ ಸಂಬಂಧಪಟ್ಟಂತೆ ಆದಾಯತೆರಿಗೆ, ಲೇಬರ್‌ಸೆಸ್, ರಾಯಲ್ಟಿ, ಸಿ.ಜಿ.ಎಫ್, ಎಫ್.ಎಸ್.ಡಿ ಮತ್ತು ಕೆ.ಎಸ್.ಟಿ/ವ್ಯಾಟ್ ಶಾಸನಾತ್ಮಕ ಕಟಾವಣೆಗಳನ್ನು ಕಡ್ಡಾಯವಾಗಿ ಕಡಿತಗೊಳಿಸಿ ವರದಿ ನೀಡುವುದು.

6 ಭವನದ ನಿರ್ಮಾಣ ವೆಚ್ಚವು ನಿಗಧಿತ ಅಂದಾಜು ವೆಚ್ಚ ಮೀರಿದಲ್ಲಿ ಅಂತಹ ಮೊತ್ತವನ್ನು ಸ್ಥಳೀಯವಾಗಿ ಸಂಗ್ರಹಿಸಿ ಭರಿಸತಕ್ಕದ್ದು. ಸರ್ಕಾರದಿಂದ ಯಾವುದೇ ಹೆಚ್ಚುವರಿ ಅನುದಾನ ಕೋರಿ ಪ್ರಸ್ತಾವನೆ ಸಲ್ಲಿಸತಕ್ಕದ್ದಲ್ಲ.

7 ಈ ವಾಲ್ಮೀಕಿ ಭವನಕ್ಕೆ ಅನುದಾನ ಬಿಡುಗಡೆಯಾದ 12 ತಿಂಗಳೊಳಗೆ ಭವನ ನಿರ್ಮಾಣ ಕಾರ್ಯ ಪೂರ್ಣಗೊಳಿಸಿ ತ್ರೈಮಾಸಿಕವಾಗಿ ಪ್ರಗತಿ ವರದಿ ಮತ್ತು ಹಣ ಬಳಕೆ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರಿಗೆ ಸಲ್ಲಿಸತಕ್ಕದ್ದು.

8 ಭವನದ ಕಾಮಗಾರಿಯನ್ನು ಪೂರ್ಣಗೊಳಿಸಿ ಇಲಾಖಾ ವಶಕ್ಕೆ ನೀಡಿದ ದಿನಾಂಕದಿಂದ 12 ತಿಂಗಳ ಕಾಲಾವಧಿಯಲ್ಲಿ ಕಾಮಗಾರಿಯಲ್ಲಿ ಯಾವುದೇ ಲೋಪದೋಷಗಳು ಕಂಡು ಬಂದಲ್ಲಿ ಕಾಮಗಾರಿ ಮಾಡಿದ ಏಜೆನ್ಸಿಯು ತಮ್ಮ ಸ್ವಂತ ಖರ್ಚಿನಲ್ಲಿ ದುರಸ್ತಿಗೊಳಿಸತಕ್ಕದ್ದು.

9 ಭವನದ ಕಾಮಗಾರಿ ಪ್ರಾರಂಭಿಸುವ ಮೊದಲು ಮತ್ತು ಪೂರ್ಣಗೊಂಡ ನಂತರ ಕಟ್ಟಡದ ಫೋಟೋ ವನ್ನು ದೃಢೀಕರಿಸಿ ಸಲ್ಲಿಸುವುದು.

10 ಭವನದ ನಿರ್ವಹಣೆಯನ್ನು ಸಂಬಂಧಪಟ್ಟ ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ಇವರು ಉಸ್ತುವಾರಿಯನ್ನು ನಿರ್ವಹಿಸತಕ್ಕದ್ದು.



ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 407
ಸದಸ್ಯರ ಹೆಸರು : ಶ್ರೀ ಸುಬ್ಬಾರೆಡ್ಡಿ ಎಸ್. ಎನ್
ಉತ್ತರಿಸಬೇಕಾದ ದಿನಾಂಕ : 15-12-2021
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
50	ಚಿತ್ರದುರ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಬೆಳಗಟ್ಟ ಚಿತ್ರದುರ್ಗ ತಾ॥	ಗ್ರಾನೈಟ್ ಪ್ಲೋರಿಂಗ್, ಡೋರ್ & ವಿಂಡೋ ರಿಪೇರಿ, ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ, ಶೌಚಾಲಯ ರಿಪೇರಿ, ಸುಣ್ಣ-ಬಣ್ಣ	18.65
51	ಚಿತ್ರದುರ್ಗ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಚಿತ್ರದುರ್ಗ ಟೌನ್	ಕಟ್ಟಡದ ಸಂಪೂರ್ಣ ರಿಪೇರಿ ಮತ್ತು ಪೈಟಿಂಗ್	24.00
52	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕುಕ್ಕವಾಡ, ದಾವಣಗೆರೆ ತಾಲ್ಲೂಕು	ವಿದ್ಯಾರ್ಥಿನಿಲಯದಲ್ಲಿನ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಸ್ನಾನ ಗೃಹ ಹಾಗೂ ಇತರೆ ಕಟ್ಟಡದ ದುರಸ್ಥಿ ಕಾಮಗಾರಿ	19.20
53	ದಾವಣಗೆರೆ	ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಜಿ.ಎಂ.ಐ.ಟಿ ಕಾಲೇಜು ಹತ್ತಿರ, ದಾವಣಗೆರೆ ತಾಲ್ಲೂಕು	ಪೈಂಟಿಂಗ್, ಕಿಟಕಿ- ಬಾಗಿಲು ರಿಪೇರಿ, ಶೌಚಾಲಯ ರಿಪೇರಿ, ಗ್ರಿಲ್ಸ್ ಅಳವಡಿಕೆ, ಗ್ರಾನೈಟ್ ಬೆಂಚುಗಳು & ಮಳೆ ನೀರು ಹಿಂಗು ಗುಂಡಿ, ಇತರೆ ಕಾಮಗಾರಿ	13.65
54	ದಾವಣಗೆರೆ	ಮೆಟ್ರಿಕ್ ನಂತರ ವೃತ್ತಿಪರ ಬಾಲಕರ ವಿದ್ಯಾರ್ಥಿನಿಲಯ, ಶಿವಕುಮರಸ್ವಾಮಿ ಬಡಾವಣೆ, ದಾವಣಗೆರೆ ತಾಲ್ಲೂಕು.	ವಿದ್ಯಾರ್ಥಿನಿಲಯದಲ್ಲಿನ ಮೂಲಭೂತ ಸೌಕರ್ಯಗಳಾದ ಶೌಚಾಲಯ, ಸ್ನಾನ ಗೃಹ ಹಾಗೂ ಇತರೆ ಕಟ್ಟಡದ ದುರಸ್ಥಿ ಕಾಮಗಾ	9.20

55	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಂದವಾಡ ರಸ್ತೆ, ದಾವಣಗೆರೆ ತಾಲ್ಲೂಕು	ಪೈಂಟಿಂಗ್, ಕಿಟಕಿ- ಬಾಗಿಲು ರಿಪೇರಿ, ಶೌಚಾಲಯ ರಿಪೇರಿ, ಗ್ರಿಲ್ಸ್ ಅಳವಡಿಕೆ, ಗ್ರಾನೈಟ್ ಬೆಂಚುಗಳು & ಮಳೆ ನೀರು ಹಿಂಗು ಗುಂಡಿ, ಇತರೆ ಕಾಮಗಾರಿ	5.40
56	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕೆರೆಬಿಳಚಿ, ಚನ್ನಗಿರಿ ತಾಲ್ಲೂಕು	ಫ್ಲೋರಿಂಗ್, ಪ್ಲಾಸ್ಟರಿಂಗ್ ರೂಫ್ ಸ್ಲ್ಯಾಬ್, ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ, ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ, ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ, ಕಾಂಪೌಂಡ್ ನಿರ್ಮಾಣ	30.00
57	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜೋಳದಾಳ್, ಚನ್ನಗಿರಿ ತಾಲ್ಲೂಕು	ಫ್ಲೋರಿಂಗ್, ರೂಫ್ ಸ್ಲ್ಯಾಬ್, ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ, ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ, ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ	40.00
58	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಚನ್ನಗಿರಿ ಟೌನ್	ಫ್ಲೋರಿಂಗ್, ಪ್ಲಾಸ್ಟರಿಂಗ್ ರೂಫ್ ಸ್ಲ್ಯಾಬ್, ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ, ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ, ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ, ಕಾಂಪೌಂಡ್ ನಿರ್ಮಾಣ	40.00

59	ದಾವಣಗೆರೆ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ದೇವರಹಳ್ಳಿ. ಚನ್ನಗಿರಿ ತಾಲ್ಲೂಕು	ಫ್ಲೋರಿಂಗ್. ಪ್ಲಾಸ್ಟರಿಂಗ್ ರೂಫ್ ಸ್ಲ್ಯಾಬ್. ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ. ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ. ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ.	31.70
60	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಸಿಂಗಾಟಾಲೂರು ಗ್ರಾಮ	ಪೈಟಿಂಗ್. ಪ್ಲಂಬಿಂಗ್. ಬಾಗಿಲು ದುರಸ್ತಿ. ಕಿಟಕಿಗಳಿಗೆ ಗ್ಲಾಸ್ ಅಳವಡಿಕೆ	3.40
61	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಕೊರ್ಲಹಳ್ಳಿ ಗ್ರಾಮ	ಪೈಟಿಂಗ್. ಪ್ಲಂಬಿಂಗ್. ಬಾಗಿಲು ದುರಸ್ತಿ. ವಿಟ್ರಿಫೈಡ್ ಟೈಲ್ಸ್ ಅಳವಡಿಕೆ	7.00
62	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಪೇಠಾಲೂರು ಗ್ರಾಮ	ಪೈಟಿಂಗ್. ಪ್ಲಂಬಿಂಗ್. ಬಾಗಿಲು ದುರಸ್ತಿ.	2.10
63	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಡೋಣಿ ಗ್ರಾಮ	ಪೈಟಿಂಗ್ ಕಾಮಗಾರಿ .	2.75
64	ಗದಗ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ. ಹಳ್ಳಿಗುಡಿ ಗ್ರಾಮ	ಪೈಟಿಂಗ್. ಬಾಗಿಲು ದುರಸ್ತಿ. ಕಿವಿಟ್ರಿಫೈಡ್ ಟೈಲ್ಸ್ ಅಳವಡಿಕೆ	7.14
65	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಲಕ್ಕುಂಡಿ. ಗದಗ ತಾಲ್ಲೂಕು.	ಫ್ಲೋರಿಂಗ್. ಪ್ಲಾಸ್ಟರಿಂಗ್ ರೂಫ್ ಸ್ಲ್ಯಾಬ್. ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ. ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ. ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ.	11.15
66	ಗದಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ. ಹರ್ಲಾಪುರ. ಗದಗ ತಾಲ್ಲೂಕು.	ಫ್ಲೋರಿಂಗ್. ಪ್ಲಾಸ್ಟರಿಂಗ್ ರೂಫ್ ಸ್ಲ್ಯಾಬ್. ವಾಟರ್ ಪ್ರೂಫಿಂಗ್ ವಿಂಡೋ ರಿಪೇರಿ. ಎಲೆಕ್ಟ್ರಿಕಲ್ ವರ್ಕ್ ನೀರು ನೈರ್ಮಲ್ಯ. ಕಿಟಕಿ ಬಾಗಿಲು ದುರಸ್ತಿ ಸುಣ್ಣ-ಬಣ್ಣ.	10.64

67	ಹಾಸನ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಹಾಸನ ಟೌನ್	ಕಟ್ಟಡದ ಸಂಪೂರ್ಣದುರಸ್ತಿ	20.00
68	ಹಾಸನ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹಾಸನ ಟೌನ್	ಕಾಂಪೌಂಡ್ ಗೋಡೆ & ಇತರ ದುರಸ್ತಿ	28.00
69	ಹಾಸನ	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಹಾಸನ ಟೌನ್	ಕಟ್ಟಡದ ಸಂಪೂರ್ಣ ದುರಸ್ತಿ & ಹೆಚ್ಚುವರಿ ಕಾಮಗಾರಿ	29.00
70	ಕೋಲಾರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹೋಳೂರು, ಕೋಲಾರ ತಾಲ್ಲೂಕು	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳ ನೀರು ಕೊಯ್ಲು, ಸಪ್ಟಿಕ್ ಟ್ಯಾಂಕ್ ನಿರ್ಮಾಣ ಇನ್ನಿತರ ಕಾಮಗಾರಿ	60.00
71	ಕೋಲಾರ	ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಮುಸ್ತಾಫಖಾನ್, ಕೋಲಾರ ಟೌನ್	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳ ನೀರು ಕೊಯ್ಲು, ಸಪ್ಟಿಕ್ ಟ್ಯಾಂಕ್ ನಿರ್ಮಾಣ ಇನ್ನಿತರ ಕಾಮಗಾರಿ	41.00
72	ಕೋಲಾರ	ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ, ಗೌರಿಪೇಟೆ, ಕೋಲಾರ ಟೌನ್	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳ ನೀರು ಕೊಯ್ಲು, ಸಪ್ಟಿಕ್ ಟ್ಯಾಂಕ್ ನಿರ್ಮಾಣ ಇನ್ನಿತರ ಕಾಮಗಾರಿ	40.00
73	ಕೋಲಾರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಲ್ಲನಾಯಕನಹಳ್ಳಿ, ಮುಳಬಾಗಿಲು ತಾ॥	ಟೈಲ್ಸ್ ಅಳವಡಿಕೆ ಮತ್ತು ಸುಣ್ಣಬಣ್ಣ	5.00
74	ಕೋಲಾರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರಾಯಲ್ಪಾಡು, ಶ್ರೀನಿವಾಸಪುರ ತಾಲ್ಲೂಕು	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳ ನೀರು ಕೊಯ್ಲು, ಇನ್ನಿತರ ಕಾಮಗಾರಿ	43.70
75	ಕೋಲಾರ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಲಕ್ಷ್ಮೀಪುರ, ಶ್ರೀನಿವಾಸಪುರ ತಾಲ್ಲೂಕು	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳ ನೀರು ಕೊಯ್ಲು, ಇನ್ನಿತರ ಕಾಮಗಾರಿ	47.50

76	ಕೋಲಾರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ರೋಣೂರು, ಶ್ರೀನಿವಾಸಪುರ ತಾಲ್ಲೂಕು	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳೆ ನೀರು ಕೊಯ್ಲು, ಇನ್ನಿತರೆ ಕಾಮಗಾರಿ	25.40
77	ಕೋಲಾರ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಸುಗಟೂರು, ಕೋಲಾರ ತಾಲ್ಲೂಕು	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳೆ ನೀರು ಕೊಯ್ಲು ಇನ್ನಿತರೆ ಕಾಮಗಾರಿ	36.60
78	ಕೋಲಾರ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕೋಲಾರ ಟೌನ್	ಸಿವಿಲ್ ಕೆಲಸ, ಪೈಟಿಂಗ್, ಸಂಪ್ ನಿರ್ಮಾಣ, ಮಳೆ ನೀರು ಕೊಯ್ಲು ಇನ್ನಿತರೆ ಕಾಮಗಾರಿ	33.00
79	ಕೋಲಾರ	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಇ.ಟಿ.ಸಿ.ಎಂ ಆಸ್ಪತ್ರೆ ಮುಂಭಾಗ, ಕೋಲಾರ ಟೌನ್	ಸಿವಿಲ್ ಕೆಲಸ, ದುರಸ್ತಿ &ನವೀಕರಣ ಕಾಮಗಾರಿ	20.00
80	ಕೊಪ್ಪಳ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನವಲಹಳ್ಳಿ ಗ್ರಾಮ, ಕುಷ್ಟಗಿ ತಾಲ್ಲೂಕು.	ದುರಸ್ತಿ ಮತ್ತು ಕಾಂಪೌಂಡ್ ಗೋಡೆ ನಿರ್ಮಾಣ	16.4
81	ಕೊಪ್ಪಳ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಕುಷ್ಟಗಿ ತಾಲ್ಲೂಕು.	ಕಾಂಪೌಂಡ್ ಗೋಡೆ ನಿರ್ಮಾಣ	22.3
82	ಮಂಡ್ಯ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಜಿ.ಮಲ್ಲಿಗೆರೆ , ಮಂಡ್ಯ ತಾಲ್ಲೂಕು	ಕಟ್ಟಡದ ಸಂಪೂರ್ಣ ದುರಸ್ತಿ, ಮತ್ತು ಪೈಟಿಂಗ್	21.30
83	ಮಂಡ್ಯ	ಮೆಟ್ರಿಕ್ ನಂತರ ಬಾಲಕರ ವಿದ್ಯಾರ್ಥಿನಿಲಯ(ಘಟಕ-1), ಮಂಡ್ಯ ಟೌನ್	ಶೌಚಾಲಯ ನಿರ್ಮಾಣ, ಕಾರಿಡಾರ್ ಪ್ಲೋರಿಂಗ್ ಬದಲಾವಣೆ, ಕಪಾಟಿಗೆ ಕಬ್ಬಿಣ ಬಾಗಿಲು ಅಳವಡಿಕೆ, ಕಿಟಕಿ-ಬಾಗಿಲು ದುರಸ್ಥಿ, 4 ಹೆಚ್ಚುವರಿ ಕೊಠಡಿ ನಿರ್ಮಾಣ, ಸಭಾಂಗಣ, ಕಂಪ್ಯೂಟರ್ ಲ್ಯಾಬ್ ಗ್ರಂಥಾಲಯ ನಿರ್ಮಾಣ	99.50

92	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹುಣಸೇಕಟ್ಟೆ	ಕಿಟಕಿಗಳಿಗೆ ಗ್ಲಾಸ್ ಅಳವಡಿಸುವುದು. ಕೊಠಡಿ ಹಾಗೂ ಶೌಚಾಲಯಗಳಿಗೆ ಹೊಸದಾಗಿ ಬಾಗಿಲು ಅಳವಡಿಸುವುದು. ಹಾಗೂ ಕಟ್ಟಡಕ್ಕೆ ಸುಣ್ಣ ಬಣ್ಣ	5.00
93	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಭದ್ರಾವತಿ ಟೌನ್	ಮೇಲ್ಛಾವಣಿ ಶೀಟ್ ಅಳವಡಿಕೆ	8.00
94	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ನಿಸರಾಣಿ, ಸೊರಬ ತಾಲ್ಲೂಕು	ಕಟ್ಟಡದ ಸ್ಲ್ಯಾಬ್, ಟೈಲ್ಸ್, ಶೀಟ್ ಅಳವಡಿಕೆ, ಸುಣ್ಣ-ಬಣ್ಣ, ಇತರೆ ದುರಸ್ತಿ ಕಾಮಗಾರಿ	17.00
95	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಆನವಟ್ಟಿ ,ಸೊರಬ ತಾಲ್ಲೂಕು	ರೀಪು, ಪಕಾಸಿ, ಹೆಂಚುಗಳು ಟೈಲ್ಸ್‌ಗಳ ದುರಸ್ತಿ, ಸುಣ್ಣ-ಬಣ್ಣ ಇತರೆ ದುರಸ್ತಿ ಕಾಮಗಾರಿ	17.00
96	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಹೊಳಬಾಳೆ , ಸೊರಬ ತಾಲ್ಲೂಕು	ಕಟ್ಟಡಕ್ಕೆ ಸ್ಲ್ಯಾಬ್, ಟೈಲ್ಸ್, ಮೇಲ್ಛಾವಣಿ ಶೀಟ್ ಅಳವಡಿಕೆ, ಸುಣ್ಣ ಬಣ್ಣ ಇತರೆ ದುರಸ್ತಿ ಕಾಮಗಾರಿ	13.50
97	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಚಂದ್ರಗುತ್ತಿ , ಸೊರಬ ತಾಲ್ಲೂಕು	ರೀಪು, ಪಕಾಸಿ, ಹೆಂಚುಗಳು, ಟೈಲ್ಸ್‌ಗಳ ದುರಸ್ತಿ, ಸುಣ್ಣ ಬಣ್ಣ ಇತರೆ ದುರಸ್ತಿ ಕಾಮಗಾರಿ	8.00
98	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಮಾವಲಿ, ಸೊರಬ ತಾಲ್ಲೂಕು	ಕಟ್ಟಡಕ್ಕೆ ಸ್ಲ್ಯಾಬ್, ಟೈಲ್ಸ್, ಮೇಲ್ಛಾವಣಿ ಶೀಟ್ ಅಳವಡಿಕೆ, ಸುಣ್ಣ ಬಣ್ಣ ಇತರೆ ದುರಸ್ತಿ ಕಾಮಗಾರಿ	17.00
99	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ತವನಂದಿ , ಸೊರಬ ತಾಲ್ಲೂಕು	ರೀಪು, ಪಕಾಸಿ, ಹೆಂಚುಗಳು, ಟೈಲ್ಸ್‌ಗಳ ದುರಸ್ತಿ, ಸುಣ್ಣ ಬಣ್ಣ ಇತರೆ ದುರಸ್ತಿ ಕಾಮಗಾರಿ	7.00

107	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿನಿಲಯ, ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು	ಶೌಚಾಲಯ, ಸ್ನಾನಗೃಹದ ಬಾಗಿಲುಗಳ ರಿಪೇರಿ, ಕಟ್ಟಡಕ್ಕೆ ಬಣ್ಣ, 25000 ಲೀ. ಸಾಮರ್ಥ್ಯದ ಸಂಪ್ ನಿರ್ಮಾಣ, ಬಟ್ಟೆ ತೊಳೆಯುವ ಜಾಗದಲ್ಲಿ ಶೀಟ್ ಅಳವಡಿಕೆ, ಟೈಲ್ಸ್ ಅಳವಡಿಸುವುದು.	20.00
108	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ಮೇಗರವಳ್ಳಿ, ತೀರ್ಥಹಳ್ಳಿ ತಾಲ್ಲೂಕು	ಕಟ್ಟಡಕ್ಕೆ ಬಣ್ಣ, 25000 ಲೀ. ಸಾಮರ್ಥ್ಯದ ಸಂಪ್ ನಿರ್ಮಾಣ, ಕಿಟಕಿ ಬಾಗಿಲು ರಿಪೇರಿ, ನಲ್ಲಿಗಳ ರಿಪೇರಿ, ಶೌಚಾಲಯ, ಸ್ನಾನಗೃಹ ಹಾಗೂ ಕಟ್ಟಡಕ್ಕೆ ಟೈಲ್ಸ್ ಅಳವಡಿಕೆ, ಹೊಸ ಗೇಟ್ ನಿರ್ಮಾಣ.	20.00
109	ಶಿವಮೊಗ್ಗ	ಮೆಟ್ರಿಕ್ ಪೂರ್ವ ಬಾಲಕಿಯರ ವಿದ್ಯಾರ್ಥಿನಿಲಯ, ತೀರ್ಥಹಳ್ಳಿ, ತೀರ್ಥಹಳ್ಳಿ ತಾಲ್ಲೂಕು	ಕಟ್ಟಡಕ್ಕೆ ಬಣ್ಣ, ಹೊಸಗೇಟ್, ಕಾಂಪೌಂಡ್ ನಿರ್ಮಾಣ, ವಾಷ್ ಬೇಸನ್ ರಿಪೇರಿ, ಕಟ್ಟಡಕ್ಕೆ ಸೋರಿಕೆ ರಿಪೇರಿ, ವಿದ್ಯುತ್ ಗ್ರೌಂಡಿಂಗ್ ರಿಪೇರಿ, ಕಿಟಕಿ, ಬಾಗಿಲು ರಿಪೇರಿ, ಕಟ್ಟಡಕ್ಕೆ ಟೈಲ್ಸ್ ಅಳವಡಿಕೆ	18.00

110	ಶಿವಮೊಗ್ಗ	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಕೋಣಂದೂರು, ತೀರ್ಥಹಳ್ಳಿ ತಾಲ್ಲೂಕು	ಶೌಚಾಲಯ, ಸ್ನಾನಗೃಹಗಳ ಬಾಗಿಲು ರಿಪೇರಿ, ವಿದ್ಯಾರ್ಥಿಗಳ ಕೊಠಡಿ ಮತ್ತು ಡೈನಿಂಗ್ ಹಾಲ್‌ಗೆ ಟೈಲ್ಸ್ ಅಳವಡಿಕೆ25000 ಲೀ. ಸಾಮರ್ಥ್ಯದ ಸಂಪ್ ನಿರ್ಮಾಣ, ಕೈತೊಳೆಯುವ ಜಾಗದಲ್ಲಿ ನಲ್ಲಿಗಳ ರಿಪೇರಿ, ನೀರಿನ ಪೈಪ್‌ಲೈನ್ ರಿಪೇರಿ, ಕಟ್ಟಡಕ್ಕೆ ಬಣ್ಣ	30.00
111	ಶಿವಮೊಗ್ಗ	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ(ಮೂಲ), ಸೊಪ್ಪುಗುಡ್ಡೆ, ತೀರ್ಥಹಳ್ಳಿ ತಾಲ್ಲೂಕು	ಚರಂಡಿ ಪೈಪ್‌ಲೈನ್ ರಿಪೇರಿ, ಸ್ನಾನಗೃಹಗಳ ಶೌಚಾಲಯಗಳ ಬಾಗಿಲು ರಿಪೇರಿ, ಬೇಷನ್, ಟೈಲ್ಸ್ ಅಳವಡಿಕೆ, ಕೈ ತೊಳೆಯುವ ಸಿಂಕ್ ರಿಪೇರಿ, ವಿದ್ಯಾರ್ಥಿಗಳ 3 ಕೊಠಡಿಗಳ ಸೋರಿಕೆ ಸರಿಪಡಿಸುವುದು, ಕೊಳವೆ ಬಾವಿ ರಿಪೇರಿ, ಟೈಲ್ಸ್ ಅಳವಡಿಕೆ, ಕಟ್ಟಡಕ್ಕೆ ಬಣ್ಣ	30.00
112	ಶಿವಮೊಗ್ಗ	ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿನಿಲಯ, ಬೆಟ್ಟಮಕ್ಕಿ, ತೀರ್ಥಹಳ್ಳಿ ತಾಲ್ಲೂಕು	ಹೊಸ ಗೇಟ್, ಕೈತೊಳೆಯುವ ಸಿಂಕ್ ಮತ್ತು ಪೈಪ್ ಲೈನ್ ರಿಪೇರಿ, ನಲ್ಲಿಗಳ ರಿಪೇರಿ, ಶೌಚಾಲಯಕ್ಕೆ ಬೇಸನ್ ಮತ್ತು ಟೈಲ್ಸ್ ಅಳವಡಿಕೆ, ಸ್ನಾನಗೃಹಗಳು ಮತ್ತು ಪೂರ್ತಿ ವಿದ್ಯಾರ್ಥಿನಿಲಯಕ್ಕೆ ಟೈಲ್ಸ್ ಅಳವಡಿಸುವುದು, ಕಟ್ಟಡಕ್ಕೆ ಬಣ್ಣ	20.00

2020-21 ನೇ ಸಾಲಿನಲ್ಲಿ ಯಾವುದೇ ದುರಸ್ತಿ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಮಾಡಿರುವುದಿಲ್ಲ.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**447**
ಮಾನ್ಯ ಸದಸ್ಯರ ಹೆಸರು	ಶ್ರೀ ಹಾಲಪ್ಪ ಹರತಾಳ್ ಹೆಚ್. (ಸಾಗರ)
ಉತ್ತರಿಸಬೇಕಾದ ದಿನಾಂಕ	15.12.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕ್ರ. ಸಂ	ಪ್ರಶ್ನೆ	ಉತ್ತರ
ಅ)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಡಿಯಲ್ಲಿ ಬರುವ ಯೋಜನೆಗಳು ಯಾವುವು; ಸದರಿ ಯೋಜನೆಗಳ ಅನುಷ್ಠಾನಕ್ಕೆ ಇರುವ ಮಾನದಂಡಗಳೇನು;	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಡಿ ಬರುವ ಆಯುಕ್ತಾಲಯ ಹಾಗೂ ನಿಗಮಗಳಲ್ಲಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ಮಾಹಿತಿ ಹಾಗೂ ಸದರಿ ಯೋಜನೆಗಳ ಅನುಷ್ಠಾನಕ್ಕೆ ಇರುವ ಮಾನದಂಡಗಳ ಮಾಹಿತಿಯನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಆ)	ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು;(ಅನುದಾನ ವಾರು, ಯೋಜನೆವಾರು, ಪೂರ್ಣ ವಿವರ ನೀಡುವುದು)	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಕಳೆದ ಮೂರು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನ ವಿವರ

ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

(ರೂ. ಲಕ್ಷಗಳಲ್ಲಿ)

ಕ್ರ ಸಂ	ಆರ್ಥಿಕ ವರ್ಷ	ಬಿಡುಗಡೆಯಾದ ಅನುದಾನ
1	2018-19	271092.04
2	2019-20	271353.94
3	2020-21	200332.78

ಅನುದಾನವಾರು ಯೋಜನಾವಾರು ಮಾಹಿತಿಯನ್ನು **ಅನುಬಂಧ-2** ರಲ್ಲಿ ನೀಡಲಾಗಿದೆ.

ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	6080.50	4500.00	-
2	ಗಂಗಾ ಕಲ್ಯಾಣ	10844.00	3500.00	6000.00
3	ಅರಿವು ಸಾಲ	1040.00	2500.00	1750.00
4	ಸಾಂಪ್ರದಾಯಿಕ ವೃತ್ತಿದಾರರ ಸಾಲ	7137.50	2000.00	-

5	ಉದ್ಯಮಶೀಲತಾ ತರಬೇತಿ/ವೃತ್ತಿ ತರಬೇತಿ	200.00	-	-
6	ಬೈಕ್ ಖರೀದಿ ಸಾಲ	-	-	250.00

ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	-	-	1100.00
2	ಗಂಗಾ ಕಲ್ಯಾಣ	-	-	500.00
3	ಅರಿವು ಸಾಲ	-	-	29.00
4	ಬ್ಯಾಂಕ್ ಸಹಯೋಗ ದೊಂದಿಗೆ ಸ್ವಯಂ ಉದ್ಯೋಗ ಸಾಲ	-	-	100.00
5	ಭೂ ಖರೀದಿ	-	-	500.00
6	ಸ್ವ ಸಹಾಯ ಗುಂಪುಗಳ ಸಾಲ & ಸಹಾಯ ಧನ	-	-	200.00

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	-	-	750.00
2	ಗಂಗಾ ಕಲ್ಯಾಣ	-	-	200.00
3	ಅರಿವು ಸಾಲ	-	-	100.00
4	ಸಾಂಪ್ರದಾಯಿಕ ವೃತ್ತಿದಾರರ ಸಾಲ ಸಾಲ	-	-	1300.00
5	ಸ್ವ ಸಹಾಯ ಗುಂಪುಗಳ ಸಾಲ & ಸಹಾಯ ಧನ	-	-	100.00

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	-	-	75.00
2	ಸಾಂಪ್ರದಾಯಿಕ ವೃತ್ತಿದಾರರ ಸಾಲ ಸಾಲ	-	-	100.00

ಕರ್ನಾಟಕ ಉಪ್ಪಾರ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2017-18 & 2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	250.00	500.00	200.00
2	ಗಂಗಾ ಕಲ್ಯಾಣ ನೀರಾವತಿ ಯೋಜನೆ	125.00	250.00	250.00
3	ಅರಿವು ಶೈಕ್ಷಣಿಕ ಸಾಲ ಯೋಜನೆ	278.00	50.00	29.00

ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮ:
(ಹಿಂದುಳಿದ ವರ್ಗಕ್ಕೆ ಸೇರಿರುವುದಿಲ್ಲ)

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	881.63		418.50
2	ಅರಿವು ಶೈಕ್ಷಣಿಕ ಸಾಲ	23.11		19.56

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	250.00	500.00	1171.90
2	ಗಂಗಾ ಕಲ್ಯಾಣ	125.00	250.00	750.00
3	ಅರಿವು ಶೈಕ್ಷಣಿಕ ಸಾಲ	278.00	50.00	62.50
4	ಬ್ಯಾಂಕ್‌ಗಳ ಸಹಯೋಗ ದೊಂದಿಗೆ ಸ್ವಯಂ ಉದ್ಯೋಗ ಸಾಲ	2020-21 ನೇ ಸಾಲಿನಿಂದ ಈ ಯೋಜನೆಗಳನ್ನು ಪ್ರಾರಂಭಿಸಲಾಗಿದೆ.		125.00
5	ಕಿರುಸಾಲ/ಸ್ವಸಹಾಯ ಗುಂಪುಗಳಿಗೆ ಸಾಲ & ಸಹಾಯಧನ			250.00

ಇ) ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಯಾವ ಯಾವ ಯೋಜನೆಯಡಿಯಲ್ಲಿ ಅನುದಾನ ಒದಗಿಸಲಾಗಿದೆ(ಯೋಜನೆವಾರು ಪೂರ್ಣ ವಿವರ ನೀಡುವುದುದು.

ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ:

ಶಿವಮೊಗ್ಗ ಜಿಲ್ಲೆಗೆ ಕಳೆದ ಮೂರು ವರ್ಷಗಳಲ್ಲಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಿಗೆ ಒದಗಿಸಲಾದ ಅನುದಾನ ಮಾಹಿತಿಯನ್ನು **ಅನುಬಂಧ-3** ರಲ್ಲಿ ನೀಡಲಾಗಿದೆ.

ಡಿ. ದೇವರಾಜು ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1.	ಚೈತನ್ಯ ಸಬ್ಸಿಡಿ ಕಂ-ಸಾಫ್ಟ ಲೋನ್ ಯೋಜನೆ	16.80	15.40	-
2.	ಅರಿವು ಶೈಕ್ಷಣಿಕ ಸಾಲ	66.20	165.90	137.61
3.	ಅಲೆಮಾರಿ ಅರಿವು ಶೈಕ್ಷಣಿಕ ಸಾಲ ಯೋಜನೆ	6.52	2.90	-

4.	ಡಿ.ದೇವರಾಜ ಅರಸು ವೈಯಕ್ತಿಕ ಸ್ವಯಂ ಉದ್ಯೋಗ ನೇರಸಾಲ ಯೋಜನೆ	245.54	144.50	-
5	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	228.90	91.20	-
6	ಕಿರುಸಾಲ ಯೋಜನೆ	7.70	13.65	-
7	ನಿರುದ್ಯೋಗಿ ಪದವೀಧರರಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ	-	70.00	-
8	ಶಿಕಾರಿಪುರ ವಿಧಾನ ಸಭಾ ಕ್ಷೇತ್ರಕ್ಕೆ ವಿಶೇಷ ಪ್ಯಾಕೇಜ್‌ಯಡಿ ಕಿರುಸಾಲ ಯೋಜನೆ	-	15.00	
9	ಬೈಕ್ ಕೊಂಡುಕೊಳ್ಳಲು ಸಹಾಯಧನ ಯೋಜನೆ	-	12.00	-
10	ಗಂಗಾ ಕಲ್ಯಾಣ ಯೋಜನೆ	308.00	404.00	-

ಕರ್ನಾಟಕ ಅಲೆಮಾರಿ/ಅರೆಅಲೆಮಾರಿ ಅಭಿವೃದ್ಧಿ ನಿಗಮ.

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಒದಗಿಸಿರುವ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	-	-	21.50
2	ಸ್ವ ಸಹಾಯ ಗುಂಪುಗಳ ಸಾಲ & ಸಹಾಯ ಧನ ಯೋಜನೆ	-	-	6.00
3	ಅರಿವು ಶೈಕ್ಷಣಿಕ ಸಾಲ ಯೋಜನೆ	-	-	0.65

4	ಬ್ಯಾಂಕ್ ಸಹಯೋಗ ದೊಂದಿಗೆ ಸ್ವಯಂ ಉದ್ಯೋಗ ಸಾಲ	-	-	3.20
5	ಗಂಗಾ ಕಲ್ಯಾಣ ಯೋಜನೆ	-	-	8.00

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಒದಗಿಸಿರುವ ಅನುದಾನ		
		2018-19	**2019-20**	**2020-21**
1	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	-	-	40.50
2	ಸ್ವಯಂ ಉದ್ಯೋಗ ಸಾಲ ಯೋಜನೆ	-	-	25.00
3	ಸ್ವ ಸಹಾಯ ಗುಂಪುಗಳ ಸಾಲ & ಸಹಾಯ ಧನ	-	-	3.00
4	ಅರಿವು ಶೈಕ್ಷಣಿಕ ಸಾಲ ಯೋಜನೆ	-	-	3.00
5	ಗಂಗಾ ಕಲ್ಯಾಣ	-	-	6.00

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ	-	-	3.00
2	ಸ್ವಯಂ ಉದ್ಯೋಗ ಯೋಜನೆ	-	-	2.50

ಕರ್ನಾಟಕ ಆರ್ಯವೈಶ್ಯ ಅಭಿವೃದ್ಧಿ ನಿಗಮ:

(ಹಿಂದುಳಿದ ವರ್ಗಕ್ಕೆ ಸೇರಿರುವುದಿಲ್ಲ)

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆ ಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	4.00		24.00

2	ಅರಿವು ಶೈಕ್ಷಣಿಕ ನೇರ ಸಾಲ	0.99	0.99

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮ:

(ರೂ.ಲಕ್ಷಗಳಲ್ಲಿ)

ಕ್ರ ಸಂ	ಯೋಜನೆಗಳು	ಬಿಡುಗಡೆಯಾದ ಅನುದಾನ		
		2018-19	**2019-20**	**2020-21**
1	ಸ್ವಯಂ ಉದ್ಯೋಗ ಸಾಲ	6.50	12.00	14.00
2	ಗಂಗಾ ಕಲ್ಯಾಣ	2.00	12.00	12.00
3	ಅರಿವು ಶೈಕ್ಷಣಿಕ ಸಾಲ	1.52	3.80	0.30
	ಅರಿವು ಶೈಕ್ಷಣಿಕ ಸಾಲ(ನವೀಕರಣ)	-	1.75	4.72
4.	ಬ್ಯಾಂಕ್‌ಗಳ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ	-	-	0.60
5.	ಕಿರುಸಾಲ/ಸ್ವಸಹಾಯ ಗುಂಪುಗಳಿಗೆ ಸಾಲ & ಸಹಾಯಧನ	-	-	6.20

ಸಂಖ್ಯೆ: ಹಿಂವಕ 727 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಹಾಲಪ್ಪ ಹರತಾಳ್ ಹೆಚ್ (ಸಾಗರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 447 ಕ್ಕೆ ಅನುಬಂಧ-1

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಸುತ್ತಿರುವ ಯೋಜನೆ/ಕಾರ್ಯಕ್ರಮಗಳು ಹಾಗೂ ಸದರಿ ಯೋಜನೆಗಳ ಅನುಷ್ಠಾನಕ್ಕೆ ಇರುವ ಮಾನದಂಡಗಳ ವಿವರ

	ಶೈಕ್ಷಣಿಕ ಕಾರ್ಯಕ್ರಮಗಳು
I	**ವಿದ್ಯಾರ್ಥಿನಿಲಯಗಳ ನಿರ್ವಹಣೆ**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು
2	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
3	ಸರ್ಕಾರಿ ಆಶ್ರಮಶಾಲೆಗಳು
4	ಖಾಸಗಿ ಅನುದಾನಿತ ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳು
5	ಖಾಸಗಿ ಅನುದಾನಿತ ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು
6	ಖಾಸಗಿ ಅನುದಾನಿತ ಅನಾಥಾಲಯಗಳು
7	ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ
II	**ವಿದ್ಯಾರ್ಥಿವೇತನ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ
2	ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ
3	ವಿದ್ಯಾಸಿರಿ-ಊಟ ಮತ್ತು ವಸತಿ ಸಹಾಯ ಯೋಜನೆ
4	ಶುಲ್ಕ ಮರು ಪಾವತಿ
5	ಪೂರ್ಣಾವಧಿ ಪಿ.ಎಚ್.ಡಿ ಮಾಡುವ ವಿದ್ಯಾರ್ಥಿಗಳಿಗೆ ಫೆಲೋಷಿಪ್
6	ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ
7	ದೇವರಾಜ ಅರಸು ಪ್ರತಿಭಾ ಪುರಸ್ಕಾರ
8	ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ
9	ಐ.ಐ.ಟಿ, ಐ.ಐ.ಎಂ, ಐ.ಐ.ಎಸ್ಸಿ ಇತ್ಯಾದಿಗಳಲ್ಲಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಒಂದು ಬಾರಿ ರೂ.2.00 ಲಕ್ಷ ಪ್ರೋತ್ಸಾಹಧನ
III	**ತರಬೇತಿ ಕಾರ್ಯಕ್ರಮಗಳು**
1	ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಪರೀಕ್ಷಾ ಪೂರ್ವ ತರಬೇತಿ
2	ನರ್ಸಿಂಗ್ ತರಬೇತಿ
3	ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ
4	ಕಾನೂನು ಪದವೀಧರರಿಗೆ ಶಿಷ್ಯವೇತನ
5	ಹೊಲಿಗೆ ತರಬೇತಿ ಕೇಂದ್ರಗಳ ನಿರ್ವಹಣೆ

6	ಸೇನೆಗಳಿಗೆ ಆಯ್ಕೆಯಾಗುವ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ತರಬೇತಿ
7	ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಹಾಗೂ ಸ್ಪರ್ಧಾತ್ಮಕ ಪರೀಕ್ಷಾ ಪೂರ್ವ ತರಬೇತಿ
IV	**ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು**
1	ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ
2	ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ
3	ಆಶ್ರಮ ಶಾಲೆಗಳ ನಿರ್ವಹಣೆ
4	ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ
5	ಅರಿವು ಮೂಡಿಸುವ ಕಾರ್ಯಕ್ರಮ
6	ಮೂಲಭೂತ ಸೌಕರ್ಯಗಳು
7	ವಸತಿ ಸೌಲಭ್ಯ
8	ನಿವೇಶನ ಹಂಚಿಕೆಗಾಗಿ ಜಮೀನು ಖರೀದಿ
9	ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನ ಮಾಡಲಾಗುತ್ತಿರುವ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು
V	**ವಿವಿಧ ಸಮುದಾಯಗಳ ಅಭಿವೃದ್ಧಿ**
1	ಹಿಂದುಳಿದ ವರ್ಗಗಳ ಸಮುದಾಯಗಳು ನಿರ್ಮಿಸುವ ಸಮುದಾಯ ಭವನಗಳಿಗೆ ಸಹಾಯಾನುಧಾನ
2	ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ನಡೆಸುವ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಒಂದು ಬಾರಿಯ ಅನುದಾನ
3	ದೇವರಾಜ ಅರಸು ಭವನ ನಿರ್ಮಾಣ

I. ವಿದ್ಯಾರ್ಥಿನಿಲಯಗಳ ನಿರ್ವಹಣೆ

1) ಮೆಟ್ರಿಕ್-ಪೂರ್ವ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು

1. ವಿದ್ಯಾರ್ಥಿಗಳು ಅಂಗೀಕೃತ ಶಿಕ್ಷಣ ಸಂಸ್ಥೆಗಳಲ್ಲಿ 5ರಿಂದ 10ನೇ ತರಗತಿಗಳಲ್ಲಿ ವ್ಯಾಸಂಗ ಮಾಡುತ್ತಿರಬೇಕು.
2. ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿಯ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ.44,500/-ಕ್ಕೆ ನಿಗದಿಪಡಿಸಿದೆ.
3. ಶೈಕ್ಷಣಿಕ ಸಂಸ್ಥೆಯಿಂದ 5 ಕಿ.ಮೀ ದೂರದಲ್ಲಿ ವಾಸಿಸುವ ವಿದ್ಯಾರ್ಥಿಗಳಿಗೆ ಶೇಕಡಾ 90ರಷ್ಟು ಸ್ಥಾನಗಳನ್ನು ಹಾಗೂ ಉಳಿದ 10ರಷ್ಟು ಸ್ಥಾನಗಳನ್ನು 5 ಕಿ.ಮೀ.ಗಳಿಗಿಂತ ಕಡಿಮೆ ದೂರದ ಸ್ಥಳಗಳ ವಿದ್ಯಾರ್ಥಿಗಳಿಗೆ ನೀಡಲಾಗುವುದು.
4. ಪ್ರತಿ ವರ್ಷ ಜೂನ್ 1ರಂದು ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿ, ಹಿಂದಿನ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳನ್ನು ಮಾತ್ರ ನವೀಕರಣ ವಿದ್ಯಾರ್ಥಿಗಳೆಂದು ಪರಿಗಣಿಸಿ ಆಯ್ಕೆ ಸಮಿತಿಯ ಅನುಮೋದನೆಗೆ ಒಳಪಟ್ಟು ನವೀಕರಣ ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗುವುದು.
5. ನವೀಕರಣ ವಿದ್ಯಾರ್ಥಿಗಳ ಪ್ರವೇಶಾತಿಯ ಬಳಿಕ ಉಳಿದ ಸ್ಥಾನಗಳಿಗೆ ಆಯ್ಕೆ ಸಮಿತಿಯು ಆಯ್ಕೆ ಮಾಡಿದ ಹೊಸ ವಿದ್ಯಾರ್ಥಿಗಳಿಗೆ ಪ್ರವೇಶ ಕಲ್ಪಿಸುವುದು.

ವಿದ್ಯಾರ್ಥಿನಿಲಯಗಳ ಪ್ರವೇಶಾತಿಗೆ ನಿಗದಿಪಡಿಸಿದ ಪ್ರವರ್ಗವಾರು ಮೀಸಲಾತಿ

1	ಪ್ರವರ್ಗ – 1	ಶೇಕಡ 10
2	ಪ್ರವರ್ಗ – 2ಎ	ಶೇಕಡ 35
3	ಪ್ರವರ್ಗ – 2ಬಿ	ಶೇಕಡ 09
4	ಪ್ರವರ್ಗ – 3ಎ	ಶೇಕಡ 09
5	ಪ್ರವರ್ಗ – 3ಬಿ	ಶೇಕಡ 12
6	ಪರಿಶಿಷ್ಟ ಜಾತಿ	ಶೇಕಡ 21
7	ಪರಿಶಿಷ್ಟ ಪಂಗಡ	ಶೇಕಡ 04
	ಒಟ್ಟು	**ಶೇಕಡ 100**

ಆಯ್ಕೆ ಸಮಿತಿಯ ವಿವರ

1.	ತಾಲ್ಲೂಕಿನ ಹೆಚ್ಚಿನ ಭಾಗ ಪ್ರತಿನಿಧಿಸುವ ವಿಧಾನಸಭಾ ಸದಸ್ಯರು	ಅಧ್ಯಕ್ಷರು
2.	ತಾಲ್ಲೂಕಿನ ಉಳಿದ ಭಾಗ ಪ್ರತಿನಿಧಿಸುವ ವಿಧಾನಸಭಾ ಸದಸ್ಯರು	ಸದಸ್ಯರು
3.	ಆಯಾ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರು	ಸದಸ್ಯರು
4.	ಸಂಬಂಧಪಟ್ಟ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು	ಸದಸ್ಯರು
5.	ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿ.ಇ.ಓ)	ಸದಸ್ಯರು
6.	ಆಯಾ ತಾಲ್ಲೂಕಿನ ತಹಶೀಲ್ದಾರರು	ಸದಸ್ಯರು
7.	ಆಯಾ ತಾಲ್ಲೂಕಿನ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು	ಸದಸ್ಯರು
8.	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯಾ ತಾಲ್ಲೂಕಿನ ವಿಸ್ತರಣಾಧಿಕಾರಿಗಳು	ಸದಸ್ಯ ಕಾರ್ಯದರ್ಶಿ

2) ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳು

1. ವಿದ್ಯಾರ್ಥಿನಿಲಯಗಳು ಇರುವ ಸ್ಥಳಗಳ ಕಾಲೇಜುಗಳಿಂದ 5 ಕಿ.ಮೀ.ಗಿಂತ ದೂರದ ಸ್ಥಳಗಳಿಂದ ಬರುವ ವಿದ್ಯಾರ್ಥಿಗಳಿಗೆ ಮಾತ್ರ ಪ್ರವೇಶಾವಕಾಶ ಕಲ್ಪಿಸಲಾಗುವುದು. ಸ್ಥಳೀಯ ವಿದ್ಯಾರ್ಥಿಗಳು ಪ್ರವೇಶಕ್ಕೆ ಅನರ್ಹರು.
2. ಈ ವಸತಿನಿಲಯಗಳಿಗೆ ಪ್ರವೇಶ ಪಡೆಯಲು ಪ್ರವರ್ಗ-2ಎ, 2ಬಿ, 3ಎ, 3ಬಿ ವರ್ಗಗಳ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕುಟುಂಬದ ವಾರ್ಷಿಕ ವರಮಾನ ಮಿತಿ ರೂ.1.00 ಲಕ್ಷ ಹಾಗೂ ಪ್ರವರ್ಗ-1, ಎಸ್.ಸಿ/ಎಸ್.ಟಿ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ ನಿಗದಿಪಡಿಸಿದ್ದು, ಅರ್ಹತೆ ಮತ್ತು ಆದಾಯದ ಮಾನದಂಡದ ಮೇಲೆ ಆಯ್ಕೆ ಮಾಡಲಾಗುವುದು.
3. ವಿದ್ಯಾರ್ಥಿಗಳನ್ನು ಈ ಕೆಳಕಂಡ ಮೀಸಲಾತಿ ಅನುಪಾತದಂತೆ ಪ್ರವೇಶಕ್ಕೆ ಆಯ್ಕೆ ಮಾಡಲಾಗುವುದು.

1	ಪ್ರವರ್ಗ – 1	ಶೇಕಡ 10
2	ಪ್ರವರ್ಗ – 2ಎ	ಶೇಕಡ 35
3	ಪ್ರವರ್ಗ – 2ಬಿ	ಶೇಕಡ 09
4	ಪ್ರವರ್ಗ – 3ಎ	ಶೇಕಡ 09
5	ಪ್ರವರ್ಗ – 3ಬಿ	ಶೇಕಡ 12
6	ಪರಿಶಿಷ್ಟ ಜಾತಿ	ಶೇಕಡ 21
7	ಪರಿಶಿಷ್ಟ ಪಂಗಡ	ಶೇಕಡ 04
	ಒಟ್ಟು	**ಶೇಕಡ 100**

4. ಸರ್ಕಾರಿ ಸುತ್ತೋಲೆ ಸಂಖ್ಯೆ ಸಕಇ 53 ಬಿಎಂಸ್ 2009 ದಿ:26.2.2009ರಲ್ಲಿ ವಿದ್ಯಾರ್ಥಿ ನಿಲಯಗಳಲ್ಲಿ ಲಭ್ಯವಿರುವ ಖಾಲಿ ಸ್ಥಾನಗಳಲ್ಲಿ ಶೇಕಡ 20ರಷ್ಟು ಸ್ಥಾನಗಳನ್ನು ಸ್ವಾತಂತ್ರ್ಯ ಹೋರಾಟಗಾರರ ಮಕ್ಕಳು, ಮಾಜಿ ಸೈನಿಕರ ಮಕ್ಕಳು, ವಿಧವೆಯರ ಮಕ್ಕಳು, ದೇವದಾಸಿಯರ ಮಕ್ಕಳು, ಅಂಗವಿಕಲ ಮಕ್ಕಳು, ತಂದೆ ಹಾಗೂ ತಾಯಿ ಇಲ್ಲದ ಅನಾಥ ಮಕ್ಕಳು, ಪ್ರಮಾಣೀಕೃತ ಬಾಲಕಾರ್ಮಿಕರು, ಯೋಜನಾ ನಿರ್ವಸಿತ ಪೋಷಕರ ಮಕ್ಕಳು, ದೌರ್ಜನ್ಯದಲ್ಲಿ ಮೃತಪಟ್ಟ / ಶಾಶ್ವತ ಅಂಗವಿಕಲ ಪೋಷಕರ ಮಕ್ಕಳು, ಅಪಘಾತದಲ್ಲಿ ಮೃತಪಟ್ಟ/ಶಾಶ್ವತ ಅಂಗವಿಕಲರಾಗಿರುವ ಪೋಷಕರ ಮಕ್ಕಳು. ಆದಿವಾಸಿ ಪಂಗಡದ (ಜೇನು ಕುರುಬ ಹಾಗೂ ಕೊರಗ ಸಮಾಜ) ಮಕ್ಕಳು, ಅಲೆಮಾರಿ ಜನಾಂಗದ ಮಕ್ಕಳು, ಭಿಕ್ಷುಕರ ಮಕ್ಕಳು, ಸಫಾಯಿ ಕರ್ಮಚಾರಿ ಮಕ್ಕಳಿಗೆ ಮೀಸಲಿರಿಸಲಾಗಿದೆ.

ತಾಲ್ಲೂಕು ಮಟ್ಟದ ಆಯ್ಕೆ ಸಮಿತಿಯ ವಿವರ

1.	ತಾಲ್ಲೂಕಿನ ಹೆಚ್ಚಿನ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು	ಅಧ್ಯಕ್ಷರು
2.	ತಾಲ್ಲೂಕಿನ ಉಳಿದ ಭಾಗ ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು	ಸದಸ್ಯರು
3.	ಆಯಾ ಕ್ಷೇತ್ರದ ವಿಧಾನ ಪರಿಷತ್ತಿನ ಸದಸ್ಯರು	ಸದಸ್ಯರು
4.	ಸಂಬಂಧ ಪಟ್ಟ ತಾಲ್ಲೂಕ್ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಗಳು	ಸದಸ್ಯರು
5.	ಕ್ಷೇತ್ರ ಶಿಕ್ಷಣಾಧಿಕಾರಿಗಳು (ಬಿ.ಇ.ಓ)	ಸದಸ್ಯರು
6.	ಆಯಾ ತಾಲ್ಲೂಕಿನ ತಹಶೀಲ್ದಾರರು	ಸದಸ್ಯರು
7.	ಆಯಾ ತಾಲ್ಲೂಕಿನ ಸ್ಥಳೀಯ ಸರ್ಕಾರಿ ಆಸ್ಪತ್ರೆಯ ವೈದ್ಯಾಧಿಕಾರಿಗಳು	ಸದಸ್ಯರು
8.	ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಆಯಾ ತಾಲ್ಲೂಕಿನ ವಿಸ್ತರಣಾಧಿಕಾರಿಗಳು	ಸದಸ್ಯ ಕಾರ್ಯದರ್ಶಿ

3) ಆಶ್ರಮಶಾಲೆಗಳ ಪ್ರವೇಶಕ್ಕಾಗಿ ಅನುಸರಿಸುವ ಮಾನದಂಡಗಳ ವಿವರ

1. ವಿದ್ಯಾರ್ಥಿಗಳನ್ನು ಪ್ರವೇಶಕ್ಕೆ ಆಯ್ಕೆ ಮಾಡುವಾಗ ಮಂಜೂರಾತಿ ಸಂಖ್ಯೆಯ ಶೇಕಡ 75 ರಷ್ಟನ್ನು ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಹಾಗೂ ಶೇಕಡ 25 ರಷ್ಟನ್ನು ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಕ್ಕೆ ಸೇರಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಬೇಕು.
2. ಪ್ರವರ್ಗ-1ಕ್ಕೆ ಸೇರಿದ ವಿದ್ಯಾರ್ಥಿಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯದಿದ್ದಲ್ಲಿ, ಮೀಸಲಾತಿ ಪ್ರಮಾಣವು ಈ ಕೆಳಕಂಡಂತಿರಬೇಕು.

1	ಪ್ರವರ್ಗ – 2ಎ	ಶೇಕಡ 54
2	ಪ್ರವರ್ಗ – 2ಬಿ	ಶೇಕಡ 14
3	ಪ್ರವರ್ಗ – 3ಎ	ಶೇಕಡ 14
4	ಪ್ರವರ್ಗ – 3ಬಿ	ಶೇಕಡ 18
	ಒಟ್ಟು	**ಶೇಕಡ 100**

3. ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಹಾಗೂ ಪ್ರವರ್ಗ 2ಎ, 2ಬಿ, 3ಎ, 3ಬಿ ಸೇರಿದ ವಿದ್ಯಾರ್ಥಿಗಳಿಗೆ ರೂ.44,500/- ಗಳ ವಾರ್ಷಿಕ ಆದಾಯ ಮಿತಿಯನ್ನು ನಿಗದಿಪಡಿಸಲಾಗಿದೆ.

4) ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳು:

ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1000/- ರಂತೆ 10 ತಿಂಗಳ ಅವಧಿಗೆ ಆಹಾರ ವೆಚ್ಚ ನೀಡಲಾಗುವುದು. ವಿದ್ಯಾರ್ಥಿನಿಲಯಗಳಲ್ಲಿ ಚಾಲ್ತಿಯಲ್ಲಿರುವ ನಿಯಮಾನುಸಾರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸತಕ್ಕದ್ದು.

1	ಪ್ರವರ್ಗ - 1	ಶೇಕಡ 10
2	ಪ್ರವರ್ಗ - 2ಎ	ಶೇಕಡ 35
3	ಪ್ರವರ್ಗ - 2ಬಿ	ಶೇಕಡ 09
4	ಪ್ರವರ್ಗ - 3ಎ	ಶೇಕಡ 09
5	ಪ್ರವರ್ಗ - 3ಬಿ	ಶೇಕಡ 12
6	ಪರಿಶಿಷ್ಟ ಜಾತಿ	ಶೇಕಡ 21
7	ಪರಿಶಿಷ್ಟ ಪಂಗಡ	ಶೇಕಡ 04
	ಒಟ್ಟು	**ಶೇಕಡ 100**

ನಿಬಂಧನೆಗಳು:

1. ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ರೂ.1.00ಲಕ್ಷ ಹಾಗೂ ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.44,500/- ಗಳ ಆದಾಯಮಿತಿ ನಿಗದಿಪಡಿಸಿದೆ.
2. 5 ರಿಂದ 10ನೇ ತರಗತಿವರೆಗಿನ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
3. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1000/- ರಂತೆ 10 ತಿಂಗಳ ಅವಧಿಗೆ ಆಹಾರ ವೆಚ್ಚ ನೀಡಲಾಗುವುದು.

5) ಖಾಸಗಿ ಹಿಂದುಳಿದ ವರ್ಗಗಳ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳು:

ವಿದ್ಯಾರ್ಥಿನಿಲಯಗಳಲ್ಲಿ ಚಾಲ್ತಿಯಲ್ಲಿರುವ ನಿಯಮಾನುಸಾರ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸತಕ್ಕದ್ದು.

1	ಪ್ರವರ್ಗ- 1	ಶೇಕಡ 20
2	ಪ್ರವರ್ಗ - 2ಎ	ಶೇಕಡ 25
3	ಪ್ರವರ್ಗ - 2ಬಿ	ಶೇಕಡ 20
4	ಪ್ರವರ್ಗ - 3ಎ	ಶೇಕಡ 20
5	ಪ್ರವರ್ಗ - 3ಬಿ	ಶೇಕಡ 15
ಒಟ್ಟು		**ಶೇಕಡ 100**

ನಿಬಂಧನೆಗಳು:

1. ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ರೂ.2.50ಲಕ್ಷ ಹಾಗೂ ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ಆದಾಯಮಿತಿ ನಿಗದಿಪಡಿಸಿದೆ.
2. ಪದವಿ ಪೂರ್ವ ಕೋರ್ಸಿನಿಂದ ಸ್ನಾತಕೋತ್ತರ ಪದವಿಗಳವರೆಗೆ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ
3. ಪ್ರತಿ ವಿದ್ಯಾರ್ಥಿಗೆ ಮಾಹೆಯಾನ ರೂ.1100/- ರಂತೆ 10 ತಿಂಗಳ ಅವಧಿಗೆ ಆಹಾರ ವೆಚ್ಚ ನೀಡಲಾಗುವುದು.

6) ಖಾಸಗಿ ಅನುದಾನಿತ ಅನಾಥಾಲಯಗಳು:

1. ಅನಾಥ ವಿದ್ಯಾರ್ಥಿಗಳಿಗೆ ಆದಾಯಮಿತಿ ಇರುವುದಿಲ್ಲ.
2. ನಿರ್ಗತಿಕ ವಿದ್ಯಾರ್ಥಿಗಳು ವಾರ್ಷಿಕ ಆದಾಯಮಿತಿ- ಪ್ರವರ್ಗ-1 ರೂ.1.00 ಲಕ್ಷ, ಪ್ರವರ್ಗ-2ಎ, 2ಬಿ, 3ಎ, ಮತ್ತು 3ಬಿ - ರೂ.44,500/- ನಿಗದಿಪಡಿಸಿದೆ.
3. 1 ರಿಂದ 10ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ನಿರ್ಗತಿಕ ಹಾಗೂ ಅನಾಥ ಮಕ್ಕಳು ಸೌಲಭ್ಯಕ್ಕೆ ಅರ್ಹರು.

7) ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ನಿರ್ಮಾಣ:

ರಾಜ್ಯದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖಾವತಿಯಿಂದ 2438 ಮೆಟ್ರಿಕ್-ಪೂರ್ವ/ಮೆಟ್ರಿಕ್-ನಂತರದ ವಿದ್ಯಾರ್ಥಿನಿಲಯಗಳು ಕಾರ್ಯನಿರ್ವಹಿಸುತ್ತಿದ್ದು, ಈ ಪೈಕಿ 1502 ವಿದ್ಯಾರ್ಥಿ ನಿಲಯಗಳು ಸ್ವಂತ ಕಟ್ಟಡಗಳನ್ನು ಹೊಂದಿರುತ್ತವೆ. ಹಿಂದುಳಿದ ವರ್ಗಗಳ ವಿದ್ಯಾರ್ಥಿ ನಿಲಯಗಳಿಗೆ ಸ್ವಂತ ಕಟ್ಟಡವನ್ನು ನಿರ್ಮಿಸುವ ಸಂಬಂಧ ನಿವೇಶನಗಳನ್ನು ಪಡೆಯಲಾಗುತ್ತಿದ್ದು, ಖಾಲಿ ಇರುವ ನಿವೇಶನಗಳಲ್ಲಿ ಸ್ವಂತ ಕಟ್ಟಡವನ್ನು ಅನುದಾನದ ಲಭ್ಯತೆಯ ಅನುಸಾರ ಹಂತ ಹಂತವಾಗಿ ವಿವಿಧ ಏಜೆನ್ಸಿಗಳ ಮೂಲಕ ನಿರ್ಮಾಣ ಮಾಡಲಾಗುತ್ತಿದೆ. ಸ್ವಂತ ಕಟ್ಟಡಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ವಿದ್ಯಾರ್ಥಿ ನಿಲಯಗಳಿಗೆ ವಾರ್ಷಿಕ ದುರಸ್ತಿ, ಸುಣ್ಣ-ಬಣ್ಣ, ಹೆಚ್ಚುವರಿ ಕೊಠಡಿ ನಿರ್ಮಾಣ ಇತ್ಯಾದಿ ಕಾಮಗಾರಿಗಳನ್ನು ಜಿಲ್ಲಾ ವಲಯದ ಕಟ್ಟಡಗಳ ನಿರ್ವಹಣೆ ಮತ್ತು ದುರಸ್ತಿ ಕಾರ್ಯಕ್ರಮದಡಿ ಮಾಡಲಾಗುತ್ತಿದೆ. ಉತ್ತಮ ಸೌಕರ್ಯಗಳನ್ನು ನಿರಂತರವಾಗಿ ನೀಡುವ ಹಾಗೂ ಕಟ್ಟಡಗಳನ್ನು ಉತ್ತಮ ಸ್ಥಿತಿಯಲ್ಲಿ ಇಟ್ಟಿರಲು ಅನುಕೂಲವಾಗುವಂತೆ ದುರಸ್ತಿ ಕಾರ್ಯವನ್ನು ಕೈಗೊಳ್ಳಲಾಗುವುದು.

II. ವಿದ್ಯಾರ್ಥಿವೇತನ ಕಾರ್ಯಕ್ರಮಗಳು

1) ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ:

1. ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಮತ್ತು 3ಬಿಗೆ ಸೇರಿದವರಾಗಿರಬೇಕು.
2. ವಾರ್ಷಿಕ ಆದಾಯಮಿತಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ, ಪ್ರವರ್ಗ-2ಎ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ - ರೂ.44,500/- ನಿಗದಿಪಡಿಸಿದೆ. ಕೇಂದ್ರ ಪುರಸ್ಕೃತ ವಿದ್ಯಾರ್ಥಿವೇತನಕ್ಕೆ ವಾರ್ಷಿಕ ರೂ.2.50 ಲಕ್ಷ ಆದಾಯಮಿತಿ.
3. ಸರ್ಕಾರದ/ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ /ಅನುದಾನರಹಿತ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಅರ್ಹರು.
4. ಸರ್ಕಾರದ/ಸರ್ಕಾರದ ಅನುದಾನಿತ ವಿದ್ಯಾರ್ಥಿನಿಲಯಗಳಲ್ಲಿ/ವಸತಿಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುವುದಿಲ್ಲ.
5. ಹಿಂದಿನ ತರಗತಿಯಲ್ಲಿ ಶೇ.75 ಕ್ಕಿಂತ ಹೆಚ್ಚು ಹಾಜರಾತಿ ಹೊಂದಿದವರು ಮಾತ್ರ ಅರ್ಹರು.
6. ಹಿಂದಿನ ತರಗತಿಯಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳು, ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುವುದಿಲ್ಲ.

ಆಯ್ಕೆ ವಿಧಾನ:

1. ಕೇಂದ್ರ ಪುರಸ್ಕೃತ ಅನುದಾನವನ್ನು ಅತ್ಯಂತ ಕಡಿಮೆ ಆದಾಯ ಮತ್ತು ಮೆರಿಟ್ ಇರುವ ವಿದ್ಯಾರ್ಥಿಗಳಿಗೆ ಅನುದಾನದ ಲಭ್ಯತೆಗೊಳಪಟ್ಟು ಮಂಜೂರು ಮಾಡಲಾಗುವುದು. ನಂತರ ಉಳಿದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಮೆಟ್ರಿಕ್-ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುವುದು.
2. ಮೊದಲನೇ ಆದ್ಯತೆ: ಎಲ್ಲಾ ಅರ್ಹ ನವೀಕರಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮಂಜೂರು ಮಾಡುವುದು.
3. ಎರಡನೇ ಆದ್ಯತೆ: ಹಿಂದುಳಿದ ವರ್ಗಗಳ ಪ್ರವರ್ಗ-1ರ ಎಲ್ಲಾ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಮಂಜೂರು ಮಾಡುವುದು.
4. ಮೂರನೇ ಆದ್ಯತೆ: ಉಳಿದ ಮೊತ್ತವನ್ನು ಅರ್ಹವಿರುವ ಪ್ರವರ್ಗ-2ಎ, 3ಎ, 3ಬಿ ಮತ್ತು ಇತರೆ ಹಿಂದುಳಿದ ವರ್ಗಗಳ (ಕೇಂದ್ರ/ರಾಜ್ಯ ಸರ್ಕಾರದ ಹಿಂದುಳಿದ ವರ್ಗದ ಪಟ್ಟಿಯಲ್ಲಿ ಇರುವ ಜಾತಿಗಳು ಮಾತ್ರ) ವಿದ್ಯಾರ್ಥಿಗಳಿಗೆ ಆದಾಯ ಮತ್ತು ಅರ್ಹತೆಯ ಆಧಾರದ ಮೇಲೆ ಈ ಕೆಳಕಂಡ ಪ್ರಮಾಣದಂತೆ ಮಂಜೂರು ಮಾಡಲಾಗುವುದು.

1	ಪ್ರವರ್ಗ - 2ಎ	ಶೇಕಡ 61
2	ಪ್ರವರ್ಗ - 3ಎ	ಶೇಕಡ 17
3	ಪ್ರವರ್ಗ - 3ಬಿ	ಶೇಕಡ 21
4	ಇತರೆ ಹಿಂದುಳಿದ ವರ್ಗ	ಶೇಕಡ 01
ಒಟ್ಟು		**ಶೇಕಡ 100**

2) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ

1. ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು ಹಾಗೂ ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರಬೇಕು.
2. ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸರ್ಕಾರಿ/ಸ್ಥಳೀಯ ಸಂಸ್ಥೆ/ಅನುದಾನಿತ ಸಂಸ್ಥೆ/ಮಾನ್ಯತೆ ಪಡೆದ ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಮೆಟ್ರಿಕ್-ನಂತರದ ಶಿಕ್ಷಣವನ್ನು ಪಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.
3. ಸರ್ಕಾರದ ವಿದ್ಯಾರ್ಥಿನಿಲಯಗಳಲ್ಲಿ/ವಸತಿ ಕಾಲೇಜುಗಳಲ್ಲಿ ಪ್ರವೇಶ ಪಡೆದಿರುವ ವಿದ್ಯಾರ್ಥಿಗಳು ಮೆಟ್ರಿಕ್-ನಂತರದ ವಿದ್ಯಾರ್ಥಿವೇತನವನ್ನು ಪಡೆಯಲು ಅರ್ಹರಿರುವುದಿಲ್ಲ.
4. ವಾರ್ಷಿಕ ಆದಾಯಮಿತಿ ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ, ಪ್ರವರ್ಗ-2ಎ, 3ಎ, ಮತ್ತು 3ಬಿ ವಿದ್ಯಾರ್ಥಿಗಳಿಗೆ – ರೂ.1.00 ಲಕ್ಷ ನಿಗದಿಪಡಿಸಿದೆ.
5. ಹೊಸ ಮತ್ತು ನವೀಕರಣ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನಕ್ಕಾಗಿ ಹಿಂದಿನ ತರಗತಿಗಳಲ್ಲಿ ನಿಗದಿಪಡಿಸಿರುವ ಕನಿಷ್ಠ ಅಂಕ

ಕ್ರ ಸಂ.	ಪ್ರವರ್ಗ	ಹೊಸ	ನವೀಕರಣ
1	ಪ್ರವರ್ಗ-1	40%	50%
2	ಪ್ರವರ್ಗ-2ಎ, 3ಎ ಮತ್ತು 3ಬಿ	50%	60%

6. ಸಮಾನ ಕೋರ್ಸುಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವ್ಯಾಸಂಗ ಮಾಡುತ್ತಿದ್ದಲ್ಲಿ, ವಿದ್ಯಾರ್ಥಿವೇತನಕ್ಕೆ ಅರ್ಹರಿರುವುದಿಲ್ಲ.
7. ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.
8. ವಿವಿಧ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮೆಟ್ರಿಕ್-ನಂತರದ ವಿದ್ಯಾರ್ಥಿಗಳಿಗೆ ಕೋರ್ಸಿನ ಗುಂಪುವಾರು ಪ್ರತಿ ತಿಂಗಳಿಗೆ ಮೆಟ್ರಿಕ್-ನಂತರದ ವಿದ್ಯಾರ್ಥಿವೇತನವನ್ನು 10 ತಿಂಗಳ ಅವಧಿಗೆ ಅರ್ಹತೆ ಮತ್ತು ಆದಾಯಮಿತಿಯನ್ನು ಪರಿಗಣಿಸಿ, ಮಂಜೂರು ಮಾಡಲಾಗುವುದು.

ಅನುದಾನದ ಹಂಚಿಕೆ ವಿಧಾನ:

ಆಯಾ ಆರ್ಥಿಕ ವರ್ಷಕ್ಕೆ ಲಭ್ಯವಾಗುವ ಅನುದಾನವನ್ನು ಪ್ರವರ್ಗವಾರು ಈ ಕೆಳಗಿನಂತೆ ಶೇಕಡವಾರು ಹಂಚಿಕೆ ಮಾಡಲಾಗುವುದು.

1	ಪ್ರವರ್ಗ-1	15%
2	ಪ್ರವರ್ಗ – 2ಎ	52%
3	ಪ್ರವರ್ಗ – 3ಎ	14%
4	ಪ್ರವರ್ಗ – 3ಬಿ	18%
5	ಇತರೆ ಹಿಂದುಳಿದ ವರ್ಗ	01%
ಒಟ್ಟು		**100%**

3) ವಿದ್ಯಾಸಿರಿ– ಊಟ ಮತ್ತು ವಸತಿ ಸಹಾಯ ಯೋಜನೆ

1. ಅ) ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿ ಆಗಿರಬೇಕು.

   ಆ) ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ, ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರಬೇಕು.

ಇ) ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳ ಅಧೀನಕ್ಕೆ ಒಳಪಡುವ, ಸರ್ಕಾರಿ / ಸ್ಥಳೀಯ ಸಂಸ್ಥೆ/ ಅನುದಾನಿತ ಸಂಸ್ಥೆಗಳು / ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ - ಮೆಟ್ರಿಕ್ ನಂತರದ ಕೋರ್ಸುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಾಗಿರಬೇಕು.

2. ಅ) ಈ ಮೇಲಿನ ಸೌಲಭ್ಯ ಪಡೆಯಲು ವಿದ್ಯಾರ್ಥಿಯ, ತಂದೆ-ತಾಯಿ/ಪೋಷಕರ ಕುಟುಂಬದ, ಒಟ್ಟು ವಾರ್ಷಿಕ ವರಮಾನ (Gross Annual Income) ಈ ಕೆಳಗೆ ನಿಗದಿಪಡಿಸಿದ ಮಿತಿಯೊಳಗೆ ಇರಬೇಕು.

   (i) ಪ್ರವರ್ಗ-1 ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ

   (ii) ಪ್ರವರ್ಗ-2ಎ, 3ಎ ಮತ್ತು 3ಬಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ

   ಆ) ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವಾಗಿರಬೇಕು ಹಾಗೂ ವ್ಯಾಸಂಗ ಮಾಡುವ ಕಾಲೇಜಿನಿಂದ ಕನಿಷ್ಠ 5 ಕಿ.ಮೀ. ದೂರದವರಾಗಿರಬೇಕು. ಆದರೆ, ವಿದ್ಯಾರ್ಥಿಯ ಸ್ವಂತ ಸ್ಥಳ, ನಗರ/ಪಟ್ಟಣ ಆಗಿದ್ದು, ಅವರು ಬೇರೆ ನಗರ/ಪಟ್ಟಣದಲ್ಲಿ ಇರುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಈ ಸೌಲಭ್ಯಕ್ಕೆ ಅರ್ಹರಿರುತ್ತಾರೆ.

   ಇ) ಹೊಸ ಮತ್ತು ನವೀಕರಣ ವಿದ್ಯಾರ್ಥಿಗಳು ಈ ಸೌಲಭ್ಯ ಪಡೆಯಲು ಈ ಹಿಂದಿನ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಈ ಕೆಳಗಿನಂತೆ ಕನಿಷ್ಠ ಅಂಕಗಳನ್ನು ಪಡೆದು ಉತ್ತೀರ್ಣರಾಗಿರಬೇಕು.

ಕ್ರ. ಸಂ.	ಪ್ರವರ್ಗ	ಹೊಸ	ನವೀಕರಣ
1	ಪ್ರವರ್ಗ-1	40%	50%
2	ಪ್ರವರ್ಗ-2ಎ, 3ಎ ಮತ್ತು 3ಬಿ	50%	60%

(ಒಂದು ವೇಳೆ, ವೈದ್ಯಕೀಯ ಕಾರಣಗಳಿಂದಾಗಿ ಪರೀಕ್ಷೆಗೆ ಹಾಜರಾಗಲು ಸಾಧ್ಯವಾಗದಿದ್ದಲ್ಲಿ, ಅಂತಹವರು, ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರ ಪಡೆದು ಸಲ್ಲಿಸಬೇಕು.)

3. ಅ) ಸಮಾನ ಕೋರ್ಸುಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಅರ್ಹರಿರುವುದಿಲ್ಲ. (ಉದಾ: ಬಿ.ಎ ನಂತರ ಬಿ.ಕಾಂ, ಎಂ.ಎ (ಕನ್ನಡ) ನಂತರ ಎಂ.ಎ (ಇಂಗ್ಲೀಷ್), ಬಿ.ಎಡ್ ನಂತರ ಎಲ್.ಎಲ್.ಬಿ, ಇತ್ಯಾದಿಗಳಿಗೆ ಪ್ರವೇಶ ಪಡೆದಿದ್ದಲ್ಲಿ)

   ಆ) ಸ್ನಾತಕೋತ್ತರ ವೈದ್ಯಕೀಯ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು, ಕೋರ್ಸಿನ ಅವಧಿಯಲ್ಲಿ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತಿದ್ದಲ್ಲಿ, ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

   ಇ) ಕಲೆ, ವಿಜ್ಞಾನ, ಹಾಗೂ ವಾಣಿಜ್ಯ ಕೋರ್ಸುಗಳ, ಪದವಿ ಅಥವಾ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣ / ಅನುತ್ತೀರ್ಣರಾದವರು ಅಂಗೀಕೃತ ವೃತ್ತಿಪರ ಅಥವಾ ತಾಂತ್ರಿಕ ಸರ್ಟಿಫಿಕೇಟ್, ಡಿಪ್ಲೋಮ, ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ, ಹಾಗೂ ಇತರೆ ರೀತಿ ಅರ್ಹರಿದ್ದಲ್ಲಿ ಅವರು ಈ ಯೋಜನೆಯ ಅಡಿ ಸೌಲಭ್ಯಗಳಿಗೆ ಅರ್ಹರಿರುತ್ತಾರೆ. ಒಂದಕ್ಕಿಂತ ಹೆಚ್ಚು ಬಾರಿ ಕೋರ್ಸುಗಳ ಬದಲಾವಣೆ ಮಾಡಿಕೊಂಡವರು ಅರ್ಹರಿರುವುದಿಲ್ಲ.

   ಈ) ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ, ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

4) ಶುಲ್ಕ ವಿನಾಯಿತಿ

1. ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು ಹಾಗೂ ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿರಬೇಕು.
2. ಕರ್ನಾಟಕದ ಶಾಸನಬದ್ಧ ವಿಶ್ವ ವಿದ್ಯಾಲಯಗಳ ಅಧೀನಕ್ಕೆ ಒಳಪಡುವ ಸರ್ಕಾರಿ / ಸ್ಥಳೀಯ ಸಂಸ್ಥೆ/ ಅನುದಾನಿತ ಸಂಸ್ಥೆ / ಮಾನ್ಯತೆ ಪಡೆದ ಅನುದಾನರಹಿತ ಖಾಸಗಿ ಸಂಸ್ಥೆಗಳಲ್ಲಿ ಮೆಟ್ರಿಕ್-ನಂತರದ ಶಿಕ್ಷಣವನ್ನು ಪಡೆಯುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳು ಮೆಟ್ರಿಕ್-ನಂತರದ ವಿದ್ಯಾರ್ಥಿವೇತನ ಪಡೆಯಲು ಅರ್ಹರಿರುತ್ತಾರೆ.
3. ಈ ಸೌಲಭ್ಯವನ್ನು ಪಡೆಯಲು ವಿದ್ಯಾರ್ಥಿಯ ತಂದೆ-ತಾಯಿ/ಪೋಷಕರ ಕುಟುಂಬದ ವಾರ್ಷಿಕ ವರಮಾನ ಈ ಕೆಳಗೆ ನಿಗದಿಪಡಿಸಿದ ಗರಿಷ್ಠ ಮಿತಿಯೊಳಗೆ ಇರಬೇಕು.

- ಪ್ರವರ್ಗ-1ರ ವಿದ್ಯಾರ್ಥಿಗಳಿಗೆ ರೂ.2.50 ಲಕ್ಷ ಹಾಗೂ
- ಭಾರತ ಸರ್ಕಾರ ಅಥವಾ ರಾಜ್ಯ ಸರ್ಕಾರ ಅಧಿಸೂಚಿಸಿರುವ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ ಮತ್ತು ಎಲ್ಲಾ ಧರ್ಮಗಳ, ಜಾತಿಗಳ ಹಾಗೂ ಸಮುದಾಯಗಳ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ
- ಆದರೆ, ಸಮಾಜ ಕಲ್ಯಾಣ/ ಪರಿಶಿಷ್ಟ ವರ್ಗಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ವ್ಯಾಪ್ತಿಗೆ ಬರುವ ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಸೌಲಭ್ಯಗಳನ್ನು ಪಡೆಯಲು ಅರ್ಹರಿರುವುದಿಲ್ಲ.

4. ಅ) ಸಮಾನ ಕೋರ್ಸುಗಳಲ್ಲಿ ಒಂದಕ್ಕಿಂತ ಹೆಚ್ಚು ಬಾರಿ ವ್ಯಾಸಂಗ ಮಾಡುತ್ತಿದ್ದಲ್ಲಿ, ಅಂತಹವರು ಅರ್ಹರಿರುವುದಿಲ್ಲ.

   ಆ) ಸ್ನಾತಕೋತ್ತರ, ವೈದ್ಯಕೀಯ ಕೋರ್ಸುಗಳಲ್ಲಿ ವ್ಯಾಸಂಗ ಮಾಡುವ ವಿದ್ಯಾರ್ಥಿಗಳು ಕೋರ್ಸಿನ ಅವಧಿಯಲ್ಲಿ ಮೆಡಿಕಲ್ ಪ್ರಾಕ್ಟೀಸ್ ಮಾಡುತ್ತಿದ್ದಲ್ಲಿ, ಈ ಸೌಲಭ್ಯಕ್ಕೆ ಅರ್ಹರಿರುವುದಿಲ್ಲ.

   ಇ) ಕಲೆ, ವಿಜ್ಞಾನ ಹಾಗೂ ವಾಣಿಜ್ಯ ಕೋರ್ಸುಗಳ, ಪದವಿ ಅಥವಾ ಸ್ನಾತಕೋತ್ತರ ಪದವಿಗಳಲ್ಲಿ ಉತ್ತೀರ್ಣ / ಅನುತ್ತೀರ್ಣರಾದವರು ಅಂಗೀಕೃತ ವೃತ್ತಿಪರ ಅಥವಾ ತಾಂತ್ರಿಕ ಸರ್ಟಿಫಿಕೇಟ್, ಡಿಪ್ಲೋಮಾ, ಪದವಿ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿದ್ದಲ್ಲಿ ಹಾಗೂ ಇತರೆ ರೀತಿ ಅರ್ಹರಿದ್ದಲ್ಲಿ ಅವರು ಈ ಯೋಜನೆಯ ಅಡಿ ಸೌಲಭ್ಯಗಳಿಗೆ ಅರ್ಹರಿರುತ್ತಾರೆ. ಒಂದಕ್ಕಿಂತ ಹೆಚ್ಚು ಬಾರಿ ಕೋರ್ಸುಗಳ ಬದಲಾವಣೆ ಮಾಡಿಕೊಂಡವರು ಅರ್ಹರಿರುವುದಿಲ್ಲ.

   ಈ) ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ, ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.

ಅ) ಶುಲ್ಕ ವಿನಾಯಿತಿಗೆ ಅರ್ಹ ಇರುವ ಶುಲ್ಕಗಳು:

ರಾಜ್ಯಮಟ್ಟದ ಸಮಿತಿಯು ನಿಗದಿಪಡಿಸುವ ದರಗಳಂತೆ ಈ ಕೆಳಗಿನ ಐದು ಶುಲ್ಕಗಳಿಗೆ ಮಾತ್ರ ವಿನಾಯಿತಿ ನೀಡಲಾಗುವುದು.

ಅ) ಬೋಧನಾ ಶುಲ್ಕ

ಆ) ಪ್ರಯೋಗಾಲಯ ಶುಲ್ಕ (ಯಾವ ಕೋರ್ಸುಗಳಲ್ಲಿ ಪ್ರಯೋಗಾಲಯ ಕಡ್ಡಾಯವಿದೆಯೋ ಆ ಕೋರ್ಸುಗಳಿಗೆ ಮಾತ್ರ)

ಇ) ಪರೀಕ್ಷಾ ಶುಲ್ಕ

ಈ) ಕ್ರೀಡಾ ಶುಲ್ಕ

ಉ) ಗ್ರಂಥಾಲಯ ಶುಲ್ಕ

5) ಪಿಹೆಚ್.ಡಿ ಪೂರ್ಣಾವಧಿ ಅಧ್ಯಯನದಲ್ಲಿ ತೊಡಗಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಫೆಲೋಶಿಪ್

1. ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.
2. ಕರ್ನಾಟಕ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿರಬೇಕು.
3. ಕರ್ನಾಟಕದ ಶಾಸನಬದ್ಧ ವಿಶ್ವವಿದ್ಯಾಲಯಗಳಲ್ಲಿ/ಅಧೀನಕ್ಕೆ ಒಳಪಡುವ ಸಂಸ್ಥೆಗಳಲ್ಲಿ ಪೂರ್ಣಾವಧಿ (Full Time) ಪಿಎಚ್.ಡಿ ಅಧ್ಯಯನದಲ್ಲಿ ತೊಡಗಿರಬೇಕು.
4. ಈ ಸೌಲಭ್ಯವನ್ನು ಪಡೆಯಲಿಚ್ಛಿಸುವ ಅಭ್ಯರ್ಥಿಯು ಭಾರತ ಸರ್ಕಾರ / ಕರ್ನಾಟಕ ಸರ್ಕಾರ / ವಿಶ್ವವಿದ್ಯಾಲಯ ಅಥವಾ ಇತರೆ ಯಾವುದೇ ಸಂಸ್ಥೆಗಳಿಂದ ಮಾಸಿಕ ವ್ಯಾಸಂಗ ವೇತನ/ಫೆಲೋಶಿಪ್‌ಗೆ ಆಯ್ಕೆಯಾಗಿರಬಾರದು.

ಶೈಕ್ಷಣಿಕ ಅರ್ಹತೆ

1. ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.55 ಅಂಕಗಳನ್ನು ಪಡೆದಿರಬೇಕು.
2. ವಿಶ್ವವಿದ್ಯಾಲಯ/ಅಧಿಕೃತ ಸಂಸ್ಥೆಗಳಲ್ಲಿನ ಸಂಶೋಧನಾ ಮಾರ್ಗದರ್ಶಕರಡಿಯಲ್ಲಿ ಪಿಎಚ್.ಡಿ ಅಧ್ಯಯನಕ್ಕಾಗಿ ನೋಂದಣಿ ಮಾಡಿಕೊಂಡಿರಬೇಕು.
3. ಈ ನೋಂದಣಿಯು ವ್ಯಾಸಂಗ ವೇತನ/ಫೆಲೋಶಿಪ್‌ಗಾಗಿ ಅರ್ಜಿ ಸಲ್ಲಿಸುವ ದಿನಾಂಕಕ್ಕೆ ಹಿಂದಿನ 2 ವರ್ಷಗಳೊಳಗಿದ್ದು, ಅರ್ಜಿ ಸಲ್ಲಿಸುವ ಸಾಲಿನಿಂದ ಪ್ರಥಮ ವರ್ಷದ ಪಿಎಚ್.ಡಿ ಅಧ್ಯಯನದಲ್ಲಿ ತೊಡಗಿರಬೇಕು.

ವಯೋಮಿತಿ: ಅಭ್ಯರ್ಥಿಯ ಗರಿಷ್ಠ ವಯೋಮಿತಿ 35 ವರ್ಷಗಳು.

ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ

ಪ್ರವರ್ಗ-1 – ರೂ.4.50 ಲಕ್ಷ.

ಪ್ರವರ್ಗ-2(ಎ), 3(ಎ) ಮತ್ತು 3(ಬಿ) – ರೂ.3.50 ಲಕ್ಷ.

1. ಕೇಂದ್ರ / ರಾಜ್ಯ ಸರ್ಕಾರಿ / ಅನುದಾನಿತ ಸಂಸ್ಥೆ / ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳ ಉದ್ಯೋಗಿಗಳು ಈ ಸೌಲಭ್ಯವನ್ನು ಪಡೆಯಲು ಅರ್ಹರಲ್ಲ.
2. ಒಂದೇ ಕುಟುಂಬದ ಇಬ್ಬರು ಗಂಡು ಮಕ್ಕಳು ಮಾತ್ರ ಈ ಯೋಜನೆಗೆ ಅರ್ಹರು. ಆದರೆ ಈ ನಿರ್ಬಂಧ ಹೆಣ್ಣು ಮಕ್ಕಳಿಗೆ ಅನ್ವಯಿಸುವುದಿಲ್ಲ.
3. ಒಬ್ಬ ಅಭ್ಯರ್ಥಿಗೆ ಒಂದು ಬಾರಿ ಮಾತ್ರ ಪಿಎಚ್.ಡಿ ಅಧ್ಯಯನಕ್ಕಾಗಿ ಈ ಸೌಲಭ್ಯವನ್ನು ಒದಗಿಸುವುದು.

6) ಡಿ. ದೇವರಾಜ ಅರಸು ವಿದೇಶಿ ವ್ಯಾಸಂಗ ವೇತನ

1) ಭಾರತ ದೇಶದ ಪ್ರಜೆಯಾಗಿದ್ದು, ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2) ಸ್ನಾತಕೋತ್ತರ ಪದವಿ/ಪಿಹೆಚ್.ಡಿ/ಸಂಶೋಧನೆ- ಸಂಬಂಧಪಟ್ಟ ಪದವಿ/ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಠ ಶೇ.70 ಅಂಕಗಳು ಅಥವಾ ಸಮಾನವಾದ ಗ್ರೇಡ್ ಪಡೆದಿರಬೇಕು.
3) **ವಯೋಮಿತಿ:** ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಸರಿಯಾಗಿ ಸ್ನಾತಕೋತ್ತರ ಪದವಿಗೆ 25 ವರ್ಷ ಹಾಗೂ ಪಿಹೆಚ್.ಡಿ ಗೆ 27 ವರ್ಷದ ಮಿತಿಯೊಳಗಿರಬೇಕು.
4) **ಆದಾಯಮಿತಿ:** ವಿದ್ಯಾರ್ಥಿ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷ
5) **ಧನಸಹಾಯದ ಮೊತ್ತ:**

   ಅ) ವಾರ್ಷಿಕವಾಗಿ ಗರಿಷ್ಟ ರೂ.10.00 ಲಕ್ಷ ಅಥವಾ ವಾಸ್ತವ ವೆಚ್ಚ ಇವೆರಡರಲ್ಲಿ ಯಾವುದು ಕಡಿಮೆಯೋ ಆ ಮೊತ್ತವನ್ನು ನೀಡಲಾಗುವುದು.

   ಆ) ಒಂದು ಕುಟುಂಬದ ಒಬ್ಬ ವಿದ್ಯಾರ್ಥಿಗೆ ಮಾತ್ರ ಈ ಧನಸಹಾಯವನ್ನು ನೀಡಲಾಗುವುದು.
6) **ಧನ ಸಹಾಯದ ಅವಧಿ**

   ಅ) ಸ್ನಾತಕೋತ್ತರ ಪದವಿ – ಗರಿಷ್ಠ 2 ವರ್ಷ ಅಥವಾ ಕೋರ್ಸ್ ಮುಕ್ತಾಯದ ಅವಧಿಯಲ್ಲಿ ಯಾವುದು ಮೊದಲೋ ಆ ಅವಧಿಯನ್ನು ಪರಿಗಣಿಸಲಾಗುವುದು.

   ಆ) ಪಿಎಚ್.ಡಿ/ಸಂಶೋಧನೆ – ಗರಿಷ್ಠ 3 ವರ್ಷ ಅಥವಾ ಕೋರ್ಸ್ ಮುಕ್ತಾಯದ ಅವಧಿಯಲ್ಲಿ ಯಾವುದು ಮೊದಲೋ ಆ ಅವಧಿಯನ್ನು ಪರಿಗಣಿಸಲಾಗುವುದು.
7) **ಆಯ್ಕೆ ವಿಧಾನ** – ಮೂರು ಹಂತಗಳನ್ನು ಒಳಗೊಂಡಿದೆ.

   ಅ) ವಿದ್ಯಾರ್ಥಿಯಿಂದ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಕೆ.

   ಆ) ಸಂಬಂಧಪಟ್ಟ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಛೇರಿಯಲ್ಲಿ ಮೂಲ ದಾಖಲೆಗಳ ಪರಿಶೀಲನೆ ಮತ್ತು ಮನೆ ಭೇಟಿ ಮಾಡಿ ಸ್ಥಳ ಪರಿಶೀಲನೆ.

   ಇ) ಸರ್ಕಾರದ ಕಾರ್ಯದರ್ಶಿಗಳು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಸಂದರ್ಶನ.
8) **ನಿಗದಿಪಡಿಸಿರುವ ಮೀಸಲಾತಿ –**

ಪ್ರವರ್ಗ	ಶೇಕಡವಾರು
ಪ್ರವರ್ಗ-1	24%
ಪ್ರವರ್ಗ-2ಎ	46%
ಪ್ರವರ್ಗ-3ಎ	14%
ಪ್ರವರ್ಗ-3ಬಿ	16%
ಒಟ್ಟು	**100%**

ಪ್ರತಿ ಪ್ರವರ್ಗದಲ್ಲಿ ಶೇ.33 ರಷ್ಟು ಮಹಿಳಾ ವಿದ್ಯಾರ್ಥಿಗಳು, ಶೇ.5 ರಷ್ಟು ಗ್ರಾಮೀಣ ಅಭ್ಯರ್ಥಿಗಳು ಮತ್ತು ಶೇ.3 ರಷ್ಟು ವಿಶೇಷ ಚೇತನ ವಿದ್ಯಾರ್ಥಿಗಳಿಗೆ ವಿದೇಶಿ ವ್ಯಾಸಂಗ ವೇತನ ನೀಡಲಾಗುವುದು.

7) ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ 'ಡಿ. ದೇವರಾಜ ಅರಸು ಪ್ರತಿಭಾ ಪುರಸ್ಕಾರ:

1. ಭಾರತದ ಪ್ರಜೆಯಾಗಿದ್ದು, ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು.
2. ಕರ್ನಾಟಕ ಸರ್ಕಾರ ಅಧಿಸೂಚಿಸಿರುವ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿರಬೇಕು.
3. ಶಾಸನಬದ್ಧ ವಿಶ್ವವಿದ್ಯಾಲಯಗಳು/ಅಧೀನಕ್ಕೆ ಒಳಪಡುವ/ಸರ್ಕಾರಿ/ಸ್ಥಳೀಯ ಸಂಸ್ಥೆಗಳು/ ಅನುದಾನಿತ ಸಂಸ್ಥೆಗಳು/ಮಾನ್ಯತೆ ಪಡೆದ ಅನುದಾನ ರಹಿತ ಖಾಸಗಿ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿರಬೇಕು.
4. ಸಮಾನ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ಒಬ್ಬ ವಿದ್ಯಾರ್ಥಿಗೆ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಒದಗಿಸುವುದು.
5. ಕುಟುಂಬದ ಒಟ್ಟು ವಾರ್ಷಿಕ ಆದಾಯಮಿತಿ:
   ಪ್ರವರ್ಗ-1 - ರೂ.2.50 ಲಕ್ಷ.
   ಪ್ರವರ್ಗ-2(ಎ), 3(ಎ) ಮತ್ತು 3(ಬಿ) - ರೂ.1.00 ಲಕ್ಷ.

8) ನಿಲಯಾರ್ಥಿಗಳಿಗೆ ಪ್ರೋತ್ಸಾಹಧನ

1. ವಾರ್ಷಿಕ ಪಬ್ಲಿಕ್ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ನಿಲಯಾರ್ಥಿಗಳು ನಿಗದಿತ ಕಾಲಾವಕಾಶದೊಳಗೆ ಸಂಬಂಧಪಟ್ಟ ವಿದ್ಯಾರ್ಥಿನಿಲಯದ ಮೇಲ್ವಿಚಾರಕರು/ ನಿಲಯಪಾಲಕರ ಮುಖಾಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು/ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಬೇಕು.
2. ನಿಲಯದ ಮೇಲ್ವಿಚಾರಕರು/ನಿಲಯಪಾಲಕರು ಸದರಿ ವಿದ್ಯಾರ್ಥಿನಿಲಯದ ನಿಲಯಾರ್ಥಿಯಾಗಿದ್ದರೆಂದು ಪ್ರಮಾಣೀಕರಿಸಬೇಕು ಮತ್ತು ಅವನ/ಅವಳ ಹೆಸರನ್ನು ಪ್ರೋತ್ಸಾಹಧನ ಮಂಜೂರಾತಿಗಾಗಿ ಶಿಫಾರಸ್ಸು ಮಾಡಬೇಕು.
3. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು ನಿಲಯಾರ್ಥಿಗಳ ಹೆಸರು, ವಿದ್ಯಾರ್ಥಿ ನಿಲಯದ ಹೆಸರು, ಪರೀಕ್ಷೆ ಮತ್ತು ಯಾವ ಪರೀಕ್ಷೆಯಲ್ಲಿ ಅವನು/ಅವಳು ಪ್ರಥಮ ದರ್ಜೆಯನ್ನು ಪಡೆದಿದ್ದಾರೆ ಮುಂತಾದ ಮಾಹಿತಿಯನ್ನೊಳಗೊಂಡು ಕ್ರೋಢೀಕೃತ ಪ್ರಸ್ತಾವನೆಯನ್ನು ತಯಾರಿಸಿ ಅಗತ್ಯ ಮಾಹಿತಿಗಳೊಡನೆ ಮಂಜೂರಾತಿಗಾಗಿ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಸಲ್ಲಿಸಬೇಕು.
4. ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಯನ್ವಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಸ್ತಾವನೆಯನ್ನು ಪರಿಶೀಲಿಸಿ ಮಂಜೂರಾತಿ ಆದೇಶವನ್ನು ನೀಡುವುದು.
5. ನಿಲಯಾರ್ಥಿಗಳು ಹಾಜರುಪಡಿಸುವ ಮೂಲ ಅಂಕಪತ್ರಗಳನ್ನು ಪರಿಶೀಲಿಸಿದ ನಂತರ ಜಿಲ್ಲಾ ಹಿಂದುಳಿದ ವರ್ಗಗಳ ಅಧಿಕಾರಿಗಳು ಹಣವನ್ನು ಖಜಾನೆಯಿಂದ ಪಡೆದು ಸಂಬಂಧಪಟ್ಟವರಿಗೆ ಹಂಚಿಕೆ ಮಾಡುವುದು.

9) IIT/IIM/IISc ಮುಂತಾದ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ

1. ಅಭ್ಯರ್ಥಿಯು ಭಾರತ ದೇಶದ ಪ್ರಜೆಯಾಗಿದ್ದು, ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿರಬೇಕು.
2. ಕೇಂದ್ರ/ರಾಜ್ಯ ಸರ್ಕಾರದ/ಅನುದಾನಿತ ಸಂಸ್ಥೆಗಳ/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಈ ಯೋಜನೆಗೆ ಅರ್ಜಿ ಸಲ್ಲಿಸಲು ಮತ್ತು ಧನಸಹಾಯ ಪಡೆಯಲು ಅರ್ಹರಲ್ಲ.
3. ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಅಥವಾ 3ಬಿ ಗೆ ಸೇರಿದವರಾಗಿರಬೇಕು ಅರ್ಜಿದಾರರ ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷಗಳಿಗೆ ಮೀರಿರಬಾರದು. ಆರ್ಥಿಕವಾಗಿ ಹಿಂದುಳಿದ, ವಾರ್ಷಿಕವಾಗಿ ರೂ.6.00 ಲಕ್ಷಗಳಿಗಿಂತ ಕಡಿಮೆ ಆದಾಯ ಹೊಂದಿರುವ ಸಾಮಾನ್ಯ ಅಭ್ಯರ್ಥಿಗಳು ಸಹ ಈ ಯೋಜನೆಯ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.
4. ಅರ್ಜಿಯೊಂದಿಗೆ ವಿದ್ಯಾರ್ಥಿಗಳು ಸಲ್ಲಿಸಿರುವ ದಾಖಲೆಗಳನ್ನು ಆಯಾ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಿ ಮೂಲ ದಾಖಲೆಗಳನ್ನು ಪರಿಶೀಲಿಸಿಕೊಳ್ಳತಕ್ಕದ್ದು.

5. IIM,IIT,IISC– ಮುಂತಾದ ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡದಿರಬೇಕು.
6. ಆದಾಯ ಮಿತಿ – ಅರ್ಜಿದಾರರು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ ಅಥವಾ 3ಬಿ ಗೆ ಸೇರಿದವರಾಗಿರಬೇಕು. ಅಭ್ಯರ್ಥಿ ಮತ್ತು ಕುಟುಂಬದ ವಾರ್ಷಿಕ ಆದಾಯ ರೂ.6.00 ಲಕ್ಷಗಳಿಗೆ ಮೀರಿರಬಾರದು.
7. IIM,IIT,IISC – ಮುಂತಾದ ಒಟ್ಟು 13 ಪ್ರತಿಷ್ಠಿತ ರಾಷ್ಟ್ರೀಯ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪದವಿ, ಸ್ನಾತಕೋತ್ತರ ಪದವಿ ಹಾಗೂ ಪೂರ್ಣಾವಧಿ ಪಿಹೆಚ್.ಡಿಗಾಗಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದು ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಸದರಿ ಕಾರ್ಯಕ್ರಮದಡಿ ಸೌಲಭ್ಯ ಒದಗಿಸಲಾಗುವುದು.
8. ಈ ಮೇಲ್ಕಂಡ ಸಂಸ್ಥೆಗಳಲ್ಲಿ ಡಿಪ್ಲೊಮಾ, ಪಿಜಿ ಡಿಪ್ಲೊಮಾ ಹಾಗೂ ಇತರೆ ಸರ್ಟಿಫಿಕೇಟ್ ಕೋರ್ಸುಗಳಿಗೆ ಪ್ರವೇಶ ಪಡೆಯುವ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಧನ ಸಹಾಯ ಪಡೆಯಲು ಅರ್ಹರಿರುವುದಿಲ್ಲ.
9. IIM,IIT,IISC ಮುಂತಾದ ಪ್ರತಿಷ್ಠಿತ ಸಂಸ್ಥೆಗಳಲ್ಲಿ ಪ್ರಥಮ ವರ್ಷಕ್ಕೆ ಪ್ರವೇಶ ಪಡೆದ ವಿದ್ಯಾರ್ಥಿಗಳು ತಮ್ಮ ಜೀವಿತಾವಧಿಯಲ್ಲಿ ಒಂದು ಬಾರಿ ಮಾತ್ರ ಈ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.
10. ಈ ಕಾರ್ಯಕ್ರಮವು ವಿದ್ಯಾರ್ಥಿಗಳಿಗೆ ಅವರ ಶಿಕ್ಷಣವನ್ನು ಮುಂದುವರೆಸಲು ಪ್ರೋತ್ಸಾಹ ನೀಡುವ ಕಾರ್ಯಕ್ರಮವಾಗಿದ್ದು, ಈ ಸೌಲಭ್ಯವನ್ನು ಪಡೆಯುವ ವಿದ್ಯಾರ್ಥಿಗಳು ಶುಲ್ಕ ವಿನಾಯಿತಿ ಯೋಜನೆಯಡಿಯು ಸಹ ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

III. ತರಬೇತಿ ಕಾರ್ಯಕ್ರಮಗಳು

1) ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿ

ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ ಐ.ಎ.ಎಸ್, ಕೆ.ಎ.ಎಸ್ ಹಾಗೂ ಬ್ಯಾಂಕ್ ಪ್ರೊಬೇಷನರ್ ಆಫೀಸರ್ಸ್ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿಯನ್ನು ಖಾಸಗಿ ತರಬೇತಿ ಸಂಸ್ಥೆಗಳ ಮೂಲಕ ನೀಡಲಾಗುತ್ತಿದೆ.

ಅರ್ಹತೆಗಳು:

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಹಿಂದುಳಿದ ವರ್ಗಗಳ ಅಭ್ಯರ್ಥಿಯು ಐ.ಎ.ಎಸ್, ಕೆ.ಎ.ಎಸ್ ಅಥವಾ ಬ್ಯಾಂಕ್ ಪ್ರೊಬೇಷನರ್ ಆಫೀಸರ್ಸ್ ಪರೀಕ್ಷೆಗಳ ಪರೀಕ್ಷಾ ಪೂರ್ವ ತರಬೇತಿಗಳಲ್ಲಿ ಯಾವುದಾರೊಂದಕ್ಕೆ ಒಂದು ಬಾರಿ ಮಾತ್ರ ಉಚಿತ ಪರೀಕ್ಷಾ ಪೂರ್ವ ತರಬೇತಿಯನ್ನು ಪಡೆಯಬಹುದು.

1. ಕರ್ನಾಟಕ ರಾಜ್ಯದ ನಿವಾಸಿಯಾಗಿದ್ದು, ಹಿಂದುಳಿದ ವರ್ಗಗಳ ಪ್ರವರ್ಗ-1, 2(ಎ), 3(ಎ) ಅಥವಾ 3(ಬಿ) ಗೆ ಸೇರಿದ ಅರ್ಹ ಅಭ್ಯರ್ಥಿಗಳು online ಮೂಲಕ ಅರ್ಜಿಗಳನ್ನು ಸಲ್ಲಿಸುವುದು.
2. ಅಭ್ಯರ್ಥಿಯ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ಪ್ರವರ್ಗ 1 ರ ಅಭ್ಯರ್ಥಿಗಳಿಗೆ ರೂ.4.50 ಲಕ್ಷ ಹಾಗೂ ಪ್ರವರ್ಗ 2(ಎ), 3(ಎ) ಮತ್ತು 3(ಬಿ) ಅಭ್ಯರ್ಥಿಗಳಿಗೆ ರೂ.3.50 ಲಕ್ಷಗಳು.
3. ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರವನ್ನು ಹೊಂದಿರಬೇಕು.
4. ಅಭ್ಯರ್ಥಿಯು ಯಾವುದಾದರೊಂದು ಅಂಗೀಕೃತ ವಿಶ್ವವಿದ್ಯಾಲಯದ ಪದವೀಧರನಾಗಿರಬೇಕು ಅಥವಾ ಕೇಂದ್ರ ಲೋಕಸೇವಾ ಆಯೋಗ/ಕರ್ನಾಟಕ ಲೋಕಸೇವಾ ಆಯೋಗ/ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು (ಬ್ಯಾಂಕ್) ಕೋರುವ ಷರತ್ತಿಗೊಳಪಟ್ಟಿರಬೇಕು.
5. ಅಭ್ಯರ್ಥಿಯು ಕನಿಷ್ಠ 21 ವರ್ಷ ವಯಸ್ಸಿನವರಾಗಿರಬೇಕು.
6. ಕೇಂದ್ರ/ರಾಜ್ಯ ಸರ್ಕಾರದ/ಅನುದಾನಿತ ಸಂಸ್ಥೆಗಳ/ಸಾರ್ವಜನಿಕ ಸ್ವಾಮ್ಯತೆಗೆ ಒಳಪಟ್ಟ ಸಂಸ್ಥೆಗಳಲ್ಲಿನ ನೌಕರರು ಅರ್ಜಿ ಸಲ್ಲಿಸಲು ಮತ್ತು ತರಬೇತಿ ಪಡೆಯಲು ಅರ್ಹರಲ್ಲ.

2) ಹಿಂದುಳಿದ ವರ್ಗದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಶಿಷ್ಯವೇತನ, ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹ:

ಅವಧಿ:

ಡಿ.ಜಿ.ಎನ್.ಎಂ. – 3 1/2 ವರ್ಷಗಳು.

ಬಿ.ಎಸ್ಸಿ. ನರ್ಸಿಂಗ್ – 4 ವರ್ಷಗಳು.

ಪ್ಯಾರಾ ಮೆಡಿಕಲ್ (ಎಸ್.ಎಸ್.ಎಲ್.ಸಿ) – 3 ವರ್ಷಗಳು.

ಪ್ಯಾರಾ ಮೆಡಿಕಲ್ (ಪಿ.ಯು.ಸಿ) – 2 ವರ್ಷಗಳು.

ಅಭ್ಯರ್ಥಿಗಳಿಗೆ ನಿಗದಿಪಡಿಸಿರುವ ಅರ್ಹತೆ:

1. ಅಭ್ಯರ್ಥಿಗಳ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ಪ್ರವರ್ಗ 1 ರ ಅಭ್ಯರ್ಥಿಗಳಿಗೆ ರೂ.2.50 ಲಕ್ಷ ಹಾಗೂ ಪ್ರವರ್ಗ 2 (ಎ), 3 (ಎ) ಮತ್ತು 3 (ಬಿ) ಅಭ್ಯರ್ಥಿಗಳಿಗೆ ರೂ.1.00 ಲಕ್ಷಗಳು.
2. ಡಿ.ಜಿ.ಎನ್.ಎಂ, ಬಿ.ಎಸ್ಸಿ. ನರ್ಸಿಂಗ್ ಮತ್ತು ಪ್ಯಾರಾ ಮೆಡಿಕಲ್ (ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.) ಅಭ್ಯರ್ಥಿಗಳನ್ನು ಅವರ ಹಿಂದಿನ ವಾರ್ಷಿಕ ಪರೀಕ್ಷೆಯಲ್ಲಿ ಗಳಿಸಿರುವ ಅಂಕಗಳ ಆಧಾರದ ಮೇಲೆ ತರಬೇತಿಗೆ ಆಯ್ಕೆ ಮಾಡಲಾಗುವುದು.

3) ವಿಶ್ವವಿದ್ಯಾಲಯಗಳಲ್ಲಿನ ಹಿಂದುಳಿದ ವರ್ಗಗಳ ಕೋಶಕ್ಕೆ ಅನುದಾನ:

1. ಕರ್ನಾಟಕ ರಾಜ್ಯದ ಸರ್ಕಾರಿ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಕಲ್ಯಾಣಕ್ಕಾಗಿ ಸ್ಥಾಪಿಸಿರುವ ಹಿಂದುಳಿದ ವರ್ಗಗಳ ಕೋಶವನ್ನು ಬಲಪಡಿಸುವುದು.
2. ಹಿಂದುಳಿದ ವರ್ಗಗಳ ಕೋಶದ ಮೂಲಕ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗಾಗಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲು ವಿಶ್ವವಿದ್ಯಾಲಯಗಳಿಗೆ ಧನಸಹಾಯವನ್ನು ಒದಗಿಸುವುದು.

4) ಕಾನೂನು ಪದವೀಧರರಿಗೆ ತರಬೇತಿ

1. ಅಭ್ಯರ್ಥಿಗಳ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ಪ್ರವರ್ಗ 1 ರ ಅಭ್ಯರ್ಥಿಗಳಿಗೆ ರೂ.3.50 ಲಕ್ಷ ಹಾಗೂ ಪ್ರವರ್ಗ 2 (ಎ), 3 (ಎ) ಮತ್ತು 3 (ಬಿ) ಅಭ್ಯರ್ಥಿಗಳಿಗೆ ರೂ.2.50 ಲಕ್ಷಗಳು.
2. ಪ್ರವರ್ಗ–1 ರ ಅಭ್ಯರ್ಥಿಗಳಿಗೆ 31 ವರ್ಷಗಳು ಮತ್ತು ಇತರ ಹಿಂದುಳಿದ ವರ್ಗಗಳ ಅಭ್ಯರ್ಥಿಗಳಿಗೆ 30 ವರ್ಷ ಗರಿಷ್ಠ ವಯೋಮಿತಿ ಇರುತ್ತದೆ.
3. ಅಭ್ಯರ್ಥಿಯು ಬಾರ್ ಕೌನ್ಸಿಲ್‌ನಲ್ಲಿ ಹೆಸರನ್ನು ನೋಂದಾಯಿಸಿರಬೇಕು. ತರಬೇತಿಗೆ ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಕ್ಕೆ ಹಿಂದೆ 2 ವರ್ಷಗಳೊಳಗಾಗಿ ಕಾನೂನು ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
4. ಅವಧಿ: 4 ವರ್ಷಗಳ ಅವಧಿಗೆ ವಕೀಲ ವೃತ್ತಿಯಲ್ಲಿ ತರಬೇತಿ.
5. ಅಭ್ಯರ್ಥಿಗಳ ಸಂಖ್ಯೆ ಪ್ರತಿ ಜಿಲ್ಲೆಯಲ್ಲಿ ಗರಿಷ್ಠ 10 ಅಭ್ಯರ್ಥಿಗಳು (ಜಿಲ್ಲಾವಲಯ ಕಾರ್ಯಕ್ರಮವಾಗಿದೆ).

5) ಹೊಲಿಗೆ ತರಬೇತಿ

1. ಅಭ್ಯರ್ಥಿಯು 7ನೇ ತರಗತಿಯಲ್ಲಿ ತೇರ್ಗಡೆಯಾಗಿರಬೇಕು.
2. ಅಭ್ಯರ್ಥಿಗಳ ಮತ್ತು ಕುಟುಂಬದ ವಾರ್ಷಿಕ ಆದಾಯ ಮಿತಿ ಪ್ರವರ್ಗ 1 ರ ಅಭ್ಯರ್ಥಿಗಳಿಗೆ ರೂ.2.50 ಲಕ್ಷ ಹಾಗೂ ಪ್ರವರ್ಗ 2(ಎ), 3(ಎ) ಅಥವಾ 3(ಬಿ) ಅಭ್ಯರ್ಥಿಗಳಿಗೆ ರೂ.1.00 ಲಕ್ಷಗಳು
3. ಹೊಲಿಗೆ ತರಬೇತಿ ಕೇಂದ್ರಗಳಲ್ಲಿ ನಡೆಸುವ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ಅಭ್ಯರ್ಥಿಗಳು 2 ವರ್ಷದೊಳಗೆ ಮತ್ತೆ ಒಮ್ಮೆ ಪರೀಕ್ಷೆಗೆ ಹಾಜರಾಗಲು ಅವಕಾಶವಿರುತ್ತದೆ.

6) ಭಾರತೀಯ ಸೇನೆಗೆ ಸೇರ ಬಯಸುವ ರಾಜ್ಯದ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ಆಯ್ಕೆಯ ಪೂರ್ವ ಸಿದ್ಧತೆ ಬಗ್ಗೆ ವೃತ್ತಿ ಮಾರ್ಗದರ್ಶನ ಮತ್ತು ತರಬೇತಿ.

1. ಅಭ್ಯರ್ಥಿಯು ಕರ್ನಾಟಕ ರಾಜ್ಯದ ಖಾಯಂ ನಿವಾಸಿಯಾಗಿದ್ದು, ರಾಜ್ಯದ ಹಿಂದುಳಿದ ವರ್ಗಗಳ ಪ್ರವರ್ಗ–1, 2(ಎ), 3(ಎ) ಅಥವಾ 3(ಬಿ) ಗೆ ಸೇರಿರಬೇಕು.

2. ಅಭ್ಯರ್ಥಿಯ ಮತ್ತು ಕುಟುಂಬದ ಒಟ್ಟು ವಾರ್ಷಿಕ ಆದಾಯ ಮಿತಿ – ಪ್ರವರ್ಗ-1ರ ಅಭ್ಯರ್ಥಿಗಳಿಗೆ ರೂ.2.50 ಲಕ್ಷ ಮತ್ತು ಪ್ರವರ್ಗ 2(ಎ), 3(ಎ) ಮತ್ತು 3(ಬಿ) ಗಳ ಅಭ್ಯರ್ಥಿಗಳಿಗೆ ರೂ.1.00 ಲಕ್ಷ.
3. ಭಾರತೀಯ ಸೇನೆಗಳಿಗೆ ನಿಗದಿಪಡಿಸುವ ವಿದ್ಯಾರ್ಹತೆ, ವಯೋಮಿತಿ ಮತ್ತು ಇತರೆ ಅರ್ಹತೆಗಳನ್ನು ಹೊಂದಿರಬೇಕು.

7) ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಮತ್ತು ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತರಬೇತಿ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿರುವ ಅಂತಿಮ ಪದವಿ ಮತ್ತು ಸ್ನಾತಕೋತ್ತರ ಪದವಿಯನ್ನು ಅಧ್ಯಯನ ಮಾಡುತ್ತಿರುವ ಆಸಕ್ತ ವಿದ್ಯಾರ್ಥಿಗಳಲ್ಲಿ ಐ.ಎ.ಎಸ್, ಐ.ಪಿ.ಎಸ್, ಕೆ.ಎ.ಎಸ್, ಬ್ಯಾಂಕಿಂಗ್ ಇತ್ಯಾದಿ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ತಿಳುವಳಿಕೆ ಹೆಚ್ಚಿಸಲು ಮತ್ತು ಮಾರ್ಗದರ್ಶನ ನೀಡಲು ಪ್ರತಿ ಶೈಕ್ಷಣಿಕ ವರ್ಷದಲ್ಲಿ 3 ಬಾರಿ 1 ದಿನದ ಕಾರ್ಯಕ್ರಮವನ್ನು ತಾಲ್ಲೂಕು ಮಟ್ಟದಲ್ಲಿ ಅನುಷ್ಠಾನಗೊಳಿಸುವುದು.

IV. ಅಲೆಮಾರಿ ಮತ್ತು ಅರೆಅಲೆಮಾರಿ ಜನಾಂಗದ ಅಭಿವೃದ್ಧಿ ಕಾರ್ಯಕ್ರಮಗಳು

1) ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ವಿಶೇಷ ಪ್ರೋತ್ಸಾಹಧನ

1. ಹಿಂದುಳಿದ ವರ್ಗಗಳ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಕ್ಕೆ ಸೇರಿದ ವಿದ್ಯಾರ್ಥಿ ಆಗಿರಬೇಕು.
2. ವಿದ್ಯಾರ್ಥಿಯ, ಅವರ ತಂದೆ-ತಾಯಿ ಪಾಲಕರು/ಪೋಷಕರ ವಾರ್ಷಿಕ ಆದಾಯ ರೂ.2.00 ಲಕ್ಷ ಮಿತಿಯೊಳಗಿರಬೇಕು.
3. ವಿದ್ಯಾರ್ಥಿಯು, 1 ರಿಂದ 10ನೇ ತರಗತಿಯವರೆಗೆ, ಸರ್ಕಾರಿ ಅಥವಾ ಸರ್ಕಾರದಿಂದ ಮಾನ್ಯತೆ ಪಡೆದ ಖಾಸಗಿ ಶಿಕ್ಷಣ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರಬೇಕು.
4. ಈ ಯೋಜನೆಯಡಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿ ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
5. ವಿದ್ಯಾರ್ಥಿಯು ಸರ್ಕಾರದ ಇನ್ನಾವುದೇ ಯೋಜನೆಯಿಂದ ವಿದ್ಯಾರ್ಥಿವೇತನ ಅಥವಾ ವಸತಿನಿಲಯ ಸೌಲಭ್ಯವನ್ನು ಪಡೆದಿರಬಾರದು.
6. ಈ ಪ್ರೋತ್ಸಾಹಧನವನ್ನು ನವೀಕರಿಸಲು ವಿದ್ಯಾರ್ಥಿಯು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.

2) ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅರ್ಹತಾ ವಿದ್ಯಾರ್ಥಿವೇತನ

1. ವಿದ್ಯಾರ್ಥಿಯು ಹಿಂದುಳಿದ ವರ್ಗಗಳ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳಿಗೆ ಸೇರಿರಬೇಕು. (ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿರಬೇಕು ಹಾಗೂ ದಿನಾಂಕ: 01-02-1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿರಬೇಕು)
2. ಅಭ್ಯರ್ಥಿಯು ಈ ಯೋಜನೆಯ ಸೌಲಭ್ಯಕ್ಕೆ ಪ್ರಥಮವಾಗಿ ಅರ್ಜಿ ಸಲ್ಲಿಸಲು ಹಿಂದಿನ ತರಗತಿಯ ವಾರ್ಷಿಕ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
3. ಈ ಅರ್ಹತಾ ವಿದ್ಯಾರ್ಥಿ ವೇತನದ ನವೀಕರಣಕ್ಕೆ ವಿದ್ಯಾರ್ಥಿಯು ಹಿಂದಿನ ತರಗತಿ ಪರೀಕ್ಷೆಯ ಎಲ್ಲಾ ವಿಷಯಗಳಲ್ಲಿ ಉತ್ತೀರ್ಣರಾಗಿರಬೇಕು.
4. ವಿದ್ಯಾರ್ಥಿಯು ಪೋಷಕರ/ಪಾಲಕರ ಕುಟುಂಬದ ವಾರ್ಷಿಕ ಆದಾಯ ರೂ.2.50 ಲಕ್ಷಗಳಿಗಿಂತ ಮೀರಿರಬಾರದು.
5. ವಿದ್ಯಾರ್ಥಿಯು ಸರ್ಕಾರದಿಂದ/ ವಿಶ್ವವಿದ್ಯಾಲಯದಿಂದ ಇನ್ಯಾವುದೇ ವಿದ್ಯಾರ್ಥಿವೇತನ ಅಥವಾ ಉಚಿತ ವಿದ್ಯಾರ್ಥಿನಿಲಯ ಸೌಲಭ್ಯ ಪಡೆದಿರಬಾರದು.

3) ಆಶ್ರಮ ಶಾಲೆಗಳ ಪ್ರಾರಂಭ ಹಾಗೂ ನಿರ್ವಹಣೆ:

1. ಹಿಂದುಳಿದ ವರ್ಗಗಳ ಅಲೆಮಾರಿ ಹಾಗೂ ಅರೆಅಲೆಮಾರಿ **ಪಂಗಡಗಳಿಗೆ ಸೇರಿರಬೇಕು.** (ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿರಬೇಕು ಹಾಗೂ ದಿನಾಂಕ: 01-02-1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿರಬೇಕು)
2. 1ನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ವಯಸ್ಸು ಸಾರ್ವಜನಿಕ ಶಿಕ್ಷಣ ಇಲಾಖೆಯು ಪ್ರಾಥಮಿಕ ಶಾಲೆ ಪ್ರವೇಶಕ್ಕೆ ನಿಗದಿಪಡಿಸಿರುವ ಕನಿಷ್ಠ ವಯೋಮಿತಿ ಉಳ್ಳವರಾಗಿರತಕ್ಕದ್ದು.
3. ಈ ಆಶ್ರಮ ಶಾಲೆಗಳಲ್ಲಿ ಶೇ.75 ಭಾಗ ಅಲೆಮಾರಿ ಹಾಗೂ ಅರೆಅಲೆಮಾರಿ ಜನಾಂಗದ ಮಕ್ಕಳಿಗೆ ಕಡ್ಡಾಯವಾಗಿ ಮೀಸಲಿಡಲಾಗಿರುತ್ತದೆ. ಉಳಿದ ಶೇಕಡ 25 ರಷ್ಟು ಸ್ಥಾನಗಳನ್ನು ಈ ಕೆಳಗಿನ ಶೇಕಡವಾರು ಅನುಪಾತದಲ್ಲಿ ಪರಿಶಿಷ್ಠ ಜಾತಿ/ಪರಿಶಿಷ್ಠ ಪಂಗಡ, ಪ್ರವರ್ಗ-1, 2ಎ, 2ಬಿ, 3ಎ ಮತ್ತು 3ಬಿ ಮಕ್ಕಳಿಗೆ ಕಾಯ್ದಿರಿಸಲಾಗುತ್ತದೆ.

ಪ್ರವರ್ಗ	1	2ಎ	2ಬಿ	3ಎ	3ಬಿ	ಎಸ್.ಸಿ.	ಎಸ್.ಟಿ.	ಒಟ್ಟು
ಶೇಕಡವಾರು ಅನುಪಾತ	10	35	09	09	12	21	4	100%

4) ರಾಜ್ಯದ ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ ಸೌಲಭ್ಯ.

ವಿದ್ಯಾರ್ಥಿಗಳು ಹಿಂದುಳಿದ ವರ್ಗಗಳ ಅಲೆಮಾರಿ / ಅರೆ ಅಲೆಮಾರಿ ಜಾತಿಗಳಿಗೆ ಸೇರಿರತಕ್ಕದ್ದು. ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿರಬೇಕು ಹಾಗೂ ದಿನಾಂಕ: 01.02.1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿರಬೇಕು)

ಆದಾಯ ಮಿತಿ: ವಿದ್ಯಾರ್ಥಿಯ ಕುಟುಂಬದ ವಾರ್ಷಿಕ ಆದಾಯ ರೂ.2.00 ಲಕ್ಷದೊಳಗಿರಬೇಕು.

5) ಅರಿವು ಮೂಡಿಸುವ ಕಾರ್ಯಕ್ರಮ:

1. ಗೊಲ್ಲ ಹಾಗೂ ಇತರೆ ಅಲೆಮಾರಿ/ ಅರೆಅಲೆಮಾರಿ ಸಮುದಾಯದವರ ಅತ್ಯಂತ ಹೆಚ್ಚು ಜನಸಂಖ್ಯೆಯುಳ್ಳ ಕಾಲೋನಿ/ ಹಟ್ಟಿಗಳನ್ನು ಅರಿವು ಮೂಡಿಸುವ ಕಾರ್ಯಕ್ರಮಗಳಿಗಾಗಿ ಆಯ್ಕೆ ಮಾಡಲಾಗುವುದು.
2. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ವಾರ್ತಾ ಇಲಾಖೆಯ ಸಹಯೋಗದೊಂದಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಆಯೋಜಿಸುವುದು.
3. ಅಲೆಮಾರಿ/ ಅರೆಅಲೆಮಾರಿ ಸಮುದಾಯದವರಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ / ಇತರೆ ಇಲಾಖೆಗಳಿಂದ ದೊರೆಯುವ ಸವಲತ್ತುಗಳ ಬಗ್ಗೆ ಅರಿವು ಮೂಡಿಸುವುದು.
4. ಗೊಲ್ಲ ಸಮುದಾಯದ ಕಾಲೋನಿಗಳಲ್ಲಿ ಹೆಣ್ಣು ಮಕ್ಕಳ ಹೆರಿಗೆ ಹಾಗೂ ಮಾಸಿಕ ಋತುಚಕ್ರದ ಸಂದರ್ಭದಲ್ಲಿ ಗೊಲ್ಲರಹಟ್ಟಿಯಿಂದ ದೂರವಿಡುವ ಪದ್ಧತಿಯ ವಿರುದ್ಧ ಅರಿವನ್ನು ಮೂಡಿಸುವುದು.
5. ಒಂದು ಕಾರ್ಯಕ್ರಮಕ್ಕೆ ರೂ.10,000/-ದಂತೆ ಅನುದಾನ ಬಿಡುಗಡೆ ಮಾಡಲಾಗುವುದು.

6) ಮೂಲಭೂತ ಸೌಕರ್ಯಗಳು – ಕಾಂಕ್ರಿಟ್ ರಸ್ತೆ ಮತ್ತು ಚರಂಡಿ :

1. ಅಲೆಮಾರಿ / ಅರೆ ಅಲೆಮಾರಿ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಕಾಲೋನಿಗಳು ಹಾಗೂ ಹೊಸದಾಗಿ ನಿರ್ಮಿಸಿರುವ ಬಡಾವಣೆಗಳಲ್ಲಿ ಕಾಂಕ್ರಿಟ್ ರಸ್ತೆ ಮತ್ತು ಚರಂಡಿ ನಿರ್ಮಾಣಕ್ಕಾಗಿ ಬರುವ ಪ್ರಸ್ತಾವನೆಗಳನ್ನು ಕರ್ನಾಟಕ ಅಲೆಮಾರಿ / ಅರೆ ಅಲೆಮಾರಿ ಅಭಿವೃದ್ಧಿ ಮಂಡಳಿಯ ಸಭೆಯಲ್ಲಿ ಮಂಡಿಸಿ, ಅನುದಾನ ಬಿಡುಗಡೆ ಮಾಡುವ ಬಗ್ಗೆ ಚರ್ಚಿಸಿ ತೀರ್ಮಾನ ಕೈಗೊಳ್ಳಲಾಗುವುದು.
2. ಜಿಲ್ಲಾಧಿಕಾರಿಗಳ ಹಂತದಲ್ಲೇ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಅನುಷ್ಠಾನ ಮಾಡುವ ಸಂಸ್ಥೆಗಳನ್ನು ಗುರುತಿಸಿ, ಕಾಮಗಾರಿಯನ್ನು ಅನುಷ್ಠಾನ ಮಾಡಲಾಗುತ್ತದೆ.

7) ವಸತಿ ಯೋಜನೆ

- ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಹಿಂದುಳಿದ ವರ್ಗಗಳ ಅಲೆಮಾರಿ / ಅರೆಅಲೆಮಾರಿ ಜನಾಂಗದ ಎಲ್ಲಾ ಜಾತಿಗಳಿಗೂ ಪ್ರಾತಿನಿಧ್ಯತೆಯನ್ನು ನೀಡುವುದು

(ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿರಬೇಕು ಹಾಗೂ ದಿನಾಂಕ: 01-02-1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿರಬೇಕು)

- ಫಲಾನುಭವಿಯು ಬೇರೆ ಯಾವುದೇ ಯೋಜನೆ ಅಥವಾ ಇಲಾಖೆಯಿಂದ ವಸತಿ ಸೌಲಭ್ಯವನ್ನು ಪಡೆದಿರಬಾರದು.
- ಕನಿಷ್ಠ 20 ವರ್ಷದವರೆಗೆ ಈ ನಿವೇಶನವನ್ನು ಪರಭಾರೆ ಪಡೆತಕ್ಕದ್ದಲ್ಲ. ಈ ಅವಧಿಯಲ್ಲಿ ಪರಭಾರೆ ಮಾಡಿದ್ದಲ್ಲಿ, ಮಾರಾಟ ಮಾಡುವಾಗ ಇದ್ದ ಮಾರುಕಟ್ಟೆ ಬೆಲೆಯನ್ನು ಸರ್ಕಾರಕ್ಕೆ ಪಾವತಿ ಮಾಡಬೇಕು.
- ವಸತಿ ರಹಿತರು ಸ್ವಂತ ನಿವೇಶನ ಹೊಂದಿರಬೇಕು ಹಾಗೂ ನಿವೇಶನವು ಕುಟುಂಬದ ಮಹಿಳೆಯರ/ ಪುರುಷರ ಹೆಸರಿನಲ್ಲಿ ನೊಂದಣಿಯಾಗಿರಬೇಕು.
- ರಾಜೀವ ಗಾಂಧಿ ವಸತಿ ನಿಗಮದ ಮೂಲಕ ಅನುಷ್ಠಾನವಾಗುವ ಎಲ್ಲಾ ವಸತಿ ಯೋಜನೆಗಳ ನಿಯಮಗಳು ಈ ಯೋಜನೆಗೂ ಅನ್ವಯವಾಗುತ್ತದೆ.
- ಕುಟುಂಬದ ಒಟ್ಟು ವಾರ್ಷಿಕ ವರಮಾನ ರೂ.2.00 ಲಕ್ಷದ ಮಿತಿಯೊಳಗೆ ಇರಬೇಕು.

8) ನಿವೇಶನ ರಹಿತರಿಗೆ ವಸತಿ ನಿವೇಶನ ಒದಗಿಸಲು ಜಮೀನು ಖರೀದಿ

- ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಅಲೆಮಾರಿ/ಅರೆಅಲೆಮಾರಿ ಜನಾಂಗದ ಎಲ್ಲಾ ಜಾತಿಗಳಗೂ ಪ್ರಾತಿನಿಧ್ಯತೆಯನ್ನು ನೀಡುವುದು.
  (ಹಾಲಿ ಚಾಲ್ತಿಯಲ್ಲಿರುವ ಹಿಂದುಳಿದ ವರ್ಗಗಳ ಪಟ್ಟಿಯ ಪ್ರವರ್ಗ-1ರಲ್ಲಿ ಸೇರಿಸಲ್ಪಟ್ಟಿರಬೇಕು ಹಾಗೂ ದಿನಾಂಕ: 01-02-1966ರ ಆದೇಶದಲ್ಲಿ ಅಲೆಮಾರಿ ಹಾಗೂ ಅರೆಅಲೆಮಾರಿ ಪಂಗಡಗಳೆಂದು ಗುರ್ತಿಸಲ್ಪಟ್ಟಿರಬೇಕು)
- ಸರ್ಕಾರದ ಆದೇಶ ಸಂ.ಪಿಹೆಚ್‌ಎಸ್ 262 ಎಸ್‌ಇಡಬ್ಲ್ಯೂ 65, ದಿ:1.02.1966 ರಲ್ಲಿ ನಮೂದಿಸಿರುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜನೀನು ಖರೀದಿ ಸಮಿತಿಯಲ್ಲಿ ಸರ್ಕಾರದ ನಿಯಮಾವಳಿ ಅನುಸಾರ ಮಾರ್ಗಸೂಚಿಗಳನ್ವಯ ಜಮೀನು ಖರೀದಿಸಿ ಬಡಾವಣೆ ಅಭಿವೃದಿ ಪಡಿಸಿ ನಿವೇಶನಗಳನ್ನು ಹಂಚುವುದು.
- ಖರೀದಿಗೆ ಪ್ರಸ್ತಾಪಿಸುವ ಜಮೀನು ಯಾವುದೇ ಋಣಭಾರದಿಂದ ಮುಕ್ತವಾಗಿರತಕ್ಕದ್ದು.

IV. ವಿವಿಧ ಸಮುದಾಯಗಳ ಅಭಿವೃದ್ಧಿ

1) ಸಮುದಾಯ ಭವನಗಳ / ಖಾಸಗಿ ವಿದ್ಯಾರ್ಥಿನಿಲಯಗಳ ಕಟ್ಟಡ ನಿರ್ಮಾಣ

1. ಸಹಾಯಧನ ಪಡೆಯುವ ಸಂಸ್ಥೆಯು, ಕರ್ನಾಟಕ ಸಂಘ-ಸಂಸ್ಥೆಗಳ ನೋಂದಣಿ ಕಾಯ್ದೆ 1960 ಅಥವಾ ಟ್ರಸ್ಟ್ ಕಾಯ್ದೆಯನ್ವಯ/ನೋಂದಣಿ ನಿಯಮಗಳನ್ವಯ ನೋಂದಾಯಿತ ಸಂಸ್ಥೆಯಾಗಿರಬೇಕು. ಸಂಸ್ಥೆಯು ನೋಂದಣಿಯಾಗಿ ಕನಿಷ್ಠ 2 ವರ್ಷಗಳಾಗಿರಬೇಕು.
2. ಟ್ರಸ್ಟ್‌ನ ಸದಸ್ಯರು ಬೇರೆ ಬೇರೆ ಕುಟುಂಬಗಳಿಗೆ ಸೇರಿದವರಾಗಿರಬೇಕು.
3. ಸಹಾಯಧನ ಬಯಸುವ ಸಂಘ ಸಂಸ್ಥೆಗಳು/ಟ್ರಸ್ಟ್‌ಗಳು, ಹಿಂದಿನ 2 ವರ್ಷಗಳ ಆಡಿಟ್ ವರದಿಗಳನ್ನು, ಚಾರ್ಟರ್ಡ್ ಅಕೌಂಟೆಂಟ್‌ರವರಿಂದ ಆಡಿಟ್ ಮಾಡಿಸಿ ಅರ್ಜಿಯೊಂದಿಗೆ ಸಲ್ಲಿಸಬೇಕು.
4. ಸಮುದಾಯ ಭವನ/ವಿದ್ಯಾರ್ಥಿ ನಿಲಯದ ಕಟ್ಟಡದ ನಿರ್ಮಾಣಕ್ಕೆ ಅನುದಾನ ಬಯಸುವವರು ಅಂದಾಜು ವೆಚ್ಚದ ಕನಿಷ್ಠ 25 ರಷ್ಟು ಮೊತ್ತವನ್ನು ಅವರ ಸ್ವಂತ ಸಂಪನ್ಮೂಲಗಳಿಂದ ಭರಿಸಬೇಕು.
5. ಸಹಾಯಧನ ಬಯಸುವ ಸಂಘ/ಸಂಸ್ಥೆಗಳು/ಟ್ರಸ್ಟ್‌ಗಳು ಉದ್ದೇಶಿಸಿರುವ ಕಟ್ಟಡ ನಿರ್ಮಾಣಕ್ಕೆ ಸಂಸ್ಥೆಯ ಹೆಸರಿನಲ್ಲಿ ಜಮೀನು/ನಿವೇಶನವನ್ನು ಹೊಂದಿರಬೇಕು ಅಥವಾ ಸರ್ಕಾರಿ/ ಸರ್ಕಾರೇತರ ಸಂಸ್ಥೆಗಳಿಂದ ಕನಿಷ್ಠ 30 ವರ್ಷಗಳಿಗಿಂತ ಕಡಿಮೆ ಇಲ್ಲದ ಅವಧಿಗೆ ಗುತ್ತಿಗೆಗೆ (ಲೀಸ್) ಪಡೆದಿರಬೇಕು.
6. ಕಟ್ಟಡದ ನೀಲ ನಕ್ಷೆಗೆ ಸ್ಥಳೀಯ ಮಹಾನಗರಪಾಲಿಕೆ/ನಗರಸಭೆ / ಪುರಸಭೆ / ಗ್ರಾಮ ಪಂಚಾಯ್ತಿಯಿಂದ ಅನುಮೋದನೆ ಪಡೆದಿರಬೇಕು ಮತ್ತು ಕಟ್ಟಡ ನಿರ್ಮಿಸಲು ಪರವಾನಿಗೆಯನ್ನು ಪಡೆದಿರಬೇಕು

7. ಉದ್ದೇಶಿತ ಕಟ್ಟಡದ ಅಂದಾಜು ಪಟ್ಟಿಯನ್ನು ಸರ್ಕಾರದ ಸಂಸ್ಥೆಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು / ಕಾರ್ಯಪಾಲಕ ಅಭಿಯಂತರರು ಅಥವಾ ಅಂಗೀಕೃತ ಅಭಿಯಂತರರಿಂದ ಅಥವಾ ಅಂಗೀಕೃತ ವಾಸ್ತುಶಿಲ್ಪಿಗಳಿಂದ ಅನುಮೋದಿಸಲ್ಪಟ್ಟಿರಬೇಕು.
8. ಈ ಕೆಳಗಿನ ಪ್ರದೇಶಗಳಲ್ಲಿ ನಿರ್ಮಿಸುವ ಸಮುದಾಯ ಭವನ/ವಿದ್ಯಾರ್ಥಿ ನಿಲಯ ಕಟ್ಟಡಗಳಿಗೆ ಅನುದಾನದ ಗರಿಷ್ಠ ಮಿತಿಯನ್ನು ಕೆಳಕಂಡಂತೆ ನಿಗದಿಪಡಿಸಿದೆ.

ಕ್ರ ಸಂ	ಸ್ಥಳ	ಗರಿಷ್ಠ ಸಹಾಯಧನ
1	ಗ್ರಾಮ ಪಂಚಾಯಿತಿ /ಪಟ್ಟಣ ಪಂಚಾಯಿತಿ	ರೂ.10.00 ಲಕ್ಷ
2	ತಾಲ್ಲೂಕು ಕೇಂದ್ರ ಸ್ಥಾನ,	ರೂ.25.00 ಲಕ್ಷ
3	ಜಿಲ್ಲಾ ಕೇಂದ್ರಸ್ಥಾನ	ರೂ.50.00 ಲಕ್ಷ

9. ಸಹಾಯಧನ ಪಡೆಯಲಿಚ್ಚಿಸುವ ಸಂಸ್ಥೆಗಳು / ಟ್ರಸ್ಟ್‌ಗಳು **ಅನುಬಂಧ-ಆ** ರ' ಅರ್ಜಿ ನಮೂನೆಯಲ್ಲಿ ನಿಗದಿತ ದಾಖಲಾತಿಯೊಂದಿಗೆ, ಅರ್ಜಿಯನ್ನು ಸಂಬಂಧಿಸಿದ ಜಿಲ್ಲೆಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳಿಗೆ ಸಲ್ಲಿಸಬೇಕು.
10. ಒಂದು ಸಂಘ ಅಥವಾ ಸಂಸ್ಥೆಯು ಈ ಕಾರ್ಯಕ್ರಮದಡಿ ಇಲಾಖೆಯಿಂದ ಒಂದು ಸ್ಥಳದಲ್ಲಿ ಒಂದು ಬಾರಿಗೆ ಕಟ್ಟಡ ನಿರ್ಮಾಣ ಮಾಡಲು ಮಾತ್ರ ಸಹಾಯಧನ ಪಡೆಯಲು ಅರ್ಹವಾಗಿರುತ್ತದೆ.
11. ಮಂಜೂರು ಮಾಡಿದ ಸಹಾಯಧನವನ್ನು ಒಂದೇ ಕಂತಿನಲ್ಲಿ ಅಥವಾ ಸರ್ಕಾರದ ಆದೇಶಾನುಸಾರ ಸಂಬಂಧಿಸಿದ ಜಿಲ್ಲಾಧಿಕಾರಿಗಳ ಪಿ.ಡಿ ಖಾತೆ/ಇತರೆ ಖಾತೆಗಳಿಗೆ ಬಿಡುಗಡೆ ಮಾಡುವುದು.
12. ನೇರವಾಗಿ ಸರ್ಕಾರದಿಂದ ಸಹಾಯಧನ ಮಂಜೂರಾದ ಪ್ರಕರಣಗಳಲ್ಲಿ ಮಾರ್ಗಸೂಚಿಯಲ್ಲಿರುವ ದಾಖಲಾತಿಗಳನ್ನು ಆಯಾ ಜಿಲ್ಲಾಧಿಕಾರಿಗಳು ಸಂಸ್ಥೆಗಳಿಂದ ಪಡೆದು ಹಣ ಬಿಡುಗಡೆ ಮಾಡುವುದು.
13. ಸಂಬಂಧಿಸಿದ ಸಂಸ್ಥೆಗೆ, ಕಟ್ಟಡದ ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಜಿಲ್ಲಾಧಿಕಾರಿಗಳ ಹಂತದಲ್ಲಿಯೇ ಮೂರು ಕಂತುಗಳಲ್ಲಿ ಸಹಾಯಧನ'ವನ್ನು 25:50:25 ರ ಅನುಪಾತದಂತೆ ಬಿಡುಗಡೆ ಮಾಡಲಾಗುವುದು.
14. ಕಟ್ಟಡ ನಿರ್ಮಾಣಕ್ಕೆ ಮೊದಲನೇ ಕಂತಿನ ಸಹಾಯಧನ ಪಡೆದ ದಿನಾಂಕದಿಂದ ನಾಲ್ಕು ತಿಂಗಳುಗಳೊಳಗಾಗಿ ಕಟ್ಟಡದ ಕಾಮಗಾರಿಯನ್ನು ಸಂಸ್ಥೆ ಪ್ರಾರಂಭಿಸದಿದ್ದಲ್ಲಿ ಬಿಡುಗಡೆ ಮಾಡಲಾಗಿರುವ ಪೂರ್ಣ ಮೊತ್ತವನ್ನು ಸಂಸ್ಥೆಯಿಂದ ಜಿಲ್ಲಾಧಿಕಾರಿಗಳು ಹಿಂದಕ್ಕೆ ಪಡೆಯತಕ್ಕದ್ದು.
15. ಕಟ್ಟಡ ನಿರ್ಮಾಣಕ್ಕೆ, ಮೊದಲನೇ ಕಂತಿನ ಸಹಾಯಧನ ಪಡೆದ ದಿನಾಂಕದಿಂದ ಮೂರು ವರ್ಷಗಳೊಳಗಾಗಿ, ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸತಕ್ಕದ್ದು. ಅನುಮತಿಯೊಂದಿಗೆ ಒಂದು ವರ್ಷ ಹೆಚ್ಚು ಅವಧಿಯಲ್ಲಿ ಪೂರ್ಣಗೊಳಿಸಬೇಕು.
16. ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳು ಕಟ್ಟಡದ ಕಾಮಗಾರಿಯ ಆರ್ಥಿಕ ಮತ್ತು ಭೌತಿಕ ಪ್ರಗತಿಯ ಬಗ್ಗೆ ವರದಿಯನ್ನು 8 ವಿವಿಧ ಕೋನಗಳಿಂದ ತೆಗೆದ ಛಾಯಾಚಿತ್ರಗಳನ್ನು ಆಧರಿಸಿ ಜಿಲ್ಲಾಧಿಕಾರಿಗಳು ಹಣ ಬಿಡುಗಡೆ ಮಾಡುವುದು.
17. ಸರ್ಕಾರದ ಅನುದಾನ ಪಡೆದು ನಿರ್ಮಿಸುವ ವಿದ್ಯಾರ್ಥಿ ನಿಲಯದ ಕಟ್ಟಡವನ್ನು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಉಪಯೋಗಕ್ಕೆ ಮಾತ್ರ ಬಳಸತಕ್ಕದ್ದು.
18. ಸಮುದಾಯ ಭವನಗಳನ್ನು ನಿರ್ಮಿಸಲು ಹಿಂದುಳಿದ ವರ್ಗಗಳ ಅನುಕೂಲಕ್ಕೋಸ್ಕರ ಅವಶ್ಯಕತೆ ಇರುವ ಗ್ರಾಮಗಳಲ್ಲಿ/ಸ್ಥಳಗಳಲ್ಲಿ ನೋಂದಾಯಿತ ಸಂಘ/ಸ್ವಯಂಸೇವಾ ಸಂಸ್ಥೆಗಳು/ಟ್ರಸ್ಟ್‌ಗಳು ಮುಂದೆ ಬಾರದೆ ಇದ್ದಲ್ಲಿ, ಅಥವಾ ಸಂಸ್ಥೆಗಳು ಇಲ್ಲದಿದ್ದಲ್ಲಿ ಹಿಂದುಳಿದ ವರ್ಗಗಳ ಸಮುದಾಯ ಭವನಗಳು ಆ ಗ್ರಾಮಗಳಲ್ಲಿ ಅವಶ್ಯಕತೆ ಇದ್ದಲ್ಲಿ ಅಂತಹ ಗ್ರಾಮಗಳಲ್ಲಿ ಸರ್ಕಾರಿ ಅಂಗ ಸಂಸ್ಥೆ/ಇಲಾಖೆಗಳ ಮುಖಾಂತರ ನಿರ್ಮಾಣ ಮಾಡುವ ಅಧಿಕಾರವನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ.

ಸಹಾಯಧನವನ್ನು ಮಂಜೂರು ಮಾಡುವ ಅಧಿಕಾರವನ್ನು ಈ ಕೆಳಗಿನಂತೆ ವಹಿಸಲಾಗಿದೆ.

(ಅ) ರೂ.10.00ಲಕ್ಷಗಳವರೆಗೆ - ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

(ಆ) ರೂ.10.00ಲಕ್ಷಗಳಗಿಂತ ಮೇಲ್ಪಟ್ಟು - ರಾಜ್ಯ ಸರ್ಕಾರ

2) ಹಿಂದುಳಿದ ವರ್ಗಗಳ ಜನಾಂಗದ ಸಂಘ-ಸಂಸ್ಥೆಗಳು ನಡೆಸುವ ಅನುದಾನರಹಿತ /ಅನುದಾನಿತ ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಒಂದು ಬಾರಿಗೆ ಅನುದಾನ

(ಅ) ಈ ಕಾರ್ಯಕ್ರಮದಡಿ ಸಹಾಯಧನ ಪಡೆಯಲು ಹಿಂದುಳಿದ ವರ್ಗಗಳ ಪ್ರವರ್ಗ-1, 2ಎ, 3ಎ, ಮತ್ತು 3ಬಿ ಗೆ ಸೇರಿದ ನೊಂದಾಯಿತ ಸಂಘ/ಸ್ವಯಂ ಸೇವಾ ಸಂಸ್ಥೆ/ಟ್ರಸ್ಟ್‌ಗಳು ಅರ್ಹರಿರುತ್ತವೆ.
(ಆ) ಸಂಸ್ಥೆಯು ವಿದ್ಯಾರ್ಥಿನಿಲಯವನ್ನು ಕನಿಷ್ಠ 5 ವರ್ಷಗಳಿಂದ ನಡೆಸುತ್ತಿರಬೇಕು.
(ಇ) ಈ ಕಾರ್ಯಕ್ರಮದಡಿ ಒಂದು ಬಾರಿಗೆ ರೂ.5.00 ಲಕ್ಷಗಳ ಸಹಾಯಧನವನ್ನು ಮಂಜೂರು ಮಾಡುವ ಅಥವಾ ಅವಶ್ಯಕತೆಗೆ ತಕ್ಕಷ್ಟು ಹಣವನ್ನು ಬಿಡುಗಡೆಗೊಳಿಸುವ ಷರತ್ತಿಗೊಳಪಟ್ಟಿದೆ.
(ಈ) ಈ ಕಾರ್ಯಕ್ರಮದಡಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಿಂದ ಅನುದಾನ ಪಡೆಯುತ್ತಿರುವ ಅನುದಾನಿತ ಖಾಸಗಿ ವಿದ್ಯಾರ್ಥಿ ನಿಲಯಗಳು ಹಾಗೂ ಹಿಂದುಳಿದ ವರ್ಗಗಳ ಸಂಘ-ಸಂಸ್ಥೆಗಳು ನಡೆಸುತ್ತಿರುವ ಅನುದಾನ ರಹಿತ ಖಾಸಗಿ ವಿದ್ಯಾರ್ಥಿ ನಿಲಯಗಳ ಕೂಡ ಒಂದು ಬಾರಿಗೆ ಅನುದಾನ ಪಡೆಯಲು ಅರ್ಹರಿರುತ್ತಾರೆ.

3) ದೇವರಾಜ ಅರಸು ಭವನ ನಿರ್ಮಾಣ

ಪ್ರತಿ ತಾಲ್ಲೂಕು ಕೇಂದ್ರದಲ್ಲಿ ರೂ.1.00 ಕೋಟಿ ವೆಚ್ಚದಲ್ಲಿ ಡಿ.ದೇವರಾಜ ಅರಸು ಭವನ ನಿರ್ಮಾಣ ಕಾರ್ಯವನ್ನು ಕೈಗೊಳ್ಳುತ್ತಿದ್ದು, ನಿವೇಶನ ಲಭ್ಯವಾದಂತೆ, ದೇವರಾಜ ಅರಸು ಭವನಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆಯುಕ್ತರು
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ
ಬೆಂಗಳೂರು.

ಅನುಬಂಧ-1

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ, ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ ಮತ್ತು ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮದ ಈ ಕೆಳಕಂಡ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ.

ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ

- ಸ್ವಯಂ ಉದ್ಯೋಗ ಸಾಲ ಯೋಜನೆ
- ಗಂಗಾ ಕಲ್ಯಾಣ ನೀರಾವರಿ ಯೋಜನೆ.
- ಅರಿವು ಶೈಕ್ಷಣಿಕ ಸಾಲ ಯೋಜನೆ.
- ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ.
- ಉದ್ಯಮಶೀಲತಾ ತರಬೇತಿ/ವರತ್ತಿ ತರಬೇತಿ.
- ಬೈಕ್ ಖರೀದಿ ಸಾಲ ಯೋಜನೆ.

ಕರ್ನಾಟಕ ಅಲೆಮಾರಿ/ಅರೆ ಅಲೆಮಾರಿ ಅಭಿವೃದ್ಧಿ ನಿಗಮ

- ಸ್ವಯಂ ಉದ್ಯೋಗ ಸಾಲ ಯೋಜನೆ.
- ಸ್ವ-ಸಹಾಯ ಗುಂಪುಗಳ ಸಾಲ ಮತ್ತು ಉದ್ಯೋಗ ಸಾಲ ಯೋಜನೆ.
- ಬ್ಯಾಂಕ್ ಸಹಯೋಗದೊಂದಿಗೆ ಸ್ವಯಂ ಉದ್ಯೋಗ ಸಾಲ ಯೋಜನೆ.
- ಅರಿವು ಶೈಕ್ಷಣಿಕ ಸಾಲ ಯೋಜನೆ.
- ಭೂ ಖರೀದಿ ಯೋಜನೆ.
- ಗಂಗಾ ಕಲ್ಯಾಣ ನೀರಾವರಿ ಯೋಜನೆ.

ಕರ್ನಾಟಕ ಸವಿತಾ ಸಮಾಜ ಅಭಿವೃದ್ಧಿ ನಿಗಮ

- ಸಾಂಪ್ರದಾಯಿಕ ವೃತ್ತಿದಾರರ ಸಾಲ ಯೋಜನೆ.
- ಸ್ವಯಂ ಉದ್ಯೋಗ ಸಾಲ ಯೋಜನೆ.

ಕರ್ನಾಟಕ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮ

ಅ	ಗ್ರಾಮೀಣಾಭಿವೃದ್ಧಿಯೋಜನೆಯಲ್ಲಿ ಎಷ್ಟುಕಾಮಗಾರಿಗಳಿಗೆಅನುಮೋದನೆ ನೀಡಲಾಗಿದೆ ; ಅವುಗಳ ಅಂದಾಜು ವೆಚ್ಚವೆಷ್ಟು ; (ತಾಲ್ಲೂಕುವಾರು ವಿವರ ನಿಡುವುದು)	2021-22 ನೇ ಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಗ್ರಾಮೀಣಾಭಿವೃದ್ದಿ ಯೋಜನೆಗಳಡಿ ಅನುಮೋದನೆ ನೀಡಲಾದ ಕಾಮಗಾರಿಗಳು ಹಾಗೂ ಅಂದಾಜು ವೆಚ್ಚದ ತಾಲ್ಲೂಕುವಾರು ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣವೆಷ್ಟು ;ಕಾಮಗಾರಿಗಳು ಯಾವ ಹಂತದಲ್ಲಿವೆ ; ಎಷ್ಟುಕಾಮಗಾರಿಗಳು ಯಾವ ಹಂತದಲ್ಲಿವೆ ; ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ ?	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ, ಕಾಮಗಾರಿಗಳ ಹಂತ ಹಾಗೂ ಕಾಮಗಾರಿಗಳ ಪ್ರಗತಿ ವಿವರವನ್ನು ಅನುಬಂಧ-**2,3,4,5,6,7,8 & 9** ರಲ್ಲಿ ಒದಗಿಸಲಾಗಿದೆ.

ಸಂಖ್ಯೆ: ಗ್ರಾಅಪ 138 ಯೋಉಮಾ 2021

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-01

2021-22ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಅನುಮೋದನೆ ನೀಡಲಾದ ಕಾಮಗಾರಿಗಳ ತಾಲ್ಲೂಕುವಾರು ವಿವರ

ರೂ. ಲಕ್ಷಗಳಲ್ಲಿ

ಕ್ರ.ಸಂ	ಯೋಜನೆ	ತಾಲ್ಲೂಕುಗಳು															
		ಚಿಕ್ಕಮಗಳೂರು		ಕಡೂರು		ಕೊಪ್ಪ		ಮೂಡಿಗೆರೆ		ನರಸಿಂಹರಾಜಪುರ		ಶೃಂಗೇರಿ		ಅಜ್ಜಂಪುರ		ತರೀಕೆರೆ	
		ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ	ಅನುಮೋದನೆ ನೀಡಲಾದ ಕಾಮಗಾರಿಗಳ ಸಂಖ್ಯೆ	ಅಂದಾಜು ವೆಚ್ಚ
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	12358	1349.65	15699	13923.57	8156	7944.81	4560	3807.38	2159	2685.55	2283	1644.10	2742	1960.42	7327	4303.38
2	ಸ್ವಚ್ಛ ಭಾರತ ಅಭಿಯಾನ	446	56.52	207	26.19	108	231.21	188	4743.01			-	-	24	32.00	14	26.50
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	103	1240.09	275	2041.62	46	1453.32	97	2312.99	39	1409.33	40	1042.33	7	7.70	190	2137.26
4	ಪಿ.ಎಂ.ಜಿ.ಎಸ್.ವೈ	6	784.54	6	1518.59	5	-	8	1100.12	3	492.27	6	341.66	5	972.26	4	439.19
5	ರಸ್ತೆಗಳು -ಟಾಸ್ಕ್ ಫೋರ್ಸ್			-	-	0	0.00	244	60.44								
6	ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ	2	0.00	0	0	0	0	0	0	1	0	0	0	0	0	0	0
7	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ- ಟಿ.ಎಸ್.ಪಿ ಒಳಗೊಂಡಂತೆ)	0	0.00	6	0.00	0	0	2	0	0	0	4	0	0	0	4	0
8	ಆರ್.ಐ.ಡಿ.ಎಫ್ ನಬಾರ್ಡ್			-	-	0	0.00	9	15.00								
9	ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯ ಮಂತ್ರಿ ಗ್ರಾಮ ವಿಕಾಸ	135	665.00	-	-	50	150.00	114	201.70								
10	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಶ್ಚೇತನ ಕಾರ್ಯಕ್ರಮ	5	25.00	7	30.00	12	11.40	8	14.80	25	11.04	2	7.29	4	7.50	7	17.50
11	ಹಣಕಾಸು ಆಯೋಗದ ಅನುದಾನ	26	63.63	33	76.23	11	26.50	12	40.40	17	21.48	7	12.20	14	25.96	19	35.37
12	ಜಿಲ್ಲಾ ಪಂಚಾಯತಿ ಅಭಿವೃದ್ಧಿ ಅನುದಾನ	170	135.61	88	132.74	46	44.70	134	63.25	56	30.10	25	29.20	93	45.36	84	60.53
13	ಗ್ರಾಮ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಅನುದಾನ)	434	47.00	-	-	134	86.31	45	80.79							0	0.00
14	ತಾಲ್ಲೂಕು ಪಂಚಾಯಿತಿ ಅಭಿವೃದ್ಧಿ ಅನುದಾನ	-	-	-	-	160	201.70					-	-				
15	ಅನಿರ್ಬಂಧಿತ ಅನುದಾನ	179	182.55	101	122.31	819	451.08	114	201.70	93	176.3	114	186.81			76	201.70

ಟಿಪ್ಪಣಿ:3054 ಪಿ.ಎಂ.ಜಿ.ಎಸ್.ವೈ,2702 ಕೆರೆಗಳ ವಾರ್ಷಿಕ ನಿರ್ವಹಣೆ,15 ನೇ ಹಣಕಾಸು ಕ್ರಿಯಾ ಯೋಜನೆ ಅನುಮೋದನೆಗೆ ಸಲ್ಲಿಸಲಾಗಿದೆ.

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-02

2021-2022 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	5328	76	3388	1940	0
2	ಸ್ವಚ್ಛ ಭಾರತ ಅಭಿಯಾನ	446	322	101	23	0
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	103	9	92	2	2000000
4	ಪಿ.ಎಂ.ಜಿ.ಎಸ್.ವೈ	6	0	5	1	0
5	ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ	2	0	2	0	0
6	ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯ ಮಂತ್ರಿ ಗ್ರಾಮ ವಿಕಾಸ	105	68	14	23	
7	ಹಣಕಾಸು ಆಯೋಗದ ಅನುದಾನ	66	57	7	--	--
8	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	170	2	150	18	--
9	ಗ್ರಾಮ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಅನುದಾನ)	413	413			
10	ಅನಿರ್ಬಂಧಿತ ಅನುದಾನ	179	179	-	3	-

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-03

2021-22 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಕಡೂರು ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	3755	160	3595	-	-
2	ಸ್ವಚ್ಛ ಭಾರತ ಅಭಿಯಾನ	207	207	-	-	-
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	275	161	113	1	5000000
4	ಪಿ.ಎಂ.ಜಿ.ಎಸ್.ವೈ	6	1	4	1	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ-ಟಿ.ಎಸ್.ಪಿ ಒಳಗೊಂಡಂತೆ)	6	0	1	5	0
6	ಆರ್.ಐ.ಡಿ.ಎಫ್ ನಬಾರ್ಡ್	3	3	–	–	600000.00
7	ಹಣಕಾಸು ಆಯೋಗದ ಅನುದಾನ	77	71	6		–
8	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	88	–	50	38	–
9	ಅನಿರ್ಬಂಧಿತ ಅನುದಾನ	101	101	-	-	-

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-04

2021-22 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಕೊಪ್ಪ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	3480	1574	1906	0	0
2	ಸ್ವಚ್ಛ ಭಾರತ ಅಭಿಯಾನ	108	74	5	29	0
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	46	4	39	3	15,00,000
4	ಪಿ.ಎಂ.ಜಿ.ಎಸ್.ವೈ	5	0	5	0	0
5	ಸುವರ್ಣ ಗ್ರಾಮೋದಯ/ ಗ್ರಾಮ ವಿಕಾಸ/ ಮುಖ್ಯ ಮಂತ್ರಿ ಗ್ರಾಮ ವಿಕಾಸ	163	62	0	101	0
6	ಹಣಕಾಸು ಆಯೋಗದ ಅನುದಾನ	37	2	28	7	27,00,000
7	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	46	2	38	6	_
8	ಗ್ರಾಮ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಅನುದಾನ)	134	28	60	46	55,71,000
9	ಅನಿರ್ಬಂಧಿತ ಅನುದಾನ	160	3	117	40	9525000

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-05

2021-2022 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಮೂಡಿಗೆರೆ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	1298	538	728	4765	6416695
2	ಸ್ವಚ್ಛ ಭಾರತ ಅಭಿಯಾನ	192	143	50	8	415000
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	6	2	7	19	2800000
4	ಪಿ.ಎಂ.ಜಿ.ಎಸ್.ವೈ	8	0	8	0	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ-ಟಿ.ಎಸ್.ಪಿ ಒಳಗೊಂಡಂತೆ)	2	0	2	0	0
6	ರಾಷ್ಟ್ರೀಯ ಜೈವಾನಿಲ ಅಭಿವೃದ್ಧಿ ಯೋಜನೆ	123	123	0	0	0
7	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಃಶ್ಚೇತನ ಕಾರ್ಯಕ್ರಮ	13	13	0	0	0
8	ಹಣಕಾಸು ಆಯೋಗದ ಅನುದಾನ	6	6	0	0	0
9	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	134	4	120	10	–
10	ಗ್ರಾಮ ಪಂಚಾಯಿತಿ ಅಭಿವೃದ್ಧಿ ಅನುದಾನ (ಶಾಸನಬದ್ಧ ಅನುದಾನ)	88	67	21	0	0
11	ಅನಿರ್ಬಂಧಿತ ಅನುದಾನ	114	0	0	0	0

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-06

2021-22 ನೇ ಸಾಲಿನಲ್ಲಿ, ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ನರಸಿಂಹರಾಜಪುರ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	872	100	772	0	0
2	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	39	11	26	2	1500000
3	ಪಿ.ಎಂ.ಜಿ.ಎಸ್.ವೈ	3	2	1	0	0
4	ಪಿ.ಎಂ.ಜಿ.ಎಸ್.ವೈ. ರಸ್ತೆಗಳ ನಿರ್ವಹಣೆ	1	0	1	0	0
5	ಹಣಕಾಸು ಆಯೋಗದ ಅನುದಾನ	129	7	23	99	0
6	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	56	_	48	8	0
7	ಅನಿರ್ಬಂದಿತ ಅಭಿವೃದ್ಧಿ ಅನುದಾನ	93	0	25	68	0

6

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-07

2021-2022 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಶೃಂಗೇರಿ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ(ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	1013	3	1010	-	ಯಾವುದು ಬಾಕಿ ಇರುವುದಿಲ್ಲ
2	ಸ್ವಚ್ಛ ಭಾರತ ಅಭಿಯಾನ	1	-	-	1	ಯಾವುದು ಬಾಕಿ ಇರುವುದಿಲ್ಲ
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	40	1	37	2	5600000
4	ಪಿ.ಎಂ.ಜಿ.ಎಸ್.ವೈ	6	0	6	0	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ-ಟಿ.ಎಸ್.ಪಿ ಒಳಗೊಂಡಂತೆ)	4	0	4	0	0
6	15ನೇ ಹಣಕಾಸು ಆಯೋಗದ ಅನುದಾನ	24	-	24	0	ಯಾವುದು ಬಾಕಿ ಇರುವುದಿಲ್ಲ
7	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	25	--	12	13	
8	ಅನಿರ್ಬಂಧಿತ ಅನುದಾನ	114	0	114	0	ಯಾವುದು ಬಾಕಿ ಇರುವುದಿಲ್ಲ

7

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-08

2021-2022 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ಅಜ್ಜಂಪುರ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.						
ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ (ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	2742	30	2712	90	-
2	ಸ್ವಚ್ಛ ಭಾರತ ಅಭಿಯಾನ	24	24	0	0	-
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	7	0	7	0	0
4	ಪಿ.ಎಂ.ಜಿ.ಎಸ್.ವೈ	5	0	5	0	0
5	ಹಣಕಾಸು ಆಯೋಗದ ಅನುದಾನ	38	32	6	152	-
6	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	93	...	82	11	

ವಿಧಾನ ಸಭೆಯ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:613

ಅನುಬಂಧ-09

2021-2022 ನೇ ಸಾಲಿನಲ್ಲಿ ನವೆಂಬರ್ 21ರ ಅಂತ್ಯದ ವರೆಗೆ ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ತಾಲ್ಲೂಕಿನಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಯೋಜನೆಗಳಡಿ ಕೈಗೊಂಡ ಕಾಮಗಾರಿಗಳ ಪ್ರಗತಿ ವಿವರ.

ಕ್ರ.ಸಂ.	ಯೋಜನೆ	ಕೈಗೊಂಡ ಕಾಮಗಾರಿಗಳ ಸಂಖ್ಯೆ	ಪೂರ್ಣಗೊಂಡ ಕಾಮಗಾರಿಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿಗಳ ಸಂಖ್ಯೆ	ಪ್ರಾರಂಭಿಸದ ಕಾಮಗಾರಿಗಳ ಸಂಖ್ಯೆ	ಗುತ್ತಿಗೆದಾರರಿಗೆ ಬಾಕಿ ನೀಡಬೇಕಾದ ಹಣ(ರೂ.ಗಳಲ್ಲಿ)
1	ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ	2386	702	1426	258	0
2	ಸ್ವಚ್ಛ ಭಾರತ ಅಭಿಯಾನ	14	3	11	_	_
3	ಗ್ರಾಮೀಣ ನೀರು ಸರಬರಾಜು (ಎನ್.ಆರ್.ಡಿ.ಡಬ್ಲ್ಯೂ.ಪಿ)/ಜೆ.ಜೆ.ಎಂ	190	64	124	2	2500000
4	ಪಿ.ಎಂ.ಜಿ.ಎಸ್.ವೈ	4	0	4	0	0
5	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ, ಎಸ್.ಸಿ.ಪಿ-ಟಿ.ಎಸ್.ಪಿ ಒಳಗೊಂಡಂತೆ)	4	0	0	4	0
6	ಹಣಕಾಸು ಆಯೋಗದ ಅನುದಾನ	43	40	3	_	_
7	ಜಿಲ್ಲಾ ಪಂಚಾಯಿತಿ ಅಭಿವೃದ್ಧಿ ಅನುದಾನ	84	_	70	14	
8	ಅನಿರ್ಬಂಧಿತ ಅನುದಾನ	76	0	0	0	0

9

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 614

ಸದಸ್ಯರ ಹೆಸರು : ಶ್ರೀ ರವಿ ಸಿ.ಟಿ.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಸಾರಿಗೆ ಸಂಸ್ಥೆಯ ಡಿಪೋಗಳಲ್ಲಿ ಸಿಎನ್‌ಜಿ ಇಂಧನ ಒದಗಿಸಲು ಬಂಕ್ ಸ್ಥಾಪಿಸಿರುವ ಕಾರಣವೇನು; ಬಿಎಂಟಿಸಿಯವರಿಗೆ ಸಿಎನ್‌ಜಿ ಬಸ್ ಖರೀದಿಸುವ ಯೋಜನೆ ಇರುವುದೇ ಅಥವಾ ಇಲ್ಲವೇ;	ಕ.ರಾ.ರ.ಸಾ.ನಿಗಮ, ವಾ.ಕ.ರ.ಸಾ.ಸಂಸ್ಥೆ ಮತ್ತು ಕ.ಕ.ರ.ಸಾ.ನಿಗಮಗಳ ಡಿಪೋಗಳಲ್ಲಿ ಸಿಎನ್‌ಜಿ ಇಂಧನ ಒದಗಿಸಲು ಬಂಕ್ ಸ್ಥಾಪಿಸಿರುವುದಿಲ್ಲ. ಸಿಎನ್‌ಜಿ ಬಸ್ಸುಗಳನ್ನು ಆಚರಣೆ ಮಾಡುವ ಉದ್ದೇಶದಿಂದ, ಬೆಂ.ಮ.ಸಾ.ಸಂಸ್ಥೆಯ ಡಿಪೋಗಳಲ್ಲಿ ಸಿಎನ್‌ಜಿ ಇಂಧನದ ಬಂಕ್ ಸ್ಥಾಪಿಸಲು ಮೆ: ಗೇಲ್ ಗ್ಯಾಸ್ ಸಂಸ್ಥೆಗೆ ನೀಡಿದ್ದು, ಸದರಿ ಸಂಸ್ಥೆಯಿಂದ ಸಿಎನ್‌ಜಿ ಇಂಧನದ ಬಂಕ್ ಸ್ಥಾಪಿಸಲಾಗಿರುತ್ತದೆ. ಪ್ರಸ್ತುತ ಬಿ.ಎಂ.ಟಿ.ಸಿ.ಯಲ್ಲಿ ಸಿಎನ್‌ಜಿ ಬಸ್ ಖರೀದಿಸಿರುವುದಿಲ್ಲ. ಕಾರಣಗಳನ್ನು ಮುಂದಿನ ಉಪ ಪ್ರಶ್ನೆಗಳಲ್ಲಿ ವಿವರಿಸಲಾಗಿದೆ.
ಆ.	ಹಾಗಿದ್ದಲ್ಲಿ, ಸಿಎನ್‌ಜಿ ಬಸ್ ಖರೀದಿಗೆ ವಿಳಂಬವಾಗಿರುವುದಕ್ಕೆ ಕಾರಣಗಳೇನು; ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ;	2014-15ರಲ್ಲಿ ಸಿಎನ್‌ಜಿ ಬಸ್ಸುಗಳನ್ನು ಖರೀದಿಸಲು ಜೆಎನ್ ನರ್ಮ್ ಯೋಜನೆ ಅಡಿಯಲ್ಲಿ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರ್‌ನಲ್ಲಿ ಪ್ರತಿ ಬಸ್ಸಿಗೆ ರೂ.84.17 ಲಕ್ಷದಂತೆ ದರ ನೀಡಲಾಗಿತ್ತು. ಆದರೆ, 2014-15ನೇ ಸಾಲಿನಲ್ಲಿ ಡೀಸೆಲ್ ಬಸ್ಸಿನ ದರ ರೂ.27.44 ಲಕ್ಷ ಇದ್ದು,
ಇ.	ಒಂದು ವೇಳೆ ಸಿಎನ್‌ಜಿ ಬಸ್ ಖರೀದಿಸುವ ಯೋಜನೆ ಇಲ್ಲವಾದಲ್ಲಿ ಸಾರಿಗೆ ಸಂಸ್ಥೆಯ ಬಸ್ಸು ಡಿಪೋಗಳಲ್ಲಿ ಸಿಎನ್‌ಜಿ ಇಂಧನ ಒದಗಿಸಲು ಬಂಕ್ ಸ್ಥಾಪಿಸಿರುವ ಉದ್ದೇಶವೇನು?	ಸಂಸ್ಥೆಯ ತಾಂತ್ರಿಕ ತಂಡವು BEST (Brihan Mumbai Electric Supply and Transport) ಗೆ ಭೇಟಿ ನೀಡಿ, ಸಿಎನ್‌ಜಿ ಬಸ್ಸುಗಳ ಕುರಿತು ಅಧ್ಯಯನ ಮಾಡಿ, ಸಿಎನ್‌ಜಿ ಬಸ್ಸುಗಳ ದರವು ಡೀಸೆಲ್ ಬಸ್ಸಿಗಿಂತ ಬಹಳ ಹೆಚ್ಚಾಗಿರುವ ಕಾರಣ ಹಾಗೂ ಸಿಎನ್‌ಜಿ ಬಸ್ಸುಗಳ ದರ ಮತ್ತು ನಿರ್ವಹಣೆ ವೆಚ್ಚ ಡೀಸೆಲ್ ಬಸ್ಸುಗಳಿಗಿಂತ ಹೆಚ್ಚಾಗುವುದರಿಂದ, ಸದ್ಯಕ್ಕೆ ಸಿಎನ್‌ಜಿ ಬಸ್ಸುಗಳನ್ನು ಖರೀದಿಸುವುದು ಸೂಕ್ತವಾಗಿರುವುದಿಲ್ಲವೆಂದು ಅಭಿಪ್ರಾಯಿಸಿರುವ ಹಿನ್ನೆಲೆಯಲ್ಲಿ,

		ಹಲವಾರು ಬಾರಿ ಈ ಕುರಿತು ಚರ್ಚಿಸಿ, ಸಿಎನ್‌ಜಿ ಬಸ್ಸುಗಳನ್ನು ಖರೀದಿಸಿರುವುದಿಲ್ಲ. ಸಿಎನ್‌ಜಿ ಬಸ್ಸುಗಳ ಅಳವಡಿಕೆಯಿಂದ ಮೂರು ವಿಧದ ಇಂಧನ ವ್ಯವಸ್ಥೆಯನ್ನು ಸಂಸ್ಥೆಯಲ್ಲಿ ಅಳವಡಿಸಬೇಕಾಗುತ್ತದೆ. ಬಿಎಸ್-6 ಡೀಸೆಲ್, ಎಲೆಕ್ಟ್ರಿಕ್ ಹಾಗೂ ಸಿಎನ್‌ಜಿ ಇವುಗಳಿಂದ ಹೆಚ್ಚುವರಿ ದಾಸ್ತಾನು ಹಾಗೂ ವಿವಿಧ ಮಾದರಿಯ ಮೂಲ ಸೌಕರ್ಯಗಳನ್ನು ಸ್ಥಾಪಿಸಬೇಕಾಗಿರುತ್ತದೆ. ಸರ್ಕಾರದ ಆದೇಶದಂತೆ ಏಪ್ರಿಲ್-2020 ರಿಂದ ಬಿಎಸ್-6 ವಾಹನಗಳನ್ನು ಖರೀದಿಸಬೇಕಾಗಿದ್ದು, ಅದರಂತೆ ಪ್ರಸ್ತುತ ಸಂಸ್ಥೆಯು ಬಿಎಸ್-6 ಬಸ್ಸುಗಳನ್ನು ಖರೀದಿಸುತ್ತಿದ್ದು, ಬಿಎಸ್-6 ಡೀಸೆಲ್ ಬಸ್ಸುಗಳ emission norm ಕಡಿಮೆ ಇರುತ್ತದೆ. ಇದಲ್ಲದೇ ಸಂಸ್ಥೆಯು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರದ ಆರ್ಥಿಕ ಸಹಾಯದೊಂದಿಗೆ ಎಲೆಕ್ಟ್ರಿಕ್ ಬಸ್ಸುಗಳನ್ನು ಆಚರಣೆ ಮಾಡಲು ಯೋಜಿಸಲಾಗಿರುತ್ತದೆ.

ಸಂಖ್ಯೆ: ಟಿಡಿ 272 ಟಿಸಿಕ್ಯೂ 2021

(ಬಿ. ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	615
ಮಾನ್ಯ ಸದಸ್ಯರ ಹೆಸರು	ಶ್ರೀ ತುಕಾರಾಮ್ ಈ. (ಸಂಡೂರ್)
ಉತ್ತರಿಸಬೇಕಾದ ದಿನಾಂಕ	15.12.2021
ಉತ್ತರಿಸುವ ಸಚಿವರು	ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಸಂಡೂರು ತಾಲ್ಲೂಕಿನ ವಡ್ಡು ಗ್ರಾಮದಲ್ಲಿರುವ ಕನಕ ಭವನ, ಕುಡಿತಿನಿ ಪಟ್ಟಣದಲ್ಲಿರುವ ಬಲಿಜ ಭವನ ಹಾಗೂ ಸಂಡೂರು ಪಟ್ಟಣದಲ್ಲಿರುವ ಆರ್ಯವೈಶ್ಯ ಭವನಗಳು ಅಪೂರ್ಣಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ, ವಡ್ಡು ಗ್ರಾಮದಲ್ಲಿರುವ ಕನಕ ಭವನ ಹಾಗೂ ಕುಡಿತಿನಿ ಪಟ್ಟಣದಲ್ಲಿರುವ ಬಲಿಜ ಭವನಗಳ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ. ಸಂಡೂರು ಪಟ್ಟಣದಲ್ಲಿರುವ ಆರ್ಯವೈಶ್ಯ ಭವನ ನಿರ್ಮಾಣಕ್ಕೆ ಅನುದಾನ ಮಂಜೂರಾತಿ ಕುರಿತಂತೆ ಯಾವುದೇ ಪ್ರಸ್ತಾವನೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯಲ್ಲಿ ಸ್ವೀಕೃತವಾಗಿರುವುದಿಲ್ಲ. ಸಾಮಾನ್ಯ ವರ್ಗಕ್ಕೆ ಸೇರಿದ ಸಂಘ/ಸಂಸ್ಥೆಗಳಿಗೆ ಅನುದಾನ ಮಂಜೂರು ಮಾಡಲು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮಾರ್ಗಸೂಚಿಗಳಲ್ಲಿ ಅವಕಾಶವಿರುವುದಿಲ್ಲ.
ಆ	ಬಂದಿದ್ದಲ್ಲಿ, ಸದರಿ ಭವನಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು. ?	ಬಳ್ಳಾರಿ ಜಿಲ್ಲೆ ಸಂಡೂರು ತಾಲ್ಲೂಕಿನ, ವಡ್ಡು ಗ್ರಾಮದಲ್ಲಿರುವ ಕನಕ ಭವನ ಹಾಗೂ ಕುಡಿತಿನಿ ಪಟ್ಟಣದಲ್ಲಿರುವ ಬಲಿಜ ಭವನಗಳ ನಿರ್ಮಾಣಕ್ಕೆ ತಲಾ ರೂ.50.00ಲಕ್ಷಗಳು ಮಂಜೂರಾಗಿದ್ದು, ಈ ಸಂಬಂಧ ಈಗಾಗಲೇ ಮೊದಲನೇ ಕಂತಾಗಿ ತಲಾ ರೂ.12.50 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸದರಿ ಅನುದಾನಕ್ಕೆ ಹಣ ಬಳಕೆ ಪ್ರಮಾಣ ಪತ್ರ ಮತ್ತು ಪ್ರಗತಿ ವರದಿ ಸಲ್ಲಿಸುತ್ತಾ, ಬಾಕಿ ಅನುದಾನ ಬಿಡುಗಡೆ ಮಾಡುವಂತೆ ಕೋರಿದ್ದು, ಈ ಭವನಗಳ ಕಾಮಗಾರಿಗಳಿಗೆ 2ನೇ ಕಂತಿನ ಅನುದಾನ ಬಿಡುಗಡೆಗೊಳಿಸಲು ಸದರಿ ಯೋಜನೆಯಡಿಯಲ್ಲಿ ಲಭ್ಯವಿರುವ ಅನುದಾನ ಹಾಗೂ ರಾಜ್ಯದ ಒಟ್ಟಾರೆ ಬೇಡಿಕೆಯನ್ನಾಧರಿಸಿ 2ನೇ ಕಂತಿನ ಅನುದಾನ ಬಿಡುಗಡೆಗೊಳಿಸಲಾಗುವುದು.

ಸಂಖ್ಯೆ:ಹಿಂವಕ 740 ಬಿಎಂಎಸ್ 2021

(ಕೋಟ ಶ್ರೀನಿವಾಸ ಪೂಜಾರಿ)
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 616
ಉತ್ತರಿಸಬೇಕಾದ ದಿನಾಂಕ : 15.12.2021
ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್. ಎನ್. (ದೇವನಹಳ್ಳಿ)
ಉತ್ತರಿಸುವ ಸಚಿವರು : ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು.

ಕ್ರಸ	ಪ್ರಶ್ನೆ	ಉತ್ತರ
ಅ)	ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ದೇವನಹಳ್ಳಿಯಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಂತರ ರಾಷ್ಟ್ರೀಯ ಗುಣಮಟ್ಟದ ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಸೃಜಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; (ಮಾಹಿತಿ ನೀಡುವುದು)	ಹೌದು. ಸನ್ಮಾನ್ಯ ಮುಖ್ಯಮಂತ್ರಿಗಳು 2021-22ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ: 277 ರಲ್ಲಿ ದೇವನಹಳ್ಳಿಯಲ್ಲಿ ಫುಟ್ಬಾಲ್, ಹಾಕಿ, ಶೂಟಿಂಗ್, ಈಜು ಮತ್ತು ಟೆನ್ನಿಸ್ ಕ್ರೀಡೆಗಳಿಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾ ಮೂಲಸೌಕರ್ಯಗಳನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕಲ್ಪಿಸುವುದಾಗಿ ಘೋಷಿಸಿರುತ್ತಾರೆ.
ಆ)	ಹಾಗಾದರೆ, ಪ್ರಸ್ತಾವನೆ ಯಾವ ಹಂತದಲ್ಲಿದೆ; ಇದಕ್ಕಾಗಿ ಖರ್ಚು ಮಾಡುವ ಮೊತ್ತವೆಷ್ಟು; (ನಿರ್ಮಾಣವಾಗಲಿರುವ ಕಟ್ಟಡದ ವಿವರದೊಂದಿಗೆ ಪೂರ್ಣ ಮಾಹಿತಿ ನೀಡುವುದು)	ದೇವನಹಳ್ಳಿಯ ತಾಲ್ಲೂಕು ಕ್ರೀಡಾಂಗಣವನ್ನು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿ, ಕ್ರೀಡಾ ಮೂಲಸೌಕರ್ಯ ಕಲ್ಪಿಸುವ ಬಗ್ಗೆ ವಿವರವಾದ ಯೋಜನಾ ವರದಿ ಸಿದ್ಧಪಡಿಸಲು Infrastructure Development Corporation (Karnataka) Limited (iDeck) ಸಂಸ್ಥೆಯನ್ನು ಸಲಹಾ ಸಂಸ್ಥೆಯಾಗಿ ನೇಮಿಸಲಾಗಿದೆ. ಸದರಿ ಸಂಸ್ಥೆ ವಿವರವಾದ ಅಧ್ಯಯನ ಕೈಗೊಂಡು, ಯೋಜನೆಯ ಕರಡು ರೂಪು-ರೇಷೆ, ಆರ್ಥಿಕ ಕಾರ್ಯಸಾಧ್ಯತಾ ವರದಿ (Draft Project Structuring & Feasibility Report) ತಯಾರಿಸಿ ಸಲ್ಲಿಸಿದ್ದು, ಸೈಕ್ಲಿಂಗ್ ವೆಲೋಡ್ರೋಮ್, ಫುಟ್ಬಾಲ್ ಅಂಕಣ, ಈಜುಕೊಳ, ಕ್ರೀಡಾ ವಸತಿ ನಿಲಯ ಮತ್ತಿತರ ಮೂಲಸೌಕರ್ಯಗಳ ಸೃಜನೆಯನ್ನು ರೂ.50.12 ಕೋಟಿ ವೆಚ್ಚದಲ್ಲಿ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸುವ ಬಗ್ಗೆ ಪ್ರಸ್ತಾಪಿಸಿರುತ್ತಾರೆ. ಸದರಿ ಯೋಜನಾ ವರದಿಯು ಪರಿಶೀಲನೆಯಲ್ಲಿದೆ.
ಇ)	ಹಾಗಾದರೆ, ಯಾವ ಕಾಲಮಿತಿಯಲ್ಲಿ ಕ್ರೀಡಾ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ, ಕ್ರೀಡಾಪಟುಗಳಿಗೆ ತರಬೇತಿಗೆ ಅನುಕೂಲ ಕಲ್ಪಿಸಲಾಗುವುದು? (ಪೂರ್ಣ ವಿವರ ನೀಡುವುದು)	ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಕ್ರೀಡಾಂಗಣ ಅಭಿವೃದ್ಧಿಪಡಿಸಲು ಟೆಂಡರ್ ಪ್ರಕ್ರಿಯೆಯನ್ನು ಅಂದಾಜು ಆರು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ. ಸೂಕ್ತ ಖಾಸಗಿ ಭಾಗೀದಾರರನ್ನು ಆಯ್ಕೆ ಮಾಡಿದ ನಂತರ ಕ್ರೀಡಾ ಮೂಲಸೌಕರ್ಯಗಳ ಸೃಜನೆಗೆ ಅಂದಾಜು 18 ತಿಂಗಳ ಕಾಲಾವಕಾಶ ಅಗತ್ಯವಿರುತ್ತದೆ.

ವೈಎಸ್ ಡಿ-/ಇಬಿಬಿ/185/2021

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 617

ಸದಸ್ಯರ ಹೆಸರು : ಶ್ರೀ ನಿಸರ್ಗ ನಾರಾಯಣ ಸ್ವಾಮಿ ಎಲ್.ಎನ್.

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ದೇವನಹಳ್ಳಿ ಪಟ್ಟಣದಲ್ಲಿ ಬಿ.ಎಂ.ಟಿ.ಸಿ. ಬಸ್ ಡಿಪೋ ನಿರ್ಮಾಣವಾಗಿ ವರ್ಷವೇ ಕಳೆದರು ಸಾರ್ವಜನಿಕರ ಅನುಕೂಲಕ್ಕೆ ಪ್ರಾರಂಭಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೇ;(ಮಾಹಿತಿ ನೀಡುವುದು)	ಸರ್ಕಾರದ ಗಮನಕ್ಕೆ ಬಂದಿರುತ್ತದೆ.
ಆ.	ಹಾಗಾದರೇ, ಕಾಮಗಾರಿ ಪೂರ್ಣಗೊಂಡು ಸಾರ್ವಜನಿಕ ಸೇವೆಗೆ ಮುಕ್ತವಾಗಿದ್ದರು, ಸರ್ಕಾರ ಉದ್ಘಾಟನೆ ಮಾಡಿ, ಸಾರ್ವಜನಿಕರಿಗೆ ಅನುಕೂಲ ಕಲ್ಪಿಸಲು ಇರುವ ಪ್ರಮುಖ ಕಾರಣಗಳೇನು; (ಪೂರ್ಣ ವಿವರ ನೀಡುವುದು)	ಬೆಂ.ಮ.ಸಾ.ಸಂಸ್ಥೆಯಿಂದ ದೇವನಹಳ್ಳಿ ಹೊಸ ಘಟಕವನ್ನು ಕಾರ್ಯಾಚರಣೆಗೊಳಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳುವುದು ಬಾಕಿ ಇರುತ್ತದೆ. • ಡೀಸೆಲ್ ಬಂಕ್ ಕಮಿಷನಿಂಗ್ ಮಾಡುವುದು. • ಎಲೆಕ್ಟ್ರಿಕಲ್ ಕನೆಕ್ಷನ್ ನೀಡುವುದು. • ಬಸ್ಸುಗಳು ಘಟಕಕ್ಕೆ ಚಲಿಸಲು ರಸ್ತೆಯನ್ನು ದುರಸ್ಥಿ ಮಾಡುವುದು. • ಅಗತ್ಯ ಪೀಠೋಪಕರಣಗಳನ್ನು ಒದಗಿಸುವುದು. • ಘಟಕ ವ್ಯವಸ್ಥಾಪಕರು, ಸಿಬ್ಬಂದಿಗಳನ್ನು ನಿಯೋಜಿಸುವುದು. • ಬಸ್ಸುಗಳ ನಿರ್ವಹಣೆಗೆ ಅಗತ್ಯವಾದ ಯಂತ್ರೋಪಕರಣಗಳನ್ನು ಒದಗಿಸುವುದು. ಮೇಲಿನ ಅಂಶಗಳ ಕುರಿತು ಕ್ರಮ ಜಾರಿಯಲ್ಲಿದ್ದು, ದೇವನಹಳ್ಳಿ ಹೊಸ ಘಟಕವನ್ನು ಜನವರಿ-2022ರ ಮಾಹೆಯ ಅಂತ್ಯದಲ್ಲಿ ಪ್ರಾರಂಭಿಸಲಾಗುವುದು.
ಇ.	ಹಾಗಿದ್ದಲ್ಲಿ, ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವಿಜಯಪುರದ	ದೇವನಹಳ್ಳಿ ವಿಧಾನಸಭಾ ಕ್ಷೇತ್ರದ ವಿಜಯಪುರದಲ್ಲಿ ಮುಂದಿನ ದಿನಗಳ ಸಾರಿಗೆ ಅವಶ್ಯಕತೆಗಾಗಿ ಘಟಕ ನಿರ್ಮಿಸುವ

	ಬಸಪ್ಪನತೋಪಿನ ಜಮೀನು ಕೆ.ಎಸ್.ಆರ್.ಟಿ.ಸಿ. ಡಿಪೋ ಕಟ್ಟಲು ಸರ್ಕಾರಕ್ಕೆ ನೀಡಿದ್ದು, ಇದುವರೆವಿಗೂ ಡಿಪೋ ನಿರ್ಮಾಣ ಮಾಡದಿರಲು ಇರುವ ತೊಡಕುಗಳೇನು? (ಪೂರ್ಣ ಮಾಹಿತಿ ನೀಡುವುದು)	ಉದ್ದೇಶದಿಂದ ನಿವೇಶನವನ್ನು ಕ.ರಾ.ರ.ಸಾ.ನಿಗಮಕ್ಕೆ ಪಡೆಯಲಾಗಿರುತ್ತದೆ. ಪ್ರಸ್ತುತ ಕೋವಿಡ್-19ರ ಸಾಂಕ್ರಾಮಿಕದಿಂದಾಗಿ ನಿಗಮವು ತೀವ್ರ ಆರ್ಥಿಕ ಸಂಕಷ್ಟದಲ್ಲಿದ್ದು, ಯಾವುದೇ ನೂತನ ಬಸ್ ಘಟಕ ಮತ್ತು ಬಸ್ ನಿಲ್ದಾಣ ನಿರ್ಮಾಣ/ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಕಷ್ಟಸಾಧ್ಯವಾಗಿರುತ್ತದೆ. ಮುಂದಿನ ದಿನಗಳಲ್ಲಿ ನಿಗಮದ ಆರ್ಥಿಕ ಪರಿಸ್ಥಿತಿಯು ಸುಧಾರಿಸಿದ ನಂತರ ಕ.ರಾ.ರ.ಸಾ.ನಿಗಮದಿಂದ ಬಸ್ ನಿಲ್ದಾಣ/ಬಸ್ ಘಟಕ ನಿರ್ಮಾಣ ಕೈಗೊಳ್ಳುವ ಬಗ್ಗೆ ಹೊರಡಿಸಲಾದ ಮಾರ್ಗಸೂಚಿ ಸುತ್ತೋಲೆ ಸಂಖ್ಯೆ: ಸಂ/01/2015-16 ದಿ:06-06-2015 ರ ಪ್ರಕಾರ ಸಾರಿಗೆ ಅವಶ್ಯಕತೆಗಳನ್ನು ಆಧರಿಸಿ ಬಸ್ ಘಟಕ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಸಂಖ್ಯೆ: ಟಿಡಿ 273 ಟಿಸಿಕ್ಯೂ 2021

(ಬಿ.ಶ್ರೀರಾಮುಲು)
ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ
ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	618
ಸದಸ್ಯರ ಹೆಸರು	ಶ್ರೀ ನಿಸರ್ಗ ನಾರಾಯಣಸ್ವಾಮಿ (ದೇವನಹಳ್ಳಿ)
ಉತ್ತರಿಸಬೇಕಾದ ದಿನಾಂಕ	15.12.2021

ಕ್ರಸಂ	ಪ್ರಶ್ನೆಗಳು	ಉತ್ತರ
ಅ.	ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಅಕಾಲಿಕ ಮಳೆಗೆ ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಮಾಹಿತಿ ಒದಗಿಸುವುದು)	ಹೌದು, ಬಂದಿದೆ.
ಆ.	ಬಂದಿದ್ದಲ್ಲಿ, ಯಾವ ಯಾವ ರಸ್ತೆಗಳು ಹಾಳಾಗಿವೆ; ಅವುಗಳ ದುರಸ್ತಿಗಾಗಿ ಸರ್ಕಾರ ಅನುದಾನ ಬಿಡುಗಡೆಗೆ ಕೈಗೊಂಡಿರುವ ಕ್ರಮಗಳೇನು; (ಮಾಹಿತಿ ನೀಡುವುದು)	ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಳೆಯಿಂದ 31.31 ಕಿ.ಮೀ. ಉದ್ದದ ರಸ್ತೆ ಮತ್ತು ಸೇತುವೆಗಳು ಹಾನಿಗೊಳಗಾಗಿದ್ದು, ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ದುರಸ್ತಿಗಾಗಿ ಅನುದಾನವನ್ನು ಒದಗಿಸುವಂತೆ ಕಂದಾಯ ಇಲಾಖೆ (ಪ್ರಕೃತಿ ವಿಕೋಪ) ಮತ್ತು ಆರ್ಥಿಕ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.
ಇ.	ಹಾಗಾದರೆ ಯಾವ ಕಾಲಮಿತಿಯಲ್ಲಿ ರಸ್ತೆ ದುರಸ್ತಿಗೆ ಅನುದಾನ ಬಿಡುಗಡೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ? (ವಿವರ ನೀಡುವುದು)	ಆರ್ಥಿಕ ಇಲಾಖೆಯು ಒದಗಿಸುವ ಅನುದಾನ ಲಭ್ಯತೆಯನ್ನಾಧರಿಸಿ ಮಳೆಯಿಂದ ಹಾಳಾದ ರಸ್ತೆ ಕಾಮಗಾರಿಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಬೇಕಿದೆ.

ಕಡತ ಸಂಖ್ಯೆ: ಗ್ರಾಅಪ:ಅಗ--15ವಿಸ/16:ಆರ್‌ಆರ್‌ಸಿ:2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕರ್ನಾಟಕ ಸರ್ಕಾರ

ಕಾರ್ಯಪಾಲಕ ಅಭಿಯಂತರರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,ಬೆಂಗಳೂರು(ಗ್ರಾ)

ಆನಂದರಾವ್ ವೃತ್ತ, ಬೆಂಗಳೂರು

ದೂ: 080-22371823 ಇ.ಮೇಲ್:ee.predbr@gmail.com

ಸಂ:ಕಾಅ:ಪಂರಾಇಂವಿ:ಬೆಂಗ್ರಾ:ಕಿಇಂ-2/2021-22 1351 2-12-21 ದಿನಾಂಕ :

ರವರಿಗೆ,

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಜಿಲ್ಲಾಧಳಿತ ಭವನ, ಬೀರಸಂದ್ರ,

ಮಾನ್ಯರೆ,

ವಿಷಯ :- 2021-22ನೇ ಸಾಲಿನಲ್ಲಿ ಸುರಿದ ಭಾರಿ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ವಿವರಗಳನ್ನು ಸಲ್ಲಿಸುವ ಬಗ್ಗೆ

ಉಲ್ಲೇಖ:- 1 ತಮ್ಮ ಕಚೇರಿ ಪತ್ರದ ಸಂ: ಬೆಂಗ್ರಾಜಿಪಂ/ಅಭಿ-2/ಸಿಆರ್-34/2019-20 ದಿನಾಂಕ: 26-11-2021

2 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಉಪವಿಭಾಗ, ದೇವನಹಳ್ಳಿ ಇವರ ಪತ್ರದ ಸಂ: 396 ದಿನಾಂಕ: 02-12-2021

-0-0-0-

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಬೆಂಗಳೂರು ಗ್ರಾಮಾಂತರ ಜಿಲ್ಲಾ ವ್ಯಾಪ್ತಿಯಲ್ಲಿ ಇತ್ತೀಚಿಗೆ ಸುರಿದ ಭಾರಿ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ಸ್ಥಳಗಳನ್ನು ಪರಿಶೀಲಿಸಿ ವಾಸ್ತವಿಕವಾಗಿ ಹಾನಿಯಾಗಿರುವ ಬಗ್ಗೆ ಅಂದಾಜಿಸಿ ಛಾಯಾಚಿತ್ರ ಸಮೇತ, ಅಕ್ಷಾಂಶ ಮತ್ತು ರೇಖಾಂಶ ಮಾಹಿತಿಯೊಂದಿಗೆ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಉಲ್ಲೇಖಿತ (1)ರ ತಮ್ಮ ಕಚೇರಿ ಪತ್ರದಲ್ಲಿ ಸೂಚಿಸಿದ ಹಿನ್ನಲೆಯಲ್ಲಿ ಉಲ್ಲೇಖ(2)ರ ಪತ್ರದಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ. ಕಾಮಗಾರಿಗಳ ವಿವರ ಕೆಳಕಂಡಂತಿದೆ.

ಕ್ರ.ಸಂ	ಕಾಮಗಾರಿಗಳ ಹೆಸರು	ಅಂದಾಜು ಮೊತ್ತ
01	ದೇವನಹಳ್ಳಿ ತಾಲ್ಲೂಕು ಎ ರಂಗನಾಥಮಠದಿಂದ ಗೊಡ್ಲುಮುದ್ದೇನಹಳ್ಳಿ ಗ್ರಾಮ ರಸ್ತೆ	ರೂ.18.00 ಲಕ್ಷ
02	ದೇವನಹಳ್ಳಿ ತಾಲ್ಲೂಕು ಬನ್ನಿಮಂಗಲ ಗ್ರಾಮದಿಂದ ದುದ್ದನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ	ರೂ.12.00 ಲಕ್ಷ
03	ದೇವನಹಳ್ಳಿ ತಾಲ್ಲೂಕು ರಾ ಹೆ ಯಿಂದ ಬೀರಸಂದ್ರ ಮಾರ್ಗವಾಗಿ ಬೈರದೇನಹಳ್ಳಿ ರಸ್ತೆ	ರೂ.20.00 ಲಕ್ಷ
04	ದೊಡ್ಡಬಳ್ಳಾಪುರ ತಾಲ್ಲೂಕು ಐವಿಸಿ ರಸ್ತೆಯಿಂದ ನರಗನಹಳ್ಳಿ ಮಾರ್ಗವಾಗಿ ಕುಂದಾಣ ರಸ್ತೆ	ರೂ.19.00 ಲಕ್ಷ
05	ದೇವನಹಳ್ಳಿ ತಾಲ್ಲೂಕು ಗಂಗವಾರ ಚೌಡಪ್ಪನಹಳ್ಳಿ ಗ್ರಾ ಪಂ ವ್ಯಾ ವಿ ರಸ್ತೆಯಿಂದ ಗಂಗವಾರ ಮುಖಾಂತರ ಹೊಸಕೋಟೆ ಗಡಿಯವರೆಗೆ ರಸ್ತೆ	ರೂ.19.00 ಲಕ್ಷ
06	ದೇವನಹಳ್ಳಿ ತಾಲ್ಲೂಕು ವಿಜಯಪುರ ಬೈಪಾಸ್ ನಿಂದ ಗಡ್ಡದನಾಯಕನಹಳ್ಳಿ ರಸ್ತೆ	ರೂ.8.00 ಲಕ್ಷ
07	ದೇವನಹಳ್ಳಿ ತಾಲ್ಲೂಕು ಚಿಕ್ಕತತ್ತಮಂಗಲ ಗ್ರಾಮದಿಂದ ದೊಡ್ಡತತ್ತಮಂಗಲ ಗ್ರಾಮದ ಜಲ್ಲಿ	ರೂ.5.20 ಲಕ್ಷ

	ರಸ್ತೆ	
08	ದೇವನಹಳ್ಳಿ ತಾಲ್ಲೂಕು ಪುರ ಗ್ರಾಮದಿಂದ ಚಂದ್ರೇನಹಳ್ಳಿ ರಸ್ತೆ ಕಾಮಗಾರಿ	ರೂ.9.00 ಲಕ್ಷ
09	ದೇವನಹಳ್ಳಿ ತಾಲ್ಲೂಕು ವೈ ವಿ ರಸ್ತೆಯಿಂದ ಕಗ್ಗಲಹಳ್ಳಿ ಲಿಂಕ್ ರಸ್ತೆ ಕಾಮಗಾರಿ	ರೂ.5.50 ಲಕ್ಷ
10	ದೇವನಹಳ್ಳಿ ತಾಲ್ಲೂಕು ವೈ ಸಿ ಟಿ ರಸ್ತೆಯಿಂದ ಕಗ್ಗಲಹಳ್ಳಿ ರಸ್ತೆ	ರೂ.8.50 ಲಕ್ಷ
11	ದೇವನಹಳ್ಳಿ ತಾಲ್ಲೂಕು ರಾ ಹೆ 207 ರಿಂದ ಶ್ಯಾನಪ್ಪನಹಳ್ಳಿ ರಸ್ತೆ	ರೂ.27.50 ಲಕ್ಷ
12	ದೇವನಹಳ್ಳಿ ತಾಲ್ಲೂಕು ರಾ ಹೆ ರಿಂದ ಕನ್ನಮಂಗಲ ಪಾಳ್ಯ ಮುಖಾಂತರ ಐ.ವಿ.ಸಿ ರಸ್ತೆ	ರೂ.20.50 ಲಕ್ಷ
13	ದೇವನಹಳ್ಳಿ ತಾಲ್ಲೂಕು ಬೆಟ್ಟೇನಹಳ್ಳಿಯಿಂದ ರಾಕುಂ ಶಾಲೆಯವರೆಗೆ ರಸ್ತೆ	ರೂ.20.50 ಲಕ್ಷ
14	ದೇವನಹಳ್ಳಿ ತಾಲ್ಲೂಕು ಹೆಗ್ಗನಹಳ್ಳಿಯಿಂದ ಬೋವಿಪಾಳ್ಯ ರಸ್ತೆ	ರೂ.12.00 ಲಕ್ಷ
15	ದೇವನಹಳ್ಳಿ ತಾಲ್ಲೂಕು ವಿಜಯಪುರ ಮುಖ್ಯ ರಸ್ತೆಯಿಂದ ಗುಡುವನಹಳ್ಳಿ ಗ್ರಾಮದವರೆಗೆ ರಸ್ತೆ	ರೂ.10.00 ಲಕ್ಷ
16	ದೇವನಹಳ್ಳಿ ತಾಲ್ಲೂಕು ವಿಜಯಪುರ ಮುಖ್ಯ ರಸ್ತೆಯಿಂದ ಕುರುಬರಕುಂಟೆ ಗ್ರಾಮದವರೆಗೆ ರಸ್ತೆ	ರೂ.8.00 ಲಕ್ಷ
17	ದೇವನಹಳ್ಳಿ ತಾಲ್ಲೂಕು ವಿಜಯಪುರ ಮುಖ್ಯ ರಸ್ತೆಯಿಂದ ಯಲಿಯೂರು ಗ್ರಾಮದವರೆಗೆ ನರ್ಸರಿ ರಸ್ತೆ	ರೂ.30.00 ಲಕ್ಷ
18	ದೇವನಹಳ್ಳಿ ತಾಲ್ಲೂಕು ಡಿ.ಸಿ.ಟಿ ಮುಖ್ಯ ರಸ್ತೆಯಿಂದ ಟಿ.ಅಗ್ರಹಾರ ಗ್ರಾಮದವರೆಗೆ ರಸ್ತೆ	ರೂ.25.00 ಲಕ್ಷ
19	ದೇವನಹಳ್ಳಿ ತಾಲ್ಲೂಕು ಟಿ.ಅಗ್ರಹಾರ ಗ್ರಾಮದಿಂದ ಎಸ್ ತೆಲ್ಲೂಹಳ್ಳಿ ಗ್ರಾಮದ ರಸ್ತೆಯವರೆಗೆ ರಸ್ತೆ	ರೂ.25.00 ಲಕ್ಷ
20	ದೇವನಹಳ್ಳಿ ತಾಲ್ಲೂಕು ಡಿ.ಸಿ.ಟಿ ಮುಖ್ಯ ರಸ್ತೆಯಿಂದ ಗೋಕರೆ ಗ್ರಾಮದವರೆಗೆ ಗ್ರಾಮದವರೆಗೆ ರಸ್ತೆ	ರೂ.15.00 ಲಕ್ಷ
21	ದೇವನಹಳ್ಳಿ ತಾಲ್ಲೂಕು ಕೊಯಿರಾ ಮುಖ್ಯ ರಸ್ತೆಯಿಂದ ರಬ್ಬನಹಳ್ಳಿ ವಯಾ ರಾಮನಾಥಪುರ ಗ್ರಾಮದವರೆಗೆ ರಸ್ತೆ.	ರೂ.10.00 ಲಕ್ಷ
22	ದೇವನಹಳ್ಳಿ ತಾಲ್ಲೂಕು ಕರ್ಗೋ ಮುಖ್ಯರಸ್ತೆಯಿಂದ ಚನ್ನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆ.	ರೂ.8.00 ಲಕ್ಷ
23	ದೇವನಹಳ್ಳಿ ತಾಲ್ಲೂಕು ಡಿ.ಸಿ.ಟಿ ಮುಖ್ಯ ರಸ್ತೆ-ಟಿ.ಅಗ್ರಹಾರ ರಸ್ತೆಯಿಂದ ತಮ್ಮನಹಳ್ಳಿ ಗ್ರಾಮದವರೆಗೆ ರಸ್ತೆ	ರೂ.16.50 ಲಕ್ಷ

ಅಂದಾಜುಪಟ್ಟಿಯನ್ನು ಈ ಪತ್ರದೊಂದಿಗೆ ಅಡಕಗೊಳಿಸಿ ತಮ್ಮ ಘನ ಮಾಹಿತಿಗಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಕಾರ್ಯಪಾಲಕ ಅಭಿಯಂತರರು,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ಗ್ರಾಮಾಂತರ, ಬೆಂಗಳೂರು.

ಅನುಬಂಧ – 1

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಸಂಖ್ಯೆ: ಬೆಂಗ್ರಾಜಿಪಂ/ಅಭಿ2/ಸಿ.ಆರ್.34/2019-20

ಬೀರಸಂದ್ರ, ದೇವನಹಳ್ಳಿ ತಾ॥.
ದಿನಾಂಕ: 03.12.2021

ರವರಿಗೆ,

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
3ನೇ ಮಹಡಿ, ಬಹುಮಹಡಿಗಳ ಕಟ್ಟಡ,
ಬೆಂಗಳೂರು-01.

ಮಾನ್ಯರೇ,

ವಿಷಯ: 2021-22ನೇ ಸಾಲಿನಲ್ಲಿ ಸುರಿದ ಭಾರಿ ಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುವೆಗಳ ವಿವರಗಳನ್ನು ಸಲ್ಲಿಸುತ್ತಿರುವ ಕುರಿತು.

ಉಲ್ಲೇಖ:
4. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ರವರ ಪತ್ರ ಸಂಖ್ಯೆ: ಗ್ರಾಅಪ/240/ಆರ್‌ಆರ್‌ಸಿ/2021 ದಿನಾಂಕ: 25.11.2021.
5. ಈ ಕಛೇರಿಯ ಸಮಸಂಖ್ಯೆ ದಿನಾಂಕ: 26.11.2021
6. ಕಾರ್ಯಪಾಲಕ ಅಭಿಯಂತರರು, ಪಂ.ರಾ.ಇಂ.ವಿ, ಬೆಂಗಳೂರು ಗ್ರಾಮಾಂತರ ರವರ ಪತ್ರ ಸಂಖ್ಯೆ: ಕಾಅ:ಪಂರಾಇಂವಿ:ಬೆಂಗ್ರಾ:ಕಿಇಂ-2/2021-22/1351, 1347, 1348 ದಿನಾಂಕ: 02.12.2021

*****

ವಿಷಯಕ್ಕೆ ಸಂಬಂಧಿಸಿದಂತೆ; ಸರ್ಕಾರದ ಉಲ್ಲೇಖಿದ ಪತ್ರದಲ್ಲಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾ.ಅ&ಪಂ.ರಾ ರವರು ದಿನಾಂಕ: 21.11.2021 ರಂದು ನಡೆದ ವೀಡಿಯೋ ಸಂವಾದದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಸೂಚಿಸಿದಂತೆ ಆಗಸ್ಟ್-2021 ರಿಂದ 21.11.2021 ರವರೆಗೆ ಹಾಗೂ 22.11.2021 ರ ನಂತರ ಸುರಿದ ಭಾರಿಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುಗಳ ಕಾಮಗಾರಿಗಳನ್ನು ಕಾರ್ಯಪಾಲಕ ಅಭಿಯಂತರರು ಖುದ್ದಾಗಿ ಸ್ಥಳ ಪರಿಶೀಲಿಸಿ ವಾಸ್ತವಿಕವಾಗಿ ಎಷ್ಟು ಹಾನಿಯಾಗಿದೆ ಎಂಬುದನ್ನು ಅಂದಾಜಿಸಿ, ಛಾಯಚಿತ್ರಗಳ ಸಮೇತ, Latitude ಮತ್ತು Longitude ಮಾಹಿತಿಯೊಂದಿಗೆ ಕಾಮಗಾರಿವಾರು, ತಾಲ್ಲೂಕುವಾರು ರಸ್ತೆ ಸೇತುವೆ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ದೃಢೀಕರಿಸಿ ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿರುತ್ತದೆ.

ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರವರಿಗೆ ಉಲ್ಲೇಖ (2) ರಲ್ಲಿ ತಿಳಿಸಲಾಗಿರುತ್ತದೆ. ಈ ಬಗ್ಗೆ ಉಲ್ಲೇಖ (3) ರಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆ ವ್ಯಾಪ್ತಿಯಲ್ಲಿ ಸುರಿದ ಭಾರಿಮಳೆ ಮತ್ತು ಪ್ರವಾಹದಿಂದ ಹಾನಿಗೊಳಗಾದ ರಸ್ತೆ ಮತ್ತು ಸೇತುಗಳ ಕಾಮಗಾರಿಗಳನ್ನು ಕಾರ್ಯಪಾಲಕ ಅಭಿಯಂತರರು ಖುದ್ದಾಗಿ ಸ್ಥಳ ಪರಿಶೀಲಿಸಿ ವಾಸ್ತವಿಕವಾಗಿ ಎಷ್ಟು ಹಾನಿಯಾಗಿದೆ ಎಂಬುದನ್ನು ಅಂದಾಜಿಸಿ, ಛಾಯಚಿತ್ರಗಳ ಸಮೇತ, Latitude ಮತ್ತು Longitude ಮಾಹಿತಿಯೊಂದಿಗೆ ಕಾಮಗಾರಿವಾರು, ತಾಲ್ಲೂಕುವಾರು ರಸ್ತೆ ಸೇತುವೆ ಕಾಮಗಾರಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ದೃಢೀಕರಿಸಿ ಕೆಳಕಂಡಂತೆ ಸಲ್ಲಿಸಿರುತ್ತಾರೆ.

2021-22 ನೇ ಸಾಲಿನ ಮಳೆಯಿಂದಾಗಿ ಹಾನಿಯಾಗಿರುವ ರಸ್ತೆಗಳ ವಿವರ

ಕ್ರಸಂ	ತಾಲ್ಲೂಕು	ಕಾಮಗಾರಿಗಳ ಸಂಖ್ಯೆ	ಹಾನಿಗೊಳಗಾದ ರಸ್ತೆಗಳ ಉದ್ದ (ಕಿ.ಮೀ)	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ದೇವನಹಳ್ಳಿ	23	31.31	352.20
2	ದೊಡ್ಡಬಳ್ಳಾಪುರ	36	56.76	302.50
3	ಹೊಸಕೋಟೆ	7	16.20	42.40
4	ನೆಲಮಂಗಲ	19	40.40	66.54
	ಒಟ್ಟು	85	144.665	763.64

2021–22 ನೇ ಸಾಲಿನ ಮಳೆಯಿಂದಾಗಿ ಹಾನಿಯಾಗಿರುವ ಸೇತುವೆಗಳ ವಿವರ

ಕ್ರಸಂ	ತಾಲ್ಲೂಕು	ಹಾನಿಗೊಳಗಾದ ಸೇತುವೆಗಳ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	ದೇವನಹಳ್ಳಿ	1	5.00
2	ದೊಡ್ಡಬಳ್ಳಾಪುರ	1	70.00
3	ಹೊಸಕೋಟೆ	–	–
4	ನೆಲಮಂಗಲ	–	–
	ಒಟ್ಟು	**2**	**75.00**

ಮೇಲ್ಕಂಡಂತೆ ಕಾರ್ಯಪಾಲಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ರವರು ಭಾರಿ ಮಳೆಯಿಂದ ಮತ್ತು ಪ್ರವಾಹದಿಂದ ಹಾನಿಯಾಗಿರುವ ರಸ್ತೆ ಮತ್ತು ಸೇತುವೆಗಳ ಅಂದಾಜು ಪಟ್ಟಿಯನ್ನು ತಯಾರಿಸಿ ದೃಢೀಕರಿಸಿ ಸಲ್ಲಿಸಿರುವ ಮಾಹಿತಿಯನ್ನು ಮುಂದಿನ ಕ್ರಮಕ್ಕಾಗಿ ತಮ್ಮ ಅವಗಾಹನೆಗಾಗಿ ಲಗತ್ತಿಸಿ ಸಲ್ಲಿಸಿದೆ.

7/12/21

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್

ಜಿಲ್ಲಾಡಳಿತ ಭವನ, ಬೀರಸಂದ್ರ ಗ್ರಾಮ, ಚಪ್ಪರದಕಲ್ಲು, ಕುಂದಾಣ ಹೋಬಳಿ, ದೇವನಹಳ್ಳಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ-562110

ಸಂಖ್ಯೆ:ಬೆಂಗ್ರಾಜಿಪಂ/ಎಲ್.ಎ.ಕ್ಯೂ-ಎಲ್.ಸಿ.ಕ್ಯೂ/2021-22 ದಿನಾಂಕ:07-12-2021

ರವರಿಗೆ,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು.

ಮಾನ್ಯರೇ.

ವಿಷಯ: ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ. ಎಲ್.ಎನ್.(ದೇವನಹಳ್ಳಿ) ರವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:618ಕ್ಕೆ ಉತ್ತರ ಉತ್ತರ ಸಲ್ಲಿಸುತ್ತಿರುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ: ಪ್ರಶಾವಿಸ/15ನೇವಿಸ/11ಅ/ಪ್ರ.ಸಂ.618/2021 ದಿ:30-11-2021.

****

ವಿಷಯಕ್ಕೆ ಸಂಬಂಧಿಸಿದಂತೆ, ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ. ಎಲ್.ಎನ್.(ದೇವನಹಳ್ಳಿ) ರವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:618ಕ್ಕೆ ಸಂಬಂಧಿಸಿದಂತೆ ಉತ್ತರವನ್ನು ಸಿದ್ಧಪಡಿಸಿ, ಈ ಪತ್ರದೊಂದಿಗೆ ಲಗತ್ತಿಸಿ ತಮ್ಮ ಅವಗಾಹನೆಗೆ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್.

ಪ್ರತಿಯನ್ನು:

1. ಉಪನಿರ್ದೇಶಕರು, ಗ್ರಾಮೀಣಾಭಿವೃದ್ಧಿ ಹಾಗೂ ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು-9 ರವರಿಗೆ.
2. ಕಛೇರಿ ಪ್ರತಿ.

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ನಿಸರ್ಗ ನಾರಾಯಣಸ್ವಾಮಿ.ಎಲ್.ಎನ್.(ದೇವನಹಳ್ಳಿ) ರವರ ಚುಕ್ಕೆ ಗುರುತಿನ/ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 618 ಕ್ಕೆ ಉತ್ತರ ಸಲ್ಲಿಸುತ್ತಿರುವ ಬಗ್ಗೆ.

ಕ್ರಸಂ	ಪ್ರಶ್ನೆ	ಉತ್ತರ
1	ರಾಜ್ಯದಲ್ಲಿ ಇತ್ತೀಚೆಗೆ ಬಿದ್ದ ಅಕಾಲಿಕ ಮಳೆಗೆ ದೇವನಹಳ್ಳಿ ವಿಧಾನ ಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ರಸ್ತೆಗಳು ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ದೇವನಹಳ್ಳಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಮಳೆಹಾನಿಯಿಂದ ಹಾನಿಗೊಳಗಾದ 31.31 ಕಿ.ಮೀ. ರಸ್ತೆ ಮತ್ತು ಹಾನಿಗೊಳಗಾದ ಸೇತುವೆಗಳ ಸಂಖ್ಯೆ:01 ಆಗಿರುತ್ತದೆ.
2	ಬಂದಿದ್ದಲ್ಲಿ ಯಾವ ಯಾವ ರಸ್ತೆಗಳು ಹಾಳಾಗಿವೆ ಅವುಗಳ ದುರಸ್ಥಿಗಾಗಿ ಸರ್ಕಾರ ಅನುದಾನ ಬಿಡುಗಡೆಗೆ ಕೈಗೊಂಡಿರುವ ಕ್ರಮಗಳೇನು;	ಹಾನಿಗೊಳಗಾದ ಗ್ರಾಮೀಣ ರಸ್ತೆಗಳ ಕಾಮಗಾರಿಗಳನ್ನು ಕೈಗೊಳ್ಳಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸರ್ಕಾರದ ಅನುಮೋದನೆ ಪಡೆದು ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುವುದು.
3	ಹಾಗಾದರೆ ಯಾವ ಕಾಲಮಿತಿಯಲ್ಲಿ ರಸ್ತೆ ದುರಸ್ಥಿಗೆ ಅನುದಾನ ಬಿಡುಗಡೆ ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಸರ್ಕಾರ ನಿರ್ಧರಿಸಿದೆ?	ಹಾನಿಗೊಳಗಾದ ರಸ್ತೆ ಹಾಗೂ ಸೇತುವೆ ಕಾಮಗಾರಿಗಳಿಗೆ ರೂ.357.20ಲಕ್ಷಗಳ ಅನುದಾನ ಬಿಡುಗಡೆಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,

ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್.

ಕರ್ನಾಟಕ ವಿಧಾನ ಸಭೆ

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**619**
2	ಸದಸ್ಯರ ಹೆಸರು	ಡಾ|| ಅಜಯ್ ಧರ್ಮಸಿಂಗ್ (ಜೇವರ್ಗಿ)
3	ಉತ್ತರಿಸುವ ದಿನಾಂಕ	15/12/2021
4	ಉತ್ತರಿಸುವವರು	ಮಾನ್ಯ ತೋಟಗಾರಿಕೆ ಹಾಗೂ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

	ಪ್ರಶ್ನೆಗಳು	ಉತ್ತರಗಳು
(ಅ)	ರಾಜ್ಯದ ಯಾವ ಜಿಲ್ಲೆಯಲ್ಲಿ ರೇಷ್ಮೆ ಟೆಸ್ಟಿಂಗ್ ಲ್ಯಾಬ್, ಖರೀದಿ ಕೇಂದ್ರ ಸ್ಥಾಪನೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?	ರಾಜ್ಯದಲ್ಲಿ ರೇಷ್ಮೆ ಟೆಸ್ಟಿಂಗ್ ಲ್ಯಾಬ್, ಖರೀದಿ ಕೇಂದ್ರ ಸ್ಥಾಪನೆ ಮಾಡುವ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದೆ ಇರುವುದಿಲ್ಲ. ರಾಜ್ಯದ ರೇಷ್ಮೆ ನೂಲು ಬಿಚ್ಚಾಣಿಕೆದಾರರು ಕೇಂದ್ರ ರೇಷ್ಮೆ ಮಂಡಳಿಯ 'ಸಿಲ್ಕ್ ಟೆಸ್ಟಿಂಗ್ ಕೇಂದ್ರ' ಗಳಲ್ಲಿ ರೇಷ್ಮೆ ಟೆಸ್ಟಿಂಗ್ ಸೌಲಭ್ಯವನ್ನು ಪಡೆಯಬಹುದಾಗಿದ್ದು, ಅವುಗಳು ಬೆಂಗಳೂರಿನ ಒಕಳೀಪುರದಲ್ಲಿನ ರೇಷ್ಮೆ ಭವನ, ಕಬ್ಬನ್ ಪೇಟೆ ಹಾಗೂ ಶಿಡ್ಲಘಟ್ಟ ರೇಷ್ಮೆ ವಿನಿಮಯ ಕೇಂದ್ರವಿರುವ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿರುತ್ತವೆ. ರೇಷ್ಮೆ ನೂಲು ಬಿಚ್ಚಾಣಿಕೆದಾರರು ಉತ್ಪಾದಿಸುವ ರೇಷ್ಮೆಗೆ ಸೂಕ್ತ ಬೆಲೆಯ ವ್ಯವಸ್ಥೆಯಾಗಬೇಕೆಂದು ಮಾರುಕಟ್ಟೆಯ ಮಧ್ಯ ಪ್ರವೇಶಿಸುವಿಕೆಗಾಗಿ ಸರ್ಕಾರಿ ಸಾಮ್ಯದ ಸಂಸ್ಥೆಯಾದ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ (KSMB) ಯು ಹೆಚ್ಚಿನ ರೇಷ್ಮೆ ನೂಲು ಬಿಚ್ಚಾಣಿಕೆ ಚಟುವಟಿಕೆ ಇರುವ ಸ್ಥಳಗಳಲ್ಲಿ ರೇಷ್ಮೆ ಖರೀದಿ ಕೇಂದ್ರಗಳನ್ನು ಹೊಂದಿದ್ದು, ಅದರಂತೆ ಬೆಂಗಳೂರು, ಶಿಡ್ಲಘಟ್ಟ, ರಾಮನಗರ, ಕೊಳ್ಳೇಗಾಲ, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ ಮತ್ತು ಗುಳೇದಗುಡ್ಡ ಗಳಲ್ಲಿ ಕಾರ್ಯನಿರ್ವಹಿಸುತ್ತಿರುತ್ತದೆ.

(ಆ)	ಕಲಬುರಗಿ ಹಾಗೂ ಇತರೆ ಜಿಲ್ಲೆಗಳಲ್ಲಿರುವ ರೇಷ್ಮೆ ನೂಲು ತೆಗೆಯುವ ಯಂತ್ರ ಬಳಕೆಯಾಗದೆ ಅನುಪಯುಕ್ತ ವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕಲಬುರಗಿಯೂ ಸೇರಿದಂತೆ ರಾಜ್ಯದ ಹೊಸ ಪ್ರದೇಶಗಳಲ್ಲಿ ರೇಷ್ಮೆ ನೂಲು ಬಿಚ್ಚಾಣಿಕೆಯನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಸ್ಥಾಪನೆಗೊಂಡ 07 ಬೆಳವಣಿಗೆ ಕೇಂದ್ರಗಳು ನಿರೀಕ್ಷಿಸಿದಂತೆ ಚಾಲನೆಯಾಗದ ಪ್ರಯುಕ್ತ ಆನಂತರದಲ್ಲಿ ಸದರಿ ಬೆಳವಣಿಗೆ ಕೇಂದ್ರಗಳ ಜಮೀನು, ಶೆಡ್‌ಗಳು ಮತ್ತು ಯಂತ್ರೋಪಕರಣಗಳನ್ನು ಇಲಾಖೆಯ ಮತ್ತು ಇತರೆ ಸರ್ಕಾರಿ ಸಂಸ್ಥೆಗಳಿಗೆ ಆದೇಶಗಳನ್ವಯ ವಿನಿಯೋಗಿಸಿ ಕೊಳ್ಳಲಾಗಿದೆ ಹಾಗೂ ವಿನಿಯೋಗಿಸಿಕೊಳ್ಳಲಾಗುತ್ತದೆ.
(ಇ)	ಬಂದಿದ್ದಲ್ಲಿ, ಇದರ ದುರಸ್ಥಿಗೆ ಕೈಗೊಂಡ ಕ್ರಮಗಳೇನು; ಯಾವ ಕಾಲಾವಧಿಯೊಳಗೆ ಈ ಯಂತ್ರಗಳನ್ನು ದುರಸ್ತಿ ಗೊಳಿಸಲಾಗುವುದು: (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿರುವ 07 ರೇಷ್ಮೆ ಬೆಳವಣಿಗೆ ಕೇಂದ್ರಗಳಲ್ಲಿರುವ ವಿದ್ಯುತ್ ಚಾಲಿತ ಮಗ್ಗಗಳನ್ನು ಹಾಗೂ ರೀಲಿಂಗ್ ಯಂತ್ರೋಪಕರಣಗಳನ್ನು ದುರಸ್ಥಿಯ ಮೂಲಕ ಉಪಯೋಗಿಸಿಕೊಳ್ಳುವ ಅಭಿಪ್ರಾಯದೊಂದಿಗೆ ಕರ್ನಾಟಕ ರಾಜ್ಯ ರೇಷ್ಮೆ ಉದ್ಯಮಗಳ ನಿಗಮ ನಿಯಮಿತ (ಕೆಎಸ್‌ಐಸಿ) ರವರಿಗೆ ಹಸ್ತಾಂತರಿಸಲು ಕ್ರಮವಹಿಸಿದೆ. ಮುಂದುವರೆದಂತೆ, ಖಾಸಗಿ ನೂಲು ಬಿಚ್ಚಾಣಿಕೆದಾರರಿಗೆ ಬಾಡಿಗೆ ಆಧಾರದ ಮೇಲೆ ತಾತ್ಕಾಲಿಕವಾಗಿ ರೀಲಿಂಗ್ ಯಂತ್ರೋಪಕರಣಗಳ ಬಳಕೆಗೆ ಅವಕಾಶ ನೀಡಿದ್ದು, ಅದರಂತೆ ರೇಷ್ಮೆ ಬೆಳವಣಿಗೆ ಕೇಂದ್ರ, ಜೇವರ್ಗಿಯಲ್ಲಿ ಹಾಲಿ ಇಬ್ಬರು ನೂಲು ಬಿಚ್ಚಾಣಿಕೆದಾರರು ಬಾಡಿಗೆ ಆಧಾರದ ಮೇಲೆ ಒಟ್ಟು 20 ಕಾಟೇಜ್ ಬೇಸಿನ್ ಘಟಕಗಳನ್ನು ಪಡೆದಿದ್ದು, ಅವುಗಳು ಚಾಲನೆಯಲ್ಲಿರುತ್ತವೆ. ಉಳಿದಂತೆ ಸುಸ್ಥಿತಿಗೆ ತರಲು ಸಾಧ್ಯವಾಗದ ಯಂತ್ರಗಳನ್ನು ಮತ್ತು ಉಪಕರಣಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮಗಳನ್ವಯ ವಿಲೇವಾರಿ ಮಾಡಲು ಸಮಿತಿಯೊಂದನ್ನು ರಚಿಸಲಾಗಿದ್ದು, ಸಮಿತಿಯ ವರದಿಯನ್ನು ನಿರೀಕ್ಷಿಸಲಾಗಿದೆ.

(ಈ)	ಖಾಸಗಿಯವರಿಗೆ ಪೈಪೋಟಿಯೊಡ್ಡುವ ರೀತಿಯಲ್ಲಿ ಉತ್ಪಾದನೆಯನ್ನು ದ್ವಿಗುಣ-ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?	ಪ್ರಸ್ತುತ ಸರ್ಕಾರದ ಯಾವುದೇ ರೇಷ್ಮೆ ನೂಲು ಬಿಚ್ಚಾಣಿಕೆ ಕಾರ್ಖಾನೆಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಆದರೆ, ರೇಷ್ಮೆ ಉತ್ಪಾದನೆಯನ್ನು ದ್ವಿಗುಣಗೊಳಿಸಲು ಹಾಗೂ ದೇಶದ ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ಸ್ವಯಂಪೂರ್ಣತೆ ಸಾಧಿಸುವ ಮತ್ತು ರೇಷ್ಮೆ ಆಮದಿನ ಪ್ರಮಾಣವನ್ನು ಗಣನೀಯವಾಗಿ ಕಡಿಮೆ ಮಾಡುವ ಉದ್ದೇಶದಿಂದ ರಾಜ್ಯವು ಹಾಲಿ ಯಂತ್ರೋಪಕರಣಗಳ ಮೇಲ್ದರ್ಜೆಗಾಗಿ, ಸುಧಾರಿತ ರೀಲಿಂಗ್ ಯಂತ್ರೋಪಕರಣಗಳ ಅಳವಡಿಕೆಗಾಗಿ ಮತ್ತು ಸ್ವಯಂಚಾಲಿತ ರೇಷ್ಮೆ ನೂಲು ಬಿಚ್ಚಾಣಿಕೆ ಘಟಕಗಳ ಸ್ಥಾಪನೆಗೆ ಫಲಾನುಭವಿ ಆಧಾರಿತ ಕಾರ್ಯಕ್ರಮಗಳ ಮೂಲಕ ಉತ್ತೇಜನ ನೀಡುವುದರ ಹಾಗೂ ಇದರಿಂದ ಸ್ಥಳೀಯವಾಗಿ ಉತ್ತಮ ಹಾಗೂ ಅಂತರರಾಷ್ಟ್ರೀಯ ಗುಣಮಟ್ಟದ ಕಚ್ಚಾ ರೇಷ್ಮೆ ಉತ್ಪಾದನೆ ಮತ್ತು ಲಭ್ಯತೆಗೆ ಕ್ರಮವಹಿಸಿದೆ.

ಸಂಖ್ಯೆ:ರೇಷ್ಮೆ 222 ರೇಕೃವಿ 2021

(ಡಾ. ನಾರಾಯಣಗೌಡ)
ರೇಷ್ಮೆ, ಯುವ ಸಬಲೀಕರಣ ಮತ್ತು
ಕ್ರೀಡಾ ಸಚಿವರು.

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	620
ಸದಸ್ಯರ ಹೆಸರು	:	ಶ್ರೀ ಅಜಯ್ ಧರ್ಮಸಿಂಗ್ (ಜೇವರ್ಗಿ)
ಉತ್ತರಿಸುವ ದಿನಾಂಕ	:	15.12.2021
ಉತ್ತರಿಸುವ ಸಚಿವರು	:	ಮಾನ್ಯ ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಸಚಿವರು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿ 2018-19ನೇ ಸಾಲಿನಿಂದ ಇಲ್ಲಿಯವರೆಗೂ ಟೆಂಡರ್ ಪ್ರಕ್ರಿಯೆ ನಡೆದಿರುವ ಕಾಮಗಾರಿಗಳ ಪ್ರೀಮಿಯಮ್ ಮೊತ್ತ ಇಳಿಕೆಗೊಂಡಿರುವ (ಲೆಸ್ಸ್) ಮೊತ್ತ ಎಷ್ಟು; (ಸಂಪೂರ್ಣ ವಿವರ ನೀಡುವುದು)	ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿ 2018-19ನೇ ಸಾಲಿನಿಂದ ಇಲ್ಲಿಯವರೆಗೂ ಟೆಂಡರ್ ಪ್ರಕ್ರಿಯೆ ನಡೆದಿರುವ ಕಾಮಗಾರಿಗಳ ಪ್ರೀಮಿಯಮ್ ಮೊತ್ತ ಇಳಿಕೆಗೊಂಡಿರುವ (ಲೆಸ್ಸ್) ಮೊತ್ತದ ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.
ಆ	ಉಳಿತಾಯ ಮೊತ್ತದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕಳೆದ ಮೂರು ವರ್ಷಗಳಲ್ಲಿ ಕೈಗೊಳ್ಳಲಾಗಿದೆ? (ಸಂಪೂರ್ಣ ವಿವರ ನೀಡುವುದು)	ಉಳಿತಾಯ ಮೊತ್ತದಲ್ಲಿ ಕಳೆದ ಮೂರು ವರ್ಷಗಳಲ್ಲಿ ಮಂಡಳಿಯಿಂದ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಗೊಂಡಿರುವುದಿಲ್ಲ.

ಸಂಖ್ಯೆ: ಪಿಡಿಎಸ್ 138 ಹೆಚ್ ಕೆಡಿ 2021

(ಮುನಿರತ್ನ)
ಸಚಿವರು,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:620ರ ಅನುಬಂಧ-1

ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಕಲಬುರಗಿ

Rs. in Lakhs

Year	District	Allocation	ADM Amount	Work order Amount	Premium Less amount (ADM-WO Amt)
1	2	3	4	5	6
2018-19	Bidar	14129.550	14010.049	12954.918	1055.131
	Kalaburagi	26355.153	26127.075	24590.141	1536.934
	Yadgir	11187.340	11172.698	10310.809	861.889
	Raichur	17227.880	16914.033	15780.460	1133.573
	Koppal	11887.560	11904.780	11442.949	461.831
	Bellary	16444.490	16448.480	15268.930	1179.550
	2018-19 Total	**97231.973**	**96577.115**	**90348.207**	**6228.908**
2019-20	Bidar	21219.760	19298.360	17516.631	1781.729
	Kalaburagi	42023.730	40873.135	36816.360	4056.775
	Yadgir	16297.400	16155.740	14545.771	1609.969
	Raichur	24883.930	24136.014	22150.342	1985.672
	Koppal	17138.980	16877.870	15862.694	1015.176
	Bellary	23730.150	23476.230	21581.026	1895.204
	2019-20 Total	**145293.950**	**140817.349**	**128472.824**	**12344.525**
2020-21	Bidar	14606.890	12541.160	10641.420	1899.740
	Kalaburagi	34106.061	30475.380	16652.935	13822.445
	Yadgir	11860.328	11685.420	9986.618	1698.802
	Raichur	18295.910	11645.540	9681.282	1964.258
	Koppal	11218.260	9314.920	8344.648	970.272
	Bellary	16472.240	13170.330	9386.937	3783.393
	2020-21 Total	**106559.689**	**88832.750**	**64693.840**	**24138.910**
2021-22	Bidar	18258.520	11224.460	3144.750	8079.710
	Kalaburagi	38645.050	17638.880	2917.897	14720.983
	Yadgir	14105.510	8638.700	4319.115	4319.585
	Raichur	22273.590	14279.150	2967.966	11311.184
	Koppal	15205.880	10038.050	5003.570	5034.480
	Bellary	22990.960	14225.550	3786.524	10439.026
	2021-22 Total	**131479.510**	**76044.790**	**22139.822**	**53904.968**
Grand Total		480565.122	402272.004	305654.693	96617.311

ನಿರ್ದೇಶಕರು,
ಎಡಿಬಿ ವಿಭಾಗ,
ಯೋಜನೆ, ಕಾರ್ಯಕ್ರಮ ಸಂಯೋಜನೆ
ಮತ್ತು ಸಾಂಖ್ಯಿಕ ಇಲಾಖೆ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 621

ಸದಸ್ಯರ ಹೆಸರು : ಡಾ || ಅಜಯ್ ಧರ್ಮ ಸಿಂಗ್ (ಜೇವರ್ಗಿ)

ಉತ್ತರಿಸುವ ದಿನಾಂಕ : 15-12-2021

ಉತ್ತರಿಸುವ ಸಚಿವರು : ಕೃಷಿ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ರೈತ ವಿದ್ಯಾನಿಧಿ ಯೋಜನೆಯಡಿಯಲ್ಲಿ ಸೌಲಭ್ಯದಿಂದ ವಿದ್ಯಾರ್ಥಿಗಳು ವಂಚಿತರಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.
ಆ)	ಬಂದಿದ್ದಲ್ಲಿ, ಸಮರ್ಪಕವಾಗಿ ಈ ಯೋಜನೆ ಫಲಾನುಭವಿಗಳಾಗಲು ಪಾಲಿಸಬೇಕಾಗಿರುವ ನಿಯಮಗಳೇನು;	ಅನ್ವಯಿಸುವುದಿಲ್ಲ
ಇ)	ಸದರಿ ಯೋಜನೆಯಲ್ಲಿ ಇರುವ ನ್ಯೂನತೆಗಳನ್ನು ಸರಿಪಡಿಸಲು ಸರ್ಕಾರವು ತೆಗೆದುಕೊಂಡ ಕ್ರಮಗಳೇನು;	ಅನ್ವಯಿಸುವುದಿಲ್ಲ
ಈ)	ಜೇವರ್ಗಿ ಮತಕ್ಷೇತ್ರದ ಜೇವರ್ಗಿ ಮತ್ತು ಯಡ್ರಾಮಿ ತಾಲ್ಲೂಕುಗಳಲ್ಲಿ ಎಷ್ಟು ವಿದ್ಯಾರ್ಥಿಗಳು ಅರ್ಜಿಸಲ್ಲಿಸಿರುತ್ತಾರೆ;	ಜೇವರ್ಗಿ ತಾಲ್ಲೂಕಿನಲ್ಲಿ 05 ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಿದ್ದು, ಯಡ್ರಾಮಿ ತಾಲ್ಲೂಕಿನಲ್ಲಿ ಯಾವುದೇ ವಿದ್ಯಾರ್ಥಿ ಅರ್ಜಿ ಸಲ್ಲಿಸಿರುವುದಿಲ್ಲ.
ಉ)	ಎಷ್ಟು ಮಂದಿ ವಿದ್ಯಾರ್ಥಿಗಳು ಈ ಯೋಜನೆಯ ಸೌಲಭ್ಯ ಪಡೆದಿದ್ದಾರೆ? (ಸಂಪೂರ್ಣ ವಿವರ ನೀಡುವುದು)	ಈ ಯೋಜನೆಯಡಿ ಇದುವರೆಗೂ 16176 ವಿದ್ಯಾರ್ಥಿಗಳಿಗೆ ರೂ.4.41 ಕೋಟಿ ಶಿಷ್ಯವೇತನವನ್ನು ನೇರ ನಗದು ವರ್ಗಾವಣೆ (DBT) ಮುಖಾಂತರ ವರ್ಗಾಯಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಸಂಖ್ಯೆ: AGRI-AML/245/2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 622

ಸದಸ್ಯರ ಹೆಸರು : ಡಾ|| ಅಜಯ್ ಧರ್ಮ ಸಿಂಗ್

ಉತ್ತರಿಸುವ ಸಚಿವರು : ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವರು

ಉತ್ತರಿಸುವ ದಿನಾಂಕ : 15.12.2021

ಕ್ರ. ಸಂ	ಪ್ರಶ್ನೆ	ಉತ್ತರ
ಅ.	ಕಲಬುರಗಿ ಜಿಲ್ಲೆಯ ಜೇವರ್ಗಿ ಮತಕ್ಷೇತ್ರದ ಯಡ್ರಾಮಿ ತಾಲ್ಲೂಕಿನ ಬಸ್ ತಂಗುದಾಣ ಹಳೆಯದಾಗಿದ್ದು, ಅದನ್ನು ನವೀಕರಿಸುವ ಉದ್ದೇಶವಿದೆಯೇ; ನೂತನವಾಗಿ ಬಸ್ ಡಿಪೋ ಆರಂಭಿಸುವ ಉದ್ದೇಶ ಸರ್ಕಾರಕ್ಕಿದೆಯೇ; ಈ ಬಗ್ಗೆ ಸರ್ಕಾರದ ನಿಲುವೇನು;	ಕಲಬುರಗಿ ಜಿಲ್ಲೆಯ ಜೇವರ್ಗಿ ಮತಕ್ಷೇತ್ರದ ಯಡ್ರಾಮಿಯಲ್ಲಿ 1998ರಲ್ಲಿ ಭೂ ಸೇನಾ ನಿಗಮದಿಂದ ಬಸ್ ನಿಲ್ದಾಣವನ್ನು ನಿರ್ಮಿಸಲಾಗಿದೆ. ಸದರಿ ಬಸ್ ನಿಲ್ದಾಣವನ್ನು 2017-18ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ ನವೀಕರಿಸಲಾಗಿದ್ದು, ಕಾರ್ಯಾಚರಣೆಯಲ್ಲಿದೆ. ಬಸ್ ಘಟಕ ನಿರ್ಮಾಣಕ್ಕಾಗಿ ಸೂಕ್ತ ನಿವೇಶನ ಲಭ್ಯವಿರುವುದಿಲ್ಲ. ಯಡ್ರಾಮಿಯಲ್ಲಿ ನೂತನ ಬಸ್ ಘಟಕ ನಿರ್ಮಾಣದ ಕುರಿತು ಸಾಧಕ ಬಾಧಕಗಳ ಹಾಗೂ ಅನುಸೂಚೆಗಳ ಅಧ್ಯಯನ ಕೈಗೊಂಡು, ಅಧ್ಯಯನ ವರದಿ, ಸೂಕ್ತ ನಿವೇಶನದ ಲಭ್ಯತೆ ಹಾಗೂ ಅನುದಾನದ ಲಭ್ಯತೆಯನ್ನಾಧರಿಸಿ ಕ್ರಮ ವಹಿಸಲಾಗುವುದು.
ಆ.	ಇದ್ದಲ್ಲಿ ಯಾವಾಗ ಹಾಗೂ ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಲಾಗುವುದು? (ವಿವರ ನೀಡುವುದು)	

ಸಂಖ್ಯೆ: ಟಿಡಿ 274 ಟಿಸಿಕ್ಯೂ 2021

(ಬಿ.ಶ್ರೀರಾಮುಲು)

ಸಾರಿಗೆ ಮತ್ತು ಪರಿಶಿಷ್ಟ ಪಂಗಡಗಳ

ಕಲ್ಯಾಣ ಸಚಿವರು

ಕರ್ನಾಟಕ ವಿಧಾನ ಸಭೆ
ಚುಕ್ಕೆ ಗುರುತಿಲ್ಲದ ಪ್ರಶ್ನೆ

ವಿಧಾನ ಸಭೆ ಸದಸ್ಯರ ಹೆಸರು : ಶ್ರೀ ದೇವಾನಂದ ಫುಲಸಿಂಗ್ ಚವಾಣ್ (ನಾಗಠಾಣ)
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 623
ಉತ್ತರಿಸಬೇಕಾದ ದಿನಾಂಕ : 15.12.2021
ಉತ್ತರಿಸುವ ಸಚಿವರು : ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು

ಕ್ರ.ಸಂ	ಪ್ರಶ್ನೆ	ಇಲಾಖೆಯ ಮಾಹಿತಿ
ಅ	ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ಮತಕ್ಷೇತ್ರಕ್ಕೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆಯಾದ ಅನುದಾನವೆಷ್ಟು; (ವರ್ಷವಾರು ವಿವರವಾದ ಮಾಹಿತಿ ನೀಡುವುದು)	ಕಳೆದ ಮೂರು ವರ್ಷಗಳಲ್ಲಿ ನಾಗಠಾಣ ಮತಕ್ಷೇತ್ರಕ್ಕೆ ವಿವಿಧ ಲೆಕ್ಕ ಶೀರ್ಷಿಕೆಗಳಡಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಬಿಡುಗಡೆಯಾದ ಅನುದಾನದ ವಿವರವನ್ನು **ಅನುಬಂಧ-1 ರಲ್ಲಿ** ಒದಗಿಸಿದೆ.
ಆ	ನಾಗಠಾಣ ಮತಕ್ಷೇತ್ರದಲ್ಲಿ ಇತ್ತಿಚೆಗೆ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ (PMGSY) ಯಡಿ ಕೈಗೊಳ್ಳಲಾಗಿರುವ ಚಡಚಣ ತಾಲ್ಲೂಕಿನ ದೇವರನಿಂಬರಗಿ ಸಾವಳಸಂಗ ರಸ್ತೆ ಸುಧಾರಣೆ ಕಾಮಗಾರಿ ಹಾಗೂ ವಿಜಯಪುರ ತಾಲ್ಲೂಕಿನ ಜಮನಾಳ-ಖಾತಿಜಾಪೂರ ರಸ್ತೆ ಸುಧಾರಣೆ ಕಾಮಗಾರಿಗಳ ಸಾರ್ವಜನಿಕ ಬಳಕೆಗೂ ಮುನ್ನವೇ ಹಾಳಾಗಿದೆ, ಅತ್ಯಂತ ಕಳಪೆ ಗುಣಮಟ್ಟದಿಂದ ಕೂಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;	ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆ -3 , 2019-20ನೇ ಸಾಲಿನ ಬ್ಯಾಚ್-1ರಡಿ ವಿಜಯಪುರ ಜಿಲ್ಲೆ ಚಡಚಣ ತಾಲ್ಲೂಕಿನಲ್ಲಿ ಕೈಗೊಳ್ಳಲಾದ ಕಾಮಗಾರಿಗಳು: 1.ಸಾವಳಸಂಗ-ದೇವರನಿಂಬರಗಿ ರಸ್ತೆ ಒಟ್ಟು 12.22 ಕಿ.ಮೀ ಉದ್ದವಿದ್ದು (ಸಾವಳಸಂಗ 0.00 ದಿಂದ 2.90 ಕಿ.ಮೀ, 6.51 ರಿಂದ 10.54, 10.54 ದಿಂದ 11.91 ಜಿಲ್ಲಾ ಮುಖ್ಯ ರಸ್ತೆ ಹಾಗೂ ಜಿಗಜೆಣಗಿ ಗ್ರಾಮ ವ್ಯಾಪ್ತಿ ರಸ್ತೆ ಹಾಗೂ 11.91 ದಿಂದ 17.20 ದೇ.ನಿಂಬರಗಿ). 2. ವಿಜಯಪುರ ಜಿಲ್ಲೆ . ವಿಜಯಪುರ ತಾಲ್ಲೂಕಿನ ಜುಮನಾಳ ಖತಿಜಾಪುರ ರಸ್ತೆ ಒಟ್ಟು 5.40 ಕಿ.ಮೀ ಉದ್ದವಿದ್ದು (0.00 ದಿಂದ 5.40 ಕಿ.ಮೀ). ಈ ಕಾಮಗಾರಿಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡಗಳನುಸಾರ ಮೂರು ಹಂತದ ಗುಣನಿಯಂತ್ರಣ ಪರೀಕ್ಷೆಗಳನ್ನು ಮಾಡಿ ಖಾತ್ರಿ ಪಡಿಸಿಕೊಂಡು ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ರಸ್ತೆಯ ಸುಧಾರಣೆ ಕಾಮಗಾರಿಯನ್ನು ಕೈಗೊಳ್ಳಲಾಗಿದೆ. ರಸ್ತೆಯ ನಿರ್ಮಾಣ ಗುಣಮಟ್ಟದಲ್ಲಿ ಯಾವುದೇ ಲೋಪವಾಗಿರುವುದಿಲ್ಲ. ರಸ್ತೆಯ ನಿರ್ಮಾಣ ಸಂದರ್ಭದಲ್ಲಿ ರಾಷ್ಟ್ರೀಯ ಹಾಗೂ ರಾಜ್ಯ ಗುಣನಿಯಂತ್ರಣ ಮಾನಿಟರ್ ಗಳು ಮತ್ತು ಮೇಲಾಧಿಕಾರಿಗಳು ಪರಿಶೀಲಿಸಿ ಷರಾ ನೀಡಿರುತ್ತಾರೆ.
ಇ	ಹಾಗಿದ್ದಲ್ಲಿ, ಸಾರ್ವಜನಿಕ ಹಣವನ್ನು ದುರುಪಯೋಗಪಡಿಸಿಕೊಂಡ ಅಧಿಕಾರಿಗಳು ಮತ್ತು ಗುತ್ತಿಗೆದಾರರ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು;	ಸದರಿ ಕಾಮಗಾರಿಗಳನ್ನು ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯ ಮಾನದಂಡಗಳನುಸಾರ ಗುಣನಿಯಂತ್ರಣಕ್ಕೆ ಲೋಪವಿಲ್ಲದಂತೆ ಕೈಗೊಳ್ಳಲಾಗುತ್ತಿರುವ ಕಾರಣ ಯಾವುದೇ ರೀತಿಯಾಗಿ ಸಾರ್ವಜನಿಕ ಹಣ ದುರುಪಯೋಗವಾಗಿರುವುದಿಲ್ಲ.
	ಎರಡು ಕಾಮಗಾರಿಗಳ ಗುತ್ತಿಗೆ ಪಡೆದ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಗುತ್ತಿಗೆದಾರರಿಗೆ ಕಾಮಗಾರಿಯ ಮೊತ್ತವನ್ನು ಪಾವತಿಸುವ ಮುನ್ನ ಇಲಾಖೆಯಿಂದ (Third Party	ಎರಡು ಕಾಮಗಾರಿಗಳ ಗುತ್ತಿಗೆ ಪಡೆದ ಗುತ್ತಿಗೆದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ

ಈ	Inspection) ಮೂರನೇ ವ್ಯಕ್ತಿಯಿಂದ ಕಾಮಗಾರಿಗಳ ಗುಣಮಟ್ಟ ಪರೀಕ್ಷೆ ನಡೆಸಲಾಗಿದೆಯೇ? (ನಡೆಸಿದ್ದಲ್ಲಿ, ರಸ್ತೆಗಳಿಗೆ ಸಂಬಂಧಿಸಿದ ಅಂದಾಜು ಪತ್ರಿಕೆ ಪ್ರತಿ, Third Party Inspection ವರದಿ, ಗುತ್ತಿಗೆದಾರರಿಗೆ ಹಣ ಪಾವತಿ ಮಾಡಿರುವ ಕುರಿತು ವಿವರವಾದ ಮಾಹಿತಿಗಳನ್ನು ನೀಡುವುದು).	ನಂತರ ಗುತ್ತಿಗೆದಾರರಿಗೆ ಕಾಮಗಾರಿಯ ಮೊತ್ತವನ್ನು ಪಾವತಿಸುವ ಮುನ್ನ ಇಲಾಖೆಯಿಂದ (Third Party Inspection) ಮೂರನೇ ವ್ಯಕ್ತಿಯಿಂದ ಕಾಮಗಾರಿಗಳ ಗುಣಮಟ್ಟ ಪರೀಕ್ಷೆ ನಡೆಸಿರುವ ಬಗ್ಗೆ ವಿವರವನ್ನು **ಅನುಬಂಧ-2** ರಲ್ಲಿ ಒದಗಿಸಿದೆ.

ಸಂಖ್ಯೆ:ಗ್ರಾಅಪ 137 ಯೋಇಉಮಾ 2021

(ಕೆ.ಎಸ್.ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ ಇಲಾಖೆ

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:623

ಅನುಬಂಧ – 01

2018-19 ರಿಂದ 2020-21ರ ವರೆಗೆ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಅನುಷ್ಠಾನಿಸಲಾದ ಪ್ರಮುಖ ಕಾರ್ಯಕ್ರಮಗಳಡಿ ಬಿಡುಗಡೆ ಮಾಡಲಾದ ಅನುದಾನದ ವಿವರ.

ರೂ.ಲಕ್ಷಗಳಲ್ಲಿ

ಕ್ರ. ಸಂ	ಯೋಜನೆ	ಬಿಡುಗಡೆಯಾದ ಅನುದಾನ		
		2018-19	2019-20	2020-21
1	ಮಹಾತ್ಮಾ ಗಾಂಧಿ ನರೇಗಾ ಯೋಜನೆ	1552.38	2637.48	1735.17
2	ಸ್ವಚ್ಛ ಭಾರತ ಅಭಿಯಾನ	1330.60	150.52	593.01
3	ಗ್ರಾಮೀಣ ನೀರು ಸರಬರಾಜು (NRDWP)	2764.61	1214.41	890.32
4	ಸಿ.ಎಂ.ಜಿ.ಎಸ್.ವೈ	87.96	111.00	56.41
5	ಪಿ.ಎಂ.ಜಿ.ಎಸ್.ವೈ	0.00	0.00	598.77
6	ಪಿ.ಎಮ್.ಜಿ.ಎಸ್.ವಾಯ್. (ರಸ್ತೆಗಳ ನಿರ್ವಹಣೆ)	4.22	0.00	5.10
7	ನಮ್ಮ ಗ್ರಾಮ ನಮ್ಮ ರಸ್ತೆ (ಎಸ್.ಡಿ.ಪಿ./ಎಸ್.ಸಿ.ಪಿ.ಟಿ.ಎಸ್.ಪಿ. ಒಳಗೊಂಡಂತೆ)	400.16	250.51	142.81
8	RIDF ನಬಾರ್ಡ್	0.00	0.00	200.00
9	ಗ್ರಾಮ ವಿಕಾಸ	ಸದರಿ ಮತಕ್ಷೇತ್ರಕ್ಕೆ ನಿಗಧಿ ಪಡಿಸಿದ ರೂ.375.00ಲಕ್ಷಗಳ ಅನುದಾನ ಪೂರ್ಣ ಬಿಡುಗಡೆ ಮಾಡಲಾಗಿದೆ.		
10	ಮುಖ್ಯಮಂತ್ರಿ ಗ್ರಾಮ ವಿಕಾಸ	177.92	122.00	92.80
11	ಕೆರೆಗಳ ಪುನರುಜ್ಜೀವನ ಹಾಗೂ ಕೆರೆಗಳ ಪುನಶ್ಚೇತನ ಕಾರ್ಯಕ್ರಮ	115.28	131.20	206.71
12	ಹಣಕಾಸು ಆಯೋಗದ ಅನುದಾನ	516.28	781.60	681.91
13	ಜಿಲ್ಲಾ ಪಂಚಾಯಿತಿಯ ಅಭಿವೃದ್ಧಿ ಅನುದಾನ	46.30	68.20	78.40
14	ತಾಲ್ಲೂಕು ಪಂಚಾಯಿತಿಯ ಅಭಿವೃದ್ಧಿ ಅನುದಾನ	21.80	64.60	182.21
15	3054 ಟಾಸ್ಕ್ ಫೋರ್ಸ್	10.00	77.32	0.00

ವಿಧಾನ ಸಭೆ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 623

ಅನುಬಂಧ-2

ರೂ.ಲಕ್ಷಗಳಲ್ಲಿ

ಕ್ರ. ಸಂ.	ಕಾಮಗಾರಿ	ಟೆಂಡರ ಪ್ಯಾಕೇಜ್ ಸಂ	ರಸ್ತೆಯ ಒಟ್ಟು ಉದ್ದ (ಕಿ.ಮೀ ಗಳಲ್ಲಿ)	ಅಂದಾಜು ಪತ್ರಿಕೆ ವಿವರ				3ನೇ ಹಂತದ ಗುಣಮಟ್ಟ ಪರೀಕ್ಷೆಗಳ ವಿವರ			ಇಲ್ಲಿಯ ವರೆಗೆ ಹಣ ಪಾವತಿಸಿದ ವಿವರ	ಷರಾ
				ಸುಧಾರಣೆ ಕಾಮಗಾರಿ ಅಂದಾಜು ಮೊತ್ತ	5 ವರ್ಷಗಳ ನಿರ್ವಹಣೆ ಮೊತ್ತ	6ನೇ ವರ್ಷದ ಮರು ಡಾಂಬರೀಕರಣ	ಒಟ್ಟು	ಗುಣಮಟ್ಟ ಪರೀಕ್ಷೆ ಕೈಗೊಂಡ 3ನೇ ಹಂತದ ಅಧಿಕಾರಿ	ಪರಿವೀಕ್ಷಣೆ ದಿನಾಂಕ	ಪರೀಕ್ಷೆ ಫಲಿ ತಾಂಶ ಷರಾ		
1	ವಿಜಯಪುರ ಜಿಲ್ಲೆ ಚಡಚಣ ತಾಲೂಕಿನಲ್ಲಿ ಕೈಗೊಳ್ಳಲಾದ ಸಾವಳಸಂಗ-ದೇವರನಿಂಬರಗಿ ರಸ್ತೆ ಸುಧಾರಣೆ	ಕೆನ್-07-06	12.22	785.86	73.67	143.45	1003	ಶ್ರೀ ಪ್ರಿ.ಜಿ.ಪರ್ಶಿ ಎಸ್‌ಕ್ಯೂಎಮ್	24.12.2020	ಗುಣಮಟ್ಟ ತೃಪ್ತಿಕರ ವಾಗಿದೆ	733.67	ಸುಧಾರಣೆ ಕಾಮಗಾರಿ ಪೂರ್ಣಗೊಂಡಿದ್ದು ಅಂತಿಮ ಬಿಲ್ಲನ್ನು ಪಾವತಿಸಬೇಕಿದೆ 5 ವರ್ಷ ನಿರ್ವಹಣೆ ಹಾಗೂ ನಂತರದ ಮರುಡಾಂಬರೀಕಣ ಕೈಗೊಳ್ಳಬೇಕಿದೆ.
								ಶ್ರೀ ಪಾಂಡಪ್ಪ ಬಿ ವಾಸನವ ಎಸ್‌ಕ್ಯೂಎಮ್	28.12.2020	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಎಸ್.ಉಗ್ರಯ್ಯ ಎಸ್‌ಕ್ಯೂಎಮ್	26.01.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಎಚ್.ಆರ್.ಪುಟ್ಟಪ್ಪ ಎಸ್‌ಕ್ಯೂಎಮ್	29.01.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಎನ್.ಸಿದ್ದಾಮಪ್ಪ ಎಸ್‌ಕ್ಯೂಎಮ್	27.02.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಅಶೋಕಕುಮಾರ ಪಾಟೀಲ ಎಸ್‌ಕ್ಯೂಎಮ್	30.05.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ರಾಜೇಂದ್ರ ಚಿಂಚೋಳಿಕರ್ ಎಸ್‌ಕ್ಯೂಎಮ್	30.06.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಆರ್.ಗುರಲಿಂಗಸ್ವಾಮಿ ಎಸ್‌ಕ್ಯೂಎಮ್	25.11.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಪ್ರಭಾಕರ ಹಮ್ಮಿಗಿ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು ದಿ:22.01.2021 ಹಾಗೂ 27.09.2021				
								ಶ್ರೀ ಸಿ.ಕೆ.ಮಲ್ಲಪ್ಪ ರಾಜ್ಯ ಗುಣ ಸಮನ್ವಯಾಧಿಕಾರಿಗಳು ದಿ:08.07.2021				
2	ವಿಜಯಪುರ ಜಿಲ್ಲೆ ವಿಜಯಪುರ ತಾಲೂಕಿನ ಜುಮನಾಳ-ಖತಿಜಾಪುರ ರಸ್ತೆ ಸುಧಾರಣೆ	ಕೆನ್-07-02	5.40	368.13	33.66	68.87	470.66	ಶ್ರೀ ಪ್ರಭಾಕರ ಹಮ್ಮಿಗಿ ಮುಖ್ಯ ಕಾರ್ಯಾಚರಣೆ ಅಧಿಕಾರಿಗಳು ದಿ:22.01.2021			316.95	ಸುಧಾರಣೆ ಕಾಮಗಾರಿ ಪೂರ್ಣಗೊಂಡಿದ್ದು ಅಂತಿಮ ಬಿಲ್ಲ ಪಾವತಿಸಬೇಕಿದೆ. 5 ವರ್ಷ ನಿರ್ವಹಣೆ ಹಾಗೂ ನಂತರದ ಮರುಡಾಂಬರೀಕಣ ಕೈಗೊಳ್ಳಬೇಕಿದೆ.
								ಶ್ರೀ ಎಚ್.ಆರ್.ಪುಟ್ಟಪ್ಪ ಎಸ್‌ಕ್ಯೂಎಮ್	28.01.2021	ಗುಣಮಟ್ಟ ತೃಪ್ತಿಕರ ವಾಗಿದೆ		
								ಶ್ರೀ ಅಶೋಕಕುಮಾರ ಪಾಟೀಲ ಎಸ್‌ಕ್ಯೂಎಮ್	30.05.2021	ಗುಣಮಟ್ಟ ತೃಪ್ತಿಕರ ವಾಗಿವ		
								ಶ್ರೀ ಎಸ್.ಜಿ.ಲೋಕುರ ಅಧೀಕ್ಷಕ ಇಂಜನೀಯರರು ಪಂಚಾಯತ್ ರಾಜ್ ಇಂಜನೀಯರಿಂಗ್ ಬೆಳಗಾವಿ ದಿ:22.01.2021				

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 624

ಸದಸ್ಯರ ಹೆಸರು : ಶ್ರೀ ದೇವಾನಂದ್ ಫುಲಸಿಂಗ್ ಚವಾಣ್

ಉತ್ತರಿಸುವ ದಿನಾಂಕ : 15.12.2021.

ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.

ಕ್ರ. ಸಂ.	ಪ್ರಶ್ನೆ	ಉತ್ತರ
ಅ)	ವಿಜಯಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಸರ್ಕಾರ ಕೈಗೊಂಡ ಯೋಜನೆಗಳಾವುವು; (ಕಾರ್ಯಕ್ರಮಗಳ ವಿವರ ಒದಗಿಸುವುದು)	ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶ ಕಲ್ಪಿಸಲು ಈ ಕೆಳಕಂಡ ಯೋಜನೆಗಳನ್ನು ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿವಿಧ ನಿಗಮಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ. 1. ಉದ್ಯಮಶೀಲತಾ ಯೋಜನೆ (ಐ.ಎಸ್.ಬಿ) (ಬ್ಯಾಂಕುಗಳ ಸಹಯೋಗದಲ್ಲಿ). 2. ಸ್ವಯಂ ಉದ್ಯೋಗ / ನೇರಸಾಲ 3. ಗಂಗಾ ಕಲ್ಯಾಣ ಯೋಜನೆ (ವೈಯಕ್ತಿಕ ನೀರಾವರಿ ಕೊಳವೆಬಾವಿ) 4. ಭೂ ಒಡೆತನ ಯೋಜನೆ. 5. ಮೈಕ್ರೊ ಕ್ರೆಡಿಟ್ (ಪ್ರೇರಣಾ). 6. ಅರಣ್ಯ ಆಧಾರಿತ ಆದಿವಾಸಿ ಮತ್ತು ಅಲೆಮಾರಿ, ಅರೆಅಲೆಮಾರಿ ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಜನಾಂಗದವರಿಗೆ ವಿವಿಧ ಯೋಜನೆಗಳು. 7. ಕಾಫಿ ಬೆಳೆಗಾರರ ಸಮಗ್ರ ಅಭಿವೃದ್ಧಿ ಯೋಜನೆ. ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧ**ದಲ್ಲಿ ನೀಡಿದೆ.
ಆ)	ಸಮಾಜ ಕಲ್ಯಾಣ ಇಲಾಖೆ ಅಧೀನದಲ್ಲಿ ಬರುವ ವಿವಿಧ ಅಭಿವೃದ್ಧಿ ನಿಗಮಗಳಿಂದ ಪ್ರತಿ ವರ್ಷ ನಾಗಠಾಣ ಮತಕ್ಷೇತ್ರಕ್ಕೆ ಪ್ರತಿ ವರ್ಷ ಗಂಗಾ ಕಲ್ಯಾಣ, ಉದ್ಯಮ ಶೀಲತಾ ಸ್ವಯಂ ಉದ್ಯೋಗ ಹಾಗೂ ನೇರಸಾಲ ಯೋಜನೆಯಡಿ ನೀಡಲಾಗಿರುವ ಗುರಿಗಳು ಕಡಿಮೆಯಾಗಿದ್ದು, ಪ್ರಸಕ್ತ ವರ್ಷ ಗುರಿಗಳನ್ನು ಹೆಚ್ಚಿಸುವ ಪ್ರಸ್ತಾವ ಸರ್ಕಾರದ ಮುಂದಿದೆಯೇ;	ಇಲ್ಲ
ಇ)	ಹಾಗಿದ್ದಲ್ಲಿ ಯಾವ್ಯಾವ ನಿಗಮದಡಿಯಲ್ಲಿ ಎಷ್ಟು ಗುರಿಗಳನ್ನು ಹೆಚ್ಚಿಸಲಾಗುವುದು.	ಉದ್ಭವಿಸುವುದಿಲ್ಲ.
ಈ)	ವಿಜಯಪುರ ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿಯ ಜನರನ್ನು ಕ್ರೈಸ್ತ ಮಿಷನರಿಗಳು ಬಲವಂತವಾಗಿ ಮತಾಂತರ ಗೊಳಿಸುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಅದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?	ಬಂದಿಲ್ಲ.

ಸಂಖ್ಯೆ: ಸಕಇ 202 ಆರ್‌ಇಐ 2021

(ಕೋಟ ಶ್ರೀನಿವಾಸ ಪೂಜಾರಿ)
ಸಮಾಜ ಕಲ್ಯಾಣ ಹಾಗೂ ಹಿಂದುಳಿದ
ವರ್ಗಗಳ ಕಲ್ಯಾಣ ಸಚಿವರು.

ಅನುಬಂಧ

ಮಾನ್ಯ ವಿಧಾನ ಸಭೆ ಸದಸ್ಯರಾದ ಶ್ರೀ ದೇವಾನಂದ್ ಘುಲಸಿಂಗ್ ಚವಾಣ್

(ನಾಗಠಾಣ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 624ಕ್ಕೆ ಮಾಹಿತಿ.

1. **ಉದ್ಯಮಶೀಲತಾ ಯೋಜನೆ (ಐ.ಎಸ್.ಬಿ) (ಬ್ಯಾಂಕುಗಳ ಸಹಯೋಗದಲ್ಲಿ):**

ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆಯಡಿ ನಗರ ಮತ್ತು ಗ್ರಾಮೀಣ ಪ್ರದೇಶದಲ್ಲಿ ಹಾಪ್‌ಕಾಮ್ಸ್ ಮಾದರಿಯಲ್ಲಿ ಹಣ್ಣು ಮತ್ತು ತರಕಾರಿ ಮಾರಾಟ ಮಾಡಲು ಮಳಿಗೆಗಳನ್ನು ಸ್ಥಾಪಿಸಲು ಮತ್ತು ಇತರ ಉದ್ದೇಶಗಳಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಘಟಕ ವೆಚ್ಚದ ಶೇ.50ರಷ್ಟು ಅಥವಾ ಗರಿಷ್ಠ ಮಿತಿ ರೂ.2.00ಲಕ್ಷದವರೆಗೆ ಸಹಾಯಧನ ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ. ವಾಹನ ಉದ್ದೇಶಗಳಿಗೆ ಘಟಕ ವೆಚ್ಚದ ಶೇ.50ರಷ್ಟು ಗರಿಷ್ಟ ಮಿತಿ 3.50ಲಕ್ಷ ಸಹಾಯಧನ ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.

2. **ಸ್ವಯಂ ಉದ್ಯೋಗ / ನೇರಸಾಲ:**

ಸ್ವಯಂ ಉದ್ಯೋಗ ಯೋಜನೆಯಡಿ ಪರಿಶಿಷ್ಟ ಜಾತಿ ಯುವಕ ಯುವತಿಯರಿಗೆ ಸಣ್ಣ ಉದ್ದಿಮೆ ಪ್ರಾರಂಭಿಸಲು ಹಣ್ಣು ಮತ್ತು ತರಕಾರಿಗಳನ್ನು ತಳ್ಳುವಗಾಡಿಯ ಮೂಲಕ ಮಾರಾಟ ಮಾಡಲು, ಹೈನುಗಾರಿಕೆ ಹಾಗೂ ಇತರೆ ಉದ್ದೇಶಗಳಿಗೆ ಘಟಕ ವೆಚ್ಚ ರೂ.0.50ಲಕ್ಷಗಳಲ್ಲಿ ಸಾಲ ಸೌಲಭ್ಯ ಕಲ್ಪಿಸಲಾಗುವುದು. ಘಟಕ ವೆಚ್ಚದ ಪೈಕಿ ರೂ25000/- ಸಹಾಯಧನ ಹಾಗೂ ರೂ.25000/- ಸಾಲವಾಗಿರುತ್ತದೆ. ಇದನ್ನು ನಿಗಮದಿಂದ ನೀಡಲಾಗುವುದು. ಸಾಲದ ಮೊತ್ತಕ್ಕೆ ಶೇ.4ರಷ್ಟು ವಾರ್ಷಿಕ ಬಡ್ಡಿ ವಿಧಿಸಲಾಗುವುದು. ಮರುಪಾವತ ಅವಧಿ 36 ತಿಂಗಳು.

3. **ಗಂಗಾ ಕಲ್ಯಾಣ ಯೋಜನೆ-ವೈಯಕ್ತಿಕ ನೀರಾವರಿ ಕೊಳವೆಬಾವಿ:**

ಗಂಗಾ ಕಲ್ಯಾಣ ವೈಯಕ್ತಿಕ ನೀರಾವರಿ ಕೊಳವೆಬಾವಿ ಯೋಜನೆಯನ್ನು 1984ರಿಂದ ಅನುಷ್ಠಾನಗೊಳಸಲಾಗುತ್ತಿದೆ. ಈ ಯೋಜನೆಯಡಿ 1೪ ಎಕರೆಯಿಂದ 5.00 ಎಕರೆ ಜಮೀನು ಹೊಂದಿರುವ ಪರಿಶಿಷ್ಟ ಜಾತಿಯ ಸಣ್ಣ ಮತ್ತು ಅತೀ ಸಣ್ಣ ರೈತರ ಜಮೀನಿನಲ್ಲಿ ಕೊಳವೆಬಾವಿ ಕೊರೆಸಿ, ಪಂಪ್‌ಸೆಟ್ ಅಳವಡಿಸಿ ವಿದ್ಯುದ್ಧೀಕರಣಗೊಳಸಿ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ಮಲೆನಾಡು ಪ್ರದೇಶಗಳಾದ ಕೊಡಗು, ದಕ್ಷಿಣ ಕನ್ನಡ, ಉಡುಪಿ, ಕಾರವಾರ, ಚಿಕ್ಕಮಗಳೂರು, ಶಿವಮೊಗ್ಗ ಮತ್ತು ಹಾಸನ ಜಿಲ್ಲೆಗಳಲ್ಲಿ 1.00 ಎಕರೆ ಜಮೀನು ಹೊಂದಿರುವವರಿಗೂ ಸಹ ನೀರಾವರಿ ಸೌಲಭ್ಯ ಒದಗಿಸಲಾಗುತ್ತಿದೆ.

ಈ ಯೋಜನೆಯಡಿ ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು(ಗ್ರಾ), ಬೆಂಗಳೂರು(ನಗರ), ತುಮಕೂರು ಮತ್ತು ರಾಮನಗರ ಜಿಲ್ಲೆಗಳಲ್ಲಿ ಅಂತರ್ಜಲ ಮಟ್ಟ ಕೆಳಗೆ ಕುಸಿದಿರುವುದರಿಂದ ಈ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ 4.50 ಲಕ್ಷಕ್ಕೆ ಹೆಚ್ಚಿಸಲಾಗಿದ್ದು, ಇದರಲ್ಲಿ ರೂ. 4.00 ಲಕ್ಷ ಸಹಾಯಧನವಿದ್ದು, ಉಳಿದ ರೂ. 50,000/- ಅವಧಿಸಾಲವಾಗಿರುತ್ತದೆ. ಇತರೆ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ. 3.50 ಲಕ್ಷ ನಿಗದಿಪಡಿಸಿದ್ದು, ಇದರಲ್ಲಿ ರೂ.3.00ಲಕ್ಷ ಸಹಾಯದನ ಮತ್ತು ರೂ.0.50 ಲಕ್ಷ ಅವಧಿಸಾಲವಾಗಿರುತ್ತದೆ. ಘಟಕ ವೆಚ್ಚದ ಪೈಕಿ ವಿದ್ಯುದ್ಧೀಕರಣಕ್ಕೆ ಘಟಕ ವೆಚ್ಚದ ಸಹಾಯಧನದ ಮಿತಿಯಲ್ಲಿ ಪ್ರತಿ ಕೊಳವೆಬಾವಿಗೆ ರೂ. 50,000/- ಗಳನ್ನು ಸಂಬಂಧಿಸಿದ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು.

4. **ಭೂ ಒಡೆತನ ಯೋಜನೆ:**

ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಭೂರಹಿತ ಕೃಷಿ ಕಾರ್ಮಿಕರ ಕುಟುಂಬದ ಮಹಿಳೆಯರಿಗೆ ಮಾತ್ರ ಈ ಯೋಜನೆಯಡಿ ಸೌಲಭ್ಯವನ್ನು ನೀಡಲಾಗುತ್ತದೆ. ಸರ್ಕಾರದ ಆದೇಶ ಸಂಖ್ಯೆ:ಸಕಇ 148ಎಸ್‌ಡಿಸಿ2017, ಬೆಂಗಳೂರು, ದಿನಾಂಕ:20.04.2017 ರಂತೆ ಘಟಕ ವೆಚ್ಚ ಗರಿಷ್ಟ ರೂ.15.00ಲಕ್ಷ ಇದ್ದು, ಇದರಲ್ಲಿ ಶೇ.50 ಭಾಗ

..2

......ಸಹಾಯಧನ ಹಾಗೂ ಶೇ.50 ಭಾಗ ಸಾಲದ ರೂಪದಲ್ಲಿ ಆರ್ಥಿಕ ನೆರವನ್ನು ನೀಡಲಾಗುವುದು. ರೂ.15.00ಲಕ್ಷ ಘಟಕ ವೆಚ್ಚದ ಮಿತಿಯಲ್ಲಿ ಕನಿಷ್ಠ 2 ಎಕರೆ ಖುಷ್ಕಿ ಅಥವಾ ಕನಿಷ್ಠ 1 ಎಕರೆ ತರಿ/ಭಾಗಾಯ್ತು ಜಮೀನುಗಳನ್ನು ಅಥವಾ ಬಾಗಾಯ್ತು ಅರ್ಧ ಎಕರೆಗೆ(20 ಗುಂಟೆ) ಕಡಿಮೆಯಲ್ಲದಂತೆ ಒದಗಿಸಲಾಗುವುದು. ಫಲಾನುಭವಿಯು ಸಾಲದ ಹಣವನ್ನು 10 ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕು. ಇದಕ್ಕೆ ಬಡ್ಡಿದರ ಶೇ.6 ವಿಧಿಸಲಾಗುತ್ತದೆ. ಜಮೀನನ್ನು ಮಾರಾಟ ಮಾಡುವವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಜನಾಂಗಕ್ಕೆ ಸೇರಿದವರಾಗಿರಬಾರದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ದರ ನಿಗದಿಪಡಿಸುತ್ತದೆ.

ಭೂ ಒಡೆತನ ಯೋಜನೆಯಡಿ ಅವಧಿಸಾಲವನ್ನು ನಿಗಮದ ಷೇರು ಬಂಡವಾಳದಿಂದ ಮತ್ತು ಸಹಾಯಧನವನ್ನು ರಾಜ್ಯ ಸರ್ಕಾರವು ನಿಗಧಿಪಡಿಸಿದ ಅನುದಾನ ದಿಂದ ಭರಿಸಲಾಗುತ್ತಿದೆ. ಈ ಯೋಜನೆಯಡಿ ಫಲಾಪೇಕ್ಷಿಗಳಗೆ ಸೌಲಭ್ಯ ಕಲ್ಪಿಸಲು ವಿಧಾನಸಭಾ ಕ್ಷೇತ್ರವಾರು ಪರಿಶಿಷ್ಟ ಜಾತಿಯ ಜನಸಂಖ್ಯೆ ಆಧಾರದ ಮೇಲೆ ಮತ್ತು ಹಿಂದಿನ ವರ್ಷಗಳಲ್ಲಿ ಹೆಚ್ಚಿನ ಪ್ರಸ್ತಾವನೆಗಳು ಬಂದಿರುವ ಜಿಲ್ಲೆಗಳನ್ನು ಗಮನದಲ್ಲಿಟ್ಟುಕೊಂಡು ಜಿಲ್ಲಾವಾರು ಗುರಿಯನ್ನು ನಿಗದಿಪಡಿಸಲಾಗಿದೆ.

2018-19ನೇ ಸಾಲಿನಿಂದ ಬೆಂಗಳೂರು ನಗರ, ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಗೆ ಸೀಮಿತಗೊಂಡಂತೆ ಈ ಯೋಜನೆಯಡಿ ಘಟಕ ವೆಚ್ಚವನ್ನು ರೂ.15.00ಲಕ್ಷಗಳಂದ ರೂ.20.00ಲಕ್ಷಗಳಗೆ ಹೆಚ್ಚಿಸಲಾಗಿದೆ. ಉಳದ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.15.00ಲಕ್ಷಗಳದ್ದು, ಇದರಲ್ಲಿ ಸಹಾಯಧನ ಮತ್ತು ಅವಧಿಸಾಲ 50:50ರ ಅನುಪಾದಲ್ಲಿರುತ್ತದೆ. ಅವಧಿ ಸಾಲಕ್ಕೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿ ವಿಧಿಸಲಾಗುವುದು. ಸಾಲ ಮತ್ತು ಬಡ್ಡಿಯನ್ನು 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

5. <u>ಮೈಕ್ರೊ ಕ್ರೆಡಿಟ್ (ಪ್ರೇರಣಾ):</u>

ಡಾ:ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮಹಿಳೆಯರ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ **"ಪ್ರೇರಣಾ ಯೋಜನೆ"** ಗಳನ್ನು ಅನುಷ್ಠಾನಗೊಳಸಲು ಉದ್ದೇಶಿಸಿದೆ. ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ಪರಿಶಿಷ್ಟ ಜಾತಿ ನಿರುದ್ಯೋಗಿ ಮಹಿಳೆಯರಿಗೆ ಗುಂಪು ಚಟುವಟಿಕೆಗಳ ಮೂಲಕ ಉತ್ಪಾದನಾ ಚಟುವಟಿಕೆಗಳನ್ನು ಆರಂಭಿಸಿ ಲಾಭಗಳಸಲು ಸ್ವಯಂ ಉದ್ಯೋಗ ಘಟಕಗಳನ್ನು ಆರಂಭಿಸಲು ನಿಗಮದಿಂದ ಸಹಾಯದನ ಮತ್ತು ಸಾಲ ನೀಡಲು ಅವಕಾಶ ಮಾಡಿಕೊಡಲಾಗುತ್ತದೆ. ಆಯ್ಕೆಯಾದ ಕನಿಷ್ಟ 10 ಮಹಿಳೆಯರ ಸ್ವಸಹಾಯ ಗುಂಪನ್ನು ರಚಿಸುವುದು/ಹಾಲಿ ಅಸ್ಥಿತ್ವದಲ್ಲಿರುವ ಮಹಿಳಾ ಸ್ವಸಹಾಯ ಗುಂಪಿಗೆ ಆರ್ಥಿಕ ಬೆಂಬಲವನ್ನು ನೀಡಲಾಗುವುದು. ಜಂಟಿ ಖಾತೆಯನ್ನು ಆರಂಭಿಸಿ ಉತ್ತಮ ಆದಾಯ ಗಳಸುವ, ಉತ್ಪಾದನಾ/ಸೇವಾಘಟಕ ಆರಂಭಿಸಲು ರೂ.2.50ಲಕ್ಷ ಘಟಕವೆಚ್ಚವನ್ನು ಮಂಜೂರು ಮಾಡಲಾಗುವುದು. ಪ್ರತಿ ಸದಸ್ಯರಿಗೆ ರೂ.25,000/-ದಂತೆ ಹಣವನ್ನು ನಿಗಮ ಭರಿಸುತ್ತದೆ. (ರೂ.15,000/- ಸಹಾಯಧನ ಮತ್ತು ರೂ.10,000/- ಬೀಜಧನ ಸಾಲ). ವ್ಯಾಪಾರ/ ಉತ್ಪಾದನೆ/ಸೇವಾ ಚಟುವಟಿಕೆಗಳಲ್ಲಿ ಗಳಸುವ ಆದಾಯವನ್ನು ಸಮಾನವಾಗಿ ಹಂಚಿಕೆ ಮಾಡಿಕೊಂಡು ಆರ್ಥಿಕ ಸ್ವಾವಲಂಬನೆಯನ್ನು ಹೊಂದುವುದು ಯೋಜನೆಯ ಮೂಲ ಉದ್ದೇಶವಾಗಿರುತ್ತದೆ.

6. **<u>ಅರಣ್ಯ ಆಧಾರಿತ ಆದಿವಾಸಿ ಮತ್ತು ಅಲೆಮಾರಿ, ಅರೆಅಲೆಮಾರಿ, ಸೂಕ್ಷ್ಮ ಮತ್ತು ಅತಿಸೂಕ್ಷ್ಮ ಜನಾಂಗದವರಿಗಾಗಿ ವಿವಿಧ ಯೋಜನೆಗಳನ್ನು ಅನುಷ್ಠಾನಗೊಳಸಲಾಗುತ್ತಿದೆ.</u>**

- ಸ್ವಯಂ ಉದ್ಯೋಗ ಯೋಜನೆಯಡಿ ಸಣ್ಣ ಪ್ರಮಾಣದ ವ್ಯಾಪಾರಕ್ಕಾಗಿ ಘಟಕವೆಚ್ಚ ರೂ.50,000/-ಗಳಾಗಿದ್ದು, ಇದರಲ್ಲಿ ಶೇ.50ರಷ್ಟು ಸಹಾಯಧನ ಮತ್ತು ಶೇ.50ರಷ್ಟು ನಿಗಮದ ಸಾಲವಾಗಿರುತ್ತದೆ.

- ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಟ ರೂ.2.00 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚೆದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.
- ಸ್ವಯಂ ಉದ್ಯೋಗ ಉದ್ಯಮಶೀಲತಾ ಅಭಿವೃದ್ಧಿ ಯೋಜನೆಯಡಿ ಪ್ರತಿ ಫಲಾಪೇಕ್ಷಿಗೆ ಗರಿಷ್ಟ ರೂ.3.50 ಲಕ್ಷಗಳ ಮಿತಿಗೆ ಒಳಪಟ್ಟಂತೆ ಘಟಕ ವೆಚ್ಚೆದ ಶೇ.70% ರಷ್ಟು ಹಣವನ್ನು ಸಹಾಯಧನವನ್ನಾಗಿ ನೀಡಲಾಗುವುದು. ಘಟಕವೆಚ್ಚದ ಉಳಿದ ಭಾಗ ಬ್ಯಾಂಕ್‌ಸಾಲವಾಗಿರುತ್ತದೆ.
- ಈ ಜನಾಂಗದವರಿಗಾಗಿ **ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ 'ಪ್ರೇರಣಾ ಯೋಜನೆಯನ್ನು ಅನುಷ್ಠಾನಗೊಳಸಲಾಗುತ್ತಿದೆ. ಈ ಜನಾಂಗದ ನಿರುದ್ಯೋಗಿ ಮಹಿಳೆಯರು ಲಾಭಗಳಸುವಂತಹ ಸಣ್ಣ ಪ್ರಮಾಣದ ಸ್ವ-ಉದ್ಯೋಗ ಚಟುವಟಿಕೆಗಳನ್ನು ಪ್ರಾರಂಭಿಸಲು ಈ ಯೋಜನೆಯಡಿ ಆರ್ಥಿಕ ನೆರವನ್ನು ಕಲ್ಪಿಸಲಾಗುತ್ತದೆ.** ಘಟಕ ವೆಚ್ಚ ಪ್ರತಿ ಸಂಘಕ್ಕೆ ಕನಿಷ್ಠ ರೂ.2.50 ಲಕ್ಷ (ಸಂಘದ ಪ್ರತಿ ಸದಸ್ಯರಿಗೆ ಸಹಾಯಧನ ರೂ.0.15 ಲಕ್ಷ ಮತ್ತು ಸಾಲ ರೂ.0.10 ಲಕ್ಷ, ಒಟ್ಟು ರೂ.0.25 ಲಕ್ಷ) ಗಳಾಗಿರುತ್ತದೆ.

7. ಕಾಫಿ ಬೆಳೆಯ ಸಮಗ್ರ ಅಭಿವೃದ್ಧಿ ಯೋಜನೆ:

- ಚಾಮರಾಜನಗರ ಜಿಲ್ಲೆಯ ಬಿಳಗಿರಿರಂಗನಬೆಟ್ಟ, ಕೊಡಗು ಜಿಲ್ಲೆಯ, ವಿರಾಜಪೇಟೆ ತಾಲ್ಲೂಕು ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನಲ್ಲಿ ಆದಿವಾಸಿ ಸಮುದಾಯದವರು ಬೆಳೆಯುತ್ತಿರುವ ಕಾಫಿ ಮತ್ತು ಕರಿಮೆಣಸು ಬೆಳೆಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದ ಕಾಫಿ ಮಂಡಳಿಯ ಸಹಯೋಗದೊಂದಿಗೆ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಸಲಾಗುತ್ತಿದೆ.
